# ನಜರೆನಿನ ಸಭೆ

# ನಜರೆನ್ ಮೂಲ ತತ್ವಗಳು

ನಾವು ಯಾರು - ನಾವು ಏನನ್ನು ನಂಬುತ್ತೇವೆ

(ಅನುಮತಿಯ ಪತ್ರ)

ಸಾಮಾನ್ಯ ಮೇಲ್ವಿಚಾರಕರ ಮಂಡಳಿಯಿಂದ ಪ್ರಾಯೋಜಿತವಾಗಿದೆ

ನಜರೆನಿನ ಸಭೆ

SKU 237-0000-36-392-3 REV160914

# ವಿಷಯ ಕ್ರಮಣಿಕೆ

ನಜರೆನಿನ ಮೂಲತತ್ವಗಳಿಗೆ ಸ್ವಾಗತ

ನಮ್ಮ ವೆಸ್ಲಿಯ- ಪರಿಶುದ್ದತೆಯ ಪರಂಪರೆ

ನಮ್ಮ ಜಾಗತಿಕ ಸಭೆ

ನಮ್ಮ ಮೂಲ ಮೌಲ್ಯಗಳು

ನಮ್ಮ ಜೀವನ ದ್ಯೆಯ

ನಮ್ಮ ನಜರೆನಿನ ಗುಣಗಳು

ನಮ್ಮ ವೆಸ್ಲಿಯನ್ ನ ವೇದಾಂತ

ನಮ್ಮ ನಂಬಿಕೆಯ ಸಾಹಿತ್ಯ ಲೇಖನ

ನಮ್ಮ ಸಭೆಯ ಧರ್ಮೋಪದೇಶಗಳು

ನಮ್ಮ ಕಾರ್ಯಭಾರ

ಸಭೆ- ಸ್ಥಳೀಯ, ತಾಲೂಕು ಹಾಗೂ ಸಾಮಾನ್ಯ ಸಭೆ

ಸಂಪರ್ಕ ಹೊಂದಿರುವ ಸಭೆ



“ದೇವರ ಸಭೆಯು ಭೂಲೋಕದಲ್ಲಿ ಹಾಗು ಪರಲೊಕದಲ್ಲಿ ಉನ್ನತವಾದ ರೀತಿಯ ಸಮೂಹದಲ್ಲಿ, ಭೊಧನೆಯಲ್ಲಿ ಮತ್ತು ಆರಾಧನೆಯಲ್ಲಿ, ದೇವರನ್ನು ಪ್ರತಿನಿಧಿಸುತ್ತದೆ ಹಾಗೂ ಪ್ರತಿಯೊಬ್ಬ ವಿಶ್ವಾಸಿಗೂ ಆತನ ಮಗನ ಪ್ರತಿರೂಪಕ್ಕೆ ಬದಲಾಗಲು ಸಹಾಯ ಮಾಡುತ್ತದೆ.”

ಫಿನೆಹಾಸ್ ಎಫ್ ಬ್ರಿಸೆ

ನಜರೆನ್ ಸಭೆಯ ಮೊದಲ ಮೇಲ್ವಿಚಾರಕರು

# ನಜರೆನಿನ ಮೂಲತತ್ವಗಳಿಗೆ ಸ್ವಾಗತ

ನಜರೆನಿನ ಹೊಸ ಪೀಳಿಗೆಯು ಸಭೆಯ ಭೋಧನೆಗಳು, ಚರಿತ್ರೆ, ತತ್ವಭೋಧನೆ, ಜೀವನ ಧ್ಯೆಯಗಳು, ಹಣಕಾಸು ಮತ್ತು ಮೂಲತತ್ವಗಳ ಸ್ವಭಾವಗಳನ್ನು ಒಂದು ಸಂಕ್ಷಿಪ್ತವಾದ ಮತ್ತು ಸುಲಭವಾಗಿ ಸಿಗಬಹುದಾದ ಪ್ರಕಾಶನದಲ್ಲಿ- ಸುಲಭವಾದ ಭಾಷೆಯಲ್ಲಿ ಲಭಿಸುವಂತೆ ಮಾಡಲು ಮನವಿಯನ್ನು ಸಲ್ಲಿಸಿರುತ್ತಾರೆ.

*ನಜರೆನಿನ ಮೂಲತತ್ವಗಳು* ಸಣ್ಣ ಬರಹಗಳ ಒಂದು ಸಂಗ್ರಹವಾಗಿದ್ದು ನಜರೆನಿನ ಸಭೆಯು ಯಾಕೆ ಅಸ್ತಿತ್ವದಲ್ಲಿದೆ: ನಾವು ಯಾರು ಮತ್ತು ನಾವು ಏನನ್ನೂ ನಂಬುತ್ತೇವೆ ಎಂಬುದನ್ನು ವಿವರಿಸುತ್ತದೆ. ಈ ಪ್ರಕಶಾನವು ಲೋಕದಲ್ಲಿ ಕ್ರಿಸ್ತನ ಹೋಲಿಕೆಯಲ್ಲಿ ಶಿಷ್ಯರನ್ನಾಗಿ ಮಾಡುವ ಸಭೆಯ ಉದ್ದೇಶವನ್ನು ಹಾಗು ವಾಕ್ಯದ ಪವಿತ್ರತೆಯನ್ನು ಸಾರುವ ಸಭೆಯ ಉದ್ದೇಶವನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.

*ನಜರೆನಿನ ಮೂಲತತ್ವಗಳು* ಅಂತರಜಾಲದಲ್ಲಿಯೂ ಸಹ ಲಭ್ಯವಿದೆ. (www.hdl.org ಮತ್ತು "ನಜರೆನಿನ ಮೂಲತತ್ವಗಳು") ಎಂದು ಹುಡುಕಿರಿ.

ನೀವು ನಜರೆನಿನ ಮೂಲತತ್ವಗಳನ್ನು ಓದಿ ಮತ್ತು ಅಧ್ಯಯನ ಮಾಡುವಾಗ ನಜರೆನ್ ಸಭೆಯ ಬಗ್ಗೆ ಹೆಚ್ಚಿನ ವಿಷಯಗಳನ್ನು ಕಲಿಯುವಿರಿ ಮತ್ತು ಆ ಸಭೆಯು ಕ್ರಿಸ್ತನ ಸುವಾರ್ತೆಯನ್ನು ವಿಧೇಯತೆಯಿಂದ ಲೋಕದಲ್ಲಿ ಹಂಚುವುದಕ್ಕೆ ಹೊಂದಿರುವ ಆಸಕ್ತಿಯನ್ನು ಗಮನಿಸುವಿರಿ

*ಸೂಚನೆ*: ನಜರೆನಿನ ಮೂಲತತ್ವಗಳು ನಜೆರೆನಿನ ಸಭೆಯ ಕೈಪಿಡಿಗೆ ಅನುಭಂದ ಅಥವಾ ಬದಲಾವಣೆಯಲ್ಲ.



# ನಮ್ಮ ವೆಸ್ಲಿಯನ್ – ಪರಿಶುದ್ದತೆಯ ಪರಂಪರೆ

ನಜರೆನ್ ಸಭೆಯು ಕ್ರಿಸ್ತನ ಒಂದೇ, ಪರಿಶುದ್ದ, ಜಾಗತಿಕ ಮತ್ತು ಶಿಷ್ಯತ್ವದ ಸಭೆಯ ಒಂದು ಅಂಗವಾಗಿದೆಯೆಂದು ನಂಬುತ್ತದೆ. ಈ ನಂಬಿಕೆಯಿಂದ ಕ್ರೈಸ್ತಿಯ ಚರಿತ್ರೆಯು ನಮ್ಮ ಸ್ವಂತ ಚರಿತ್ರೆಯೆಂದು ನಂಬುತ್ತದೆ. ಇದರಿಂದ ಎಲ್ಲಾ ಸಮಯಗಳಲ್ಲೂ ಹಳೆಯ ಮತ್ತು ಹೊಸ ಒಡಂಬಡಿಕೆಯಲ್ಲಿ ದಾಖಲಿಸಲ್ಪಟ್ಟಿರುವ ದೇವರ ಮಕ್ಕಳ ಚರಿತ್ರೆಯಲ್ಲಿ ನಾವು ಕೂಡ ಭಾಗಿಯಾಗಿದ್ದೇವೆ. ಪ್ರಪಂಚದೆಲ್ಲೆಡೆ ಇರುವ ಎಲ್ಲಾ ಕ್ರೈಸ್ತಿಯ ಸಭೆಗಳ ಅಭಿಪ್ರಾಯವನ್ನು ಇದರಲ್ಲಿ ಸೇರಿಸಲಾಗಿದೆ. ಕ್ರೈಸ್ತತ್ವದ ಎಲ್ಲಾ ಭಾವನೆಗಳನ್ನು ನಮ್ಮ ಸ್ವಂತ ನಂಬಿಕೆಯಿಂದ ಪಾಠವಾಗಿ ಅಂಗಿಕರಿಸುತ್ತೇವೆ.

ಚರಿತ್ರೆಯ ಸಭೆಯ ರೀತಿಯಲ್ಲಿ ನಾವು ವಾಕ್ಯವನ್ನು ಭೋಧಿಸುತ್ತೇವೆ. ತತ್ವಗಳನ್ನು ಉಪದೇಶಿಸುತ್ತೇವೆ ಮತ್ತು ಶಿಷ್ಯರಿಂದ ಪಾರಂಭವಾದ ಕ್ರಿಸ್ತನ ಹಾಗೆ ಜೀವಿಸುವ ಹಾಗು ಸೇವೆ ಮಾಡುವ ಸೇವೆಯನ್ನು ಮುಂದುವರಿಸುತ್ತೇವೆ. ಎಲ್ಲಾ ಕಡೆ ಇರುವ ವಿಶ್ವಾಸಿಗಳೊಂದಿಗೆ ಮತ್ತು ಎಲ್ಲಾ ಸಮಯದಲ್ಲೂ ಅವರೊಂದಿಗೆ ಸತ್ಯವೇದದ ಕರೆಯಾದ ಪರಿಶುದ್ಧ ಜೀವನ ಮತ್ತು ದೇವರಿಗೆ ಸಂಪೂರ್ಣ ಸಮರ್ಪಣೆಯನ್ನು ಬಯಸುತ್ತೇವೆ. ಇದನ್ನು ಸಂಪೂರ್ಣ ಪರಿಶುದ್ದತೆ ಹಾಗೂ ಈ ಸಿದ್ದಾಂತವನ್ನು ಸಂತೋಷವಾಗಿ ಪ್ರಕತಿಸುವಂತಹವವರಾಗಿದ್ದೇವೆ.

ಕ್ರೈಸ್ತಿಯ ಚರಿತ್ರೆಗೆ ಬಹಳಷ್ಟು ಅಂಗಗಳಿವೆ. ನಾವು ಪ್ರೊಟೆಸ್ಟಂಟ್ ಸುಧಾರಣೆಯೊಂದಿಗೆ ನಮ್ಮ ಪರಂಪರೆಯನ್ನು ಹುಡುಕುತ್ತೇವೆ, ಮತ್ತು ವಿಶೇಷವಾಗಿ 16 ನೇ ಶತಮಾನದ ಇಂಗ್ಲಿಷ್ ಸುಧಾರಣೆಯೊಂದಿಗೆ ಸೇರುತ್ತೇವೆ. ಇದರ ನಂತರ, 18 ನೇ ಶತಮಾನದ ವೆಸ್ಲಿಯವರ ಸುಧಾರಣೆಯೊಂದಿಗೆ ನಮ್ಮ ಚರಿತ್ರೆಯೊಂದಿಗೆ ನಮ್ಮ ಚರಿತ್ರೆಯನ್ನು ಹುಡುಕುತ್ತೇವೆ. ಈ ಸುಧಾರಣೆಯು ಜಾನ್ ಮತ್ತು ಚಾರ್ಲ್ಸ್ ವೆಸ್ಲಿ ಎಂಬ ಇಬ್ಬರೂ

ಸಹೋದರರ ಭೋಧನೆಯಿಂದ ಹೊರಬಂದವು. ಈ ಸಮಯವೂ ಅನೇಕ ಜನರು ಪಾಪದಿಂದ ತಿರುಗಿಕೊಂಡು ಕ್ರೈಸ್ತಿಯ ಸೇವೆಗಾಗಿ ತಮ್ಮನ್ನು ತಾವು ಸಂರ್ಪಿಸಿಕೊಂಡ ಸಮಯವಾಗಿ ಪ್ರಸಿದ್ದವಾಗಿದೆ.

ಈ ಸುಧಾರಣೆಯು ಸಭೆಯ ಸೈದ್ದಾಂತಿಕ ಅಭ್ಯಾಸಗಳನ್ನು ಎದುರಿಸಿತು. ಇದನ್ನು ಈ ರೀತಿಯಲ್ಲಿ ವರ್ಣಿಸಬಹುದು.

- ಸಾಮಾನ್ಯ ಸಭಿಕರು- ಭೋಧಕರು ಅಥವಾ ಸಭಾ ಸೇವಕರಾಗದೆ ಇರುವವರು ಅಂದರೆ ವಿಶ್ವಾಸಿಗಳು ಭೋದಿಸಿದರು.
- ಆರಾಧನೆಯ ಸಮಯದಲ್ಲಿ ದೇವರು ಅವರ ಜೀವನದಲ್ಲಿ ಮಾಡಿದ ಅದ್ಭುತಗಳ ಬಗ್ಗೆ ಸಾಕ್ಷಿಗಳನ್ನು ಸೇರಿಸಲಾಯಿತು.
- ವಿಶ್ವಾಸಿಗಳು ಕ್ರಮಬದ್ದತೆಯ ಜೀವನವನ್ನು ಅನುಸರಿಸುವಂತೆ ಪ್ರೋತ್ಸಾಹಿಸಲಾಯಿತು ಮತ್ತು ಶಿಷ್ಯರಾದವರನ್ನು ಒಬ್ಬರನ್ನೊಬ್ಬರು ಪ್ರೋತ್ಸಾಹಿಸಲು ಚಿಕ್ಕ ಗುಂಪುಗಳಾಗಿ ಸೇರಿಸಲಾಯಿತು.

ಈ ಹೊಸ ಅಭ್ಯಾಸಗಳೊಂದಿಗೆ ವೆಸ್ಲಿಯನ್ ಸುಧಾರಣೆಯು ಮುಖ್ಯವಾದ ತತ್ವಜ್ಞಾನ ಸತ್ಯಗಳನ್ನು ಒತ್ತಿಹೇಳಲಾಯಿತು.

- ನಂಬಿಕೆಯ ಮೂಲಕ ಕೃಪೆಯಿಂದ ನೀತಿನಿರ್ಣಯ
- ಪರಿಶುದ್ದತೆ- ಇದನ್ನು ಕ್ರೈಸ್ತಿಯ ಪರಿಪೂರ್ನತೆಯೆಂದು ಪ್ರಸಿದ್ದಿಯಾಗಿದೆ- ನಂಬಿಕೆಯ ಮೂಲಕ ಕೃಪೆಯಿಂದ ಎಂಬ ಸಿದ್ದಾಂತದ ಹಾಗೆ.
- ಪರಿಶುದ್ದಾತ್ಮನು ವಿಶ್ವಾಸಿಗಳು ಕೃಪೆಯನ್ನು ಪಡೆದಿದ್ದಾರೆ ಎಂಬ ನಂಬಿಕೆಯನ್ನು ದೃಢಪಡಿಸುತ್ತದೆ.

ಈ ಸಂಪೂರ್ಣ ಪರಿಶುದ್ದತೆಯು ಕ್ರೈಸ್ತವ ಲೋಕದ ಚರಿತ್ರೆ ಹಾಗು ತತ್ವಜ್ಞಾನಕ್ಕೆ ಜಾನ್ ವೆಸ್ಲಿಯವರು ನೀಡಿದ ಅಮೂಲ್ಯವಾದ ಕೊಡುಗೆಯಾಗಿದೆ. ದೇವರು ವಿಶ್ವಾಸಿಗೆ ಪರಿಪೂರ್ಣವಾದ ಜೀವನ ನಡೆಸಲು ಆತನು ನಿಡುವ ಈ ಬಹುಮಾನದ ಮೂಲಕ ಸಾಧ್ಯವೆಂದು ಅವರು ನಂಬಿದ್ದರು. ಅವರ ಈ ಭೋದನೆಗಳು ಪ್ರಪಂಚದಲ್ಲೆಡೆ ಹಾಗೂ ಅಮೇರಿಕಾದಲ್ಲೂ ಕೂಡ ಹರಡಿದವು. ಉತ್ತರ ಅಮೇರಿಕಾದಲ್ಲಿ 1784ರಲ್ಲಿ ಮೇಥೋಡಿಸ್ಟ್ ಎಪಿಸ್ಕೋಪಲ್ ಸಭೆಯು ಆಯೋಜಿತವಾಯಿತು. "ಇದು ಆ ಖಂಡವನ್ನು ಸುಧಾರಣೆಗೆ ತರಲು ಮತ್ತು ವಾಕ್ಯದ ಪವಿತ್ರತೆಯನ್ನು ಎಲ್ಲಾ ಭಾಗಗಳಿಗೂ ತಿಳಿಸಲು ಏರ್ಪಾಟಾಯಿತು.

## ಪವಿತ್ರತೆಯಲ್ಲಿ ಐಕ್ಯತೆ

1887 ರಲ್ಲಿ ಯುನೈಟೆಡ್ ಸ್ಟೇಟ್ಸ್ ನ ರೋಡ್ ದ್ವೀಪದಲ್ಲಿ ಫ್ರೆಡ್ ಹಿಲೇರಿ ಯವರು ಪಿಪಲ್ಸ್ ಇವಾಂಜಿಲಿಕಲ್ ಸಭೆಯನ್ನು ಆಯೋಜಿಸಿದರು. 1888 ರಲ್ಲಿ ಲಿನ್ನಲ್ಲಿ ಮಿಷನ್ ಚರ್ಚ್ ಹಿಂಬಾಲಿಸಿತು. 1890 ರಲ್ಲಿ ಈ ಮೇಲಿನ ಎರಡೂ ಕೂಟಗಳು ಮತ್ತು ಇತರೆ ಎಂಟು ಕೂಟಗಳು ಸೇರಿಕೊಂಡು ಸೆಂಟ್ರಲ್ ಇವಾಂಜಿಲಿಕಲ್ ಹೊಲಿನೆಸ್ ಅಸೋಸಿಯೇಷನ್ ನ್ನು ಪ್ರಾರಂಭಿಸಿದರು. 1892 ರಲ್ಲಿ ಅನ್ನಾ ಎಸ್ ಹಾನ್ಸ್ ಕಾಮ್ ರವರು ಮುಂದೆ ನಜರೆನ್ ಸಭೆಯಾಗುವ ಈ ಕೂಟಕ್ಕೆ ಮೊದಲ ಅಭಿಷಕ್ತ ಮಹಿಳಾ ಭೋಧಕರಾದರು

1894 ರಲ್ಲಿ ಮತ್ತು 1895 ರಲ್ಲಿ ನ್ಯೂಯಾರ್ಕ್ ನ ಬ್ರೂಕ್ಲಿನ್ ನಲ್ಲಿ ವಿಲಿಯಂ ಹಾವರ್ಡ್ ಹೂಪಾಲ್ ರವರು ಮೂರು ಪವಿತ್ರತೆಯ ಸಭೆಗಳನ್ನು ಆಯೋಜಿಸಿದರು. ಆ ದಿನಗಳಲ್ಲಿ "ಪೇಂಟಿಕೋಸ್ಟಲ್" ಎಂಬುದು "ಪವಿತ್ರತೆ" ಯ ಪರ್ಯಾಯ ಪದವಾಗಿತ್ತು. ಹಿಲೇರಿ ಮತ್ತು ಹೂಪಾಲ್ ರವರು ತಮ್ಮ ಗುಂಪುಗಳನ್ನು 1896 ರಲ್ಲಿ ಜೊತೆಯಾಗಿ ಸೇರಿಸಿದರು. ಅವರು ಭಾರತದಲ್ಲಿ ಕೆಲಸವನ್ನು ಪ್ರಾರಂಭಿಸಿದರು. (1899) ಮತ್ತು ಕೇಪ್ ವರೆಡ್ (೧೯೦1) ಹಿರಾಮ್ ರೆನೋಲ್ಡ್ ಕೆನಡಾ ದಲ್ಲಿ ಕೂಟಗಳನ್ನು ಆಯೋಜಿಸಿದರು (1902). 1907 ರ ಸಮಯಕ್ಕೆ ಈ ಕೂಟಗಳಿಗೆ ನುವಾ ಸ್ಕೋಟಿ ದಿಂದ ಲೋವದವರೆಗೂ ಗುಂಪುಗಳಿದ್ದವು.

1894ರಲ್ಲಿ ರಾಬರ್ಟ್ ಲೀ ಹ್ಯಾರಿಸ್ ರವರು ಟೆನಿಸಿಯ ಮಿಲಾನ್ ನಲ್ಲಿ ನ್ಯೂ ಟೆಸ್ಟಮೆಂಟ್ ಸಭೆಯನ್ನು ಆಯೋಜಿಸಿದರು. ಮೇರಿ ಲೀ ಕ್ಯಾಗಲ್ ಎಂಬ ಅವರ ವಿಧವೆ ಮಡದಿಯು ಕೆಲಸವನ್ನು ಮುಂದುವರಿಸಿದರು. ಸಿ. ಬಿ. ಜೆರಿಂಗ್ ರವರು 1901 ರಲ್ಲಿ ಟೆಕ್ಸಾಸ್ ನ ವ್ಯಾನ್ ಅಲ್ ಸ್ಟೆನ್ ನಲ್ಲಿ ಮೊದಲ ಸ್ವತಂತ್ರ ಪವಿತ್ರತೆಯ ಸಭೆಯನ್ನು ಪ್ರಾರಂಭಿಸಿದರು. ಈ ಎಲ್ಲಾ ಸಭೆಗಲೂ ಟೆಕ್ಸಾಸ್ ನಲ್ಲಿ 1904 ರಲ್ಲಿ ರೈಸಿಂಗ್ ಸ್ಟಾರ್ ಎಂಬಲ್ಲಿ ಸೇರಿ ಕ್ರಿಸ್ತನ ಪವಿತ್ರತೆಯ ಸಭೆಯನ್ನು ಪ್ರಾರಭಿಸಿದರು. 1908 ರ ವೇಳೆಗೆ ಇದು ಜಾರ್ಜಿಯದಿಂದ ನ್ಯೂ ಮೆಕ್ಸಿಕೋವರೆಗೂ ಹರಡಿಕೊಂಡು ಹೊರಹಾಕಲ್ಪಟ್ಟವರು ಮತ್ತು ಸಹಾಯ ಬೇಕಾದವರಿಗೆ ಸೇವೆ ಸಲ್ಲಿಸಿದರು, ಇವರು ಅನಾಥರು ಮತ್ತು ತಾಯಿಯರು ಮತ್ತು ಕೆಲಸಗಾರರನ್ನು ಭಾರತ ಮತ್ತು ಜಪಾನ್ ನಲ್ಲಿ ಜತೆಗೂಡಿಸಿದರು.

1895 ರಲ್ಲಿ ಫಿನೆಹಾಸ್ ಎಫ್ ಬ್ರಿಸೆ ಮತ್ತು ಜೋಸೆಫ್ ಪಿ ವಿಡ್ನೆ ಯವರು ಸುಮಾರು 100 ಮಂದಿಯೊಂದಿಗೆ ಸೇರಿ ಲಾಸ್ ಎಂಜಿಲಿಸ್ ನಲ್ಲಿ ನಜರೆನ್ ಸಭೆಯನ್ನು ಆಯೋಜಿಸಿದರು. ಕ್ರೈಸ್ತವರು ಕ್ರಿಸ್ತನ ನಂಬಿಕೆಯ ಮೂಲಕ ಪವಿತ್ರರಾದವರು ಕ್ರಿಸ್ತನ ಹೆಜ್ಜೆಜಾಡಿನಲ್ಲಿ ನಡೆದು ಮತ್ತು ಬಡವರಿಗೆ ಕ್ರಿಸ್ತನ ಸುವಾರ್ತೆಯನ್ನು ಸಾರಬೇಕೆಂದು ನಂಬಿದರು. ಅವರು ತಮ್ಮ ಸಮಯವನ್ನು ಮತ್ತು ಹಣವನ್ನು ಕ್ರಿಸ್ತನ ಮಾದರಿಯ ಸೇವೆಯಲ್ಲಿ ಆತ್ಮಗಳ ರಕ್ಷಣೆಗಾಗಿ ಮತ್ತು ಬಡವರ ಸೇವೆಗಾಗಿ ವೆಚ್ಚಮಾಡಿದರು. ನಜರೆನ್ ಸಭೆಯು ಯುನೈಟೆಡ್ ಸ್ಟೇಟ್ಸ್ ನ ಪಶ್ಚಿಮ ತೀರದಲ್ಲಿ ಬಹಳವಾಗಿ ಹರಡಿತು.

ಕೆಲವು ಗುಂಪುಗಳು ಇಲಿಯೋನಿಸ್ ವರೆಗೂ ಕೂಡ ಹಬ್ಬಿದವು. ಅವರು ಭಾರತೀಯ ಸಭೆಗಳನ್ನೂ ಅಂದರೆ ಭಾರತದ ಕೋಲ್ಕತ್ತಾ ನಗರದ ಸಭೆಗಳಿಗೆ ಸಹಾಯ ಮಾಡಿದರು.

1907 ರ ಅಕ್ಟೋಬರ್ ನಲ್ಲಿ ಅಮೇರಿಕಾದ ಪೇಂಟಿಕೋಸ್ಟಲ್ ಸಂಸ್ಥೆಯ ಹಾಗು ನಜರೆನ್ ಸಭೆಯ ಪ್ರತಿನಿಧಿಗಳು ಚಿಕಾಗೋದ ಇಲಿಯೋನಿಸ್ ನಗರದಲ್ಲಿ ಸೇರಿದರು. ಅವರು ಎರಡೂ ಸಭೆಗಳ ವ್ಯ್ಯಸವಾದ ಸಿದ್ಧಾಂತಗಳು, ಆಡಳಿತ, ಮೇಲ್ವಿಚಾರಣೆ ಮತ್ತು ಸಭೆಯ ಹಕ್ಕುಗಳನ್ನು ಸೇರಿಸಿ ಒಂದು ಹೊಸ ಸಭೆಯನ್ನು ಪ್ರಾರಂಭಿಸಿದರು. ಈ ಹೊಸ ಸಭೆಯು ಹೊಸದಾಗಿ ಪ್ರಾರಂಭವಾಗಿರುವ ಸಭೆಗಳನ್ನು ಮತ್ತು ಆಯೋಜಿತ ಸಭೆಗಳನ್ನು ಮೇಲ್ವಿಚಾರಣೆ ಮಾಡುವವರಾಗಿದ್ದರು, ಆದರೂ ಈ ಮೇಲ್ವಿಚಾರಕರು ಆಯೋಜಿತ ಸಭೆಯ ಕೆಲಸ ಕಾರ್ಯಗಳಲ್ಲಿ ಹಿಡಿತ ಸಾಧಿಸುವುದಿಲ್ಲ. ಈ ಕೂಟದಲ್ಲಿ ಹೋಲಿನೆಸ್ ಚರ್ಚ್ ಆಫ್ ಕ್ರೈಸ್ಟ್ ನ ಪ್ರತಿನಿಧಿಗಳು ಕೂಡ ಭಾಗವಹಿಸಿದರು. ಈ ಮೊದಲ ಸಾಮಾನ್ಯ ಸಭೆಯು ಈ ಎರಡೂ ಸಂಸ್ಥೆಗಳ ಹೆಸರುಗಳಿಂದ ಆಯ್ದ ಹೆಸರಾದ ಪೇಂಟಿ ಕೋಸ್ಟಲ್ ಚರ್ಚ್ ಆಫ್ ನಜರೆನ್ ಎಂಬ ಹೆಸರನ್ನು ಆಯ್ಕೆ ಮಾಡಲಾಯಿತು ಮತ್ತು ಬ್ರಿಸೆ ಹಾಗು ರೊನಾಲ್ಡ್ ರವರು ಸಾಮಾನ್ಯ ಮೇಲ್ವಿಚಾರಕರಾಗಿ ನೇಮಕರಾದರು.

1908 ರ ಸೆಪ್ಟೆಂಬರ್ ನಲ್ಲಿ ಹೆಚ್. ಜಿ. ಟ್ರುಂಬೊ ರವರ ನೇತೃತ್ವದ ಮತ್ತೊಂದು ಸಭೆಯು ಪೇಂಟಿಕೋಸ್ಟಲ್ ಚರ್ಚ್ ಆಫ್ ನಜರೆನ್ ಜೊತೆ ಸೇರಿಕೊಂಡಿತು, ನಂತರ ಅಕ್ಟೋಬರ್ 13 ರಲ್ಲಿ ಎರಡನೇಯ ಸಾಮಾನ್ಯ ಸಭೆಯು ಟೆಕ್ಸಾಸ್ ನ ಪೈಲಟ್ ಪಾಯಿಂಟ್ ನಲ್ಲಿ ಹೋಲಿನೆಸ್ ಚರ್ಚ್ ಆಫ್ ಕ್ರೈಸ್ಟ್ ನ ಸಾಮಾನ್ಯ ಸಭೆಯ ಜೊತೆ ನಡೆಯಿತು. ಈ ಕೂಟದಲ್ಲಿ ಎರಡೂ ಸಭೆಗಳೂ ವಿಲೀನವಾದವು.

1898 ರಲ್ಲಿ ಜೆ. ಓ.ಮ್ಯಾಕ್ ಕ್ಲೂ ರಕನ್ ರವರು ಟೆನಿಸಿಯ ನೆಶವೆಲಿ ಯಲ್ಲಿ ಪೇಂಟಿಕೋಸ್ಟಲ್ ಮಿಷನ್ ನ ಆಯೋಜನೆಯನ್ನು ನಡೆಸಿದರು. ಈ ಗುಂಪಿನಲ್ಲಿ ಬೇರೆ ಬೇರೆ ಪ್ರಾಂತ್ಯದ ಪವಿತ್ರತೆಯ ಜನರನ್ನು ಸೇರಿಸಲಾಯಿತು. ಅವರು ಭೋದಕರು ಹಾಗು ಉಪಾಧ್ಯಾಯರನ್ನು ಕ್ಯೂಬಾ, ಗುಟೆಮಾಲಾ, ಮೆಕ್ಸಿಕೋ ಮತ್ತು ಭಾರತಕ್ಕೆ ಕಳುಹಿಸಿದರು. 1906 ರಲ್ಲಿ ಜಾರ್ಜ್ ಶಾರ್ಪ್ ರವರನ್ನು ಸ್ಕಾಟ್ಲೆಂಡ್ ನ ಗ್ಲಾಸ್ಕೋ ದಲ್ಲಿ ತಮ್ಮ ಸಭೆಯಲ್ಲಿ ವೇಸ್ಲಿಯನ್ ಪವಿತ್ರತೆಯ ಸಿದ್ಧಾಂತವನ್ನು ಭೋಧಿಸಿದರ ಕಾರಣ ಅವರನ್ನು ಸಭೆಯಿಂದ ಹೊರಹಾಕಲಾಯಿತು. ಅವರು ಹೊಸ ಸಭೆಯನ್ನು ಪ್ರಾರಂಭಿಸಿದರು ಮತ್ತು 1909 ರಲ್ಲಿ ಪೇಂಟಿಕೋಸ್ಟಲ್ ಚರ್ಚ್ ಆಫ್ ಸ್ಕಾಟ್ಲೆಂಡ್ ಸಭೆಗಳು ಪೇಂಟಿಕೋಸ್ಟಲ್ ಚರ್ಚ್ ಆಫ್ ನಜರೆನ್ ಜೊತೆ ವಿಲೀನವಾದವು.

1919 ರಲ್ಲಿ ತನ್ನ 5 ನೇಯ ಸಾಮಾನ್ಯ ಸಭೆಯಲ್ಲಿ ಸಂಸ್ಥೆಯ ಹೆಸರನ್ನು ನಜರೆನ್ ಸಭೆ ಎಂದು ಬದಲಾಯಿಸಲಾಯಿತು. "ಪೇಂಟಿಕೋಸ್ಟಲ್ " ಎಂಬ ಪದವು 19 ನೇಯ ಶತಮಾನದಲ್ಲಿದ್ದ "ಪವಿತ್ರತೆಯ ಸಿದ್ಧಾಂತ" ವೆಂಬ ಅರ್ಥವನ್ನು ಕಳೆದುಕೊಂಡಿತ್ತು. ಈ ಯೌವನಸ್ಥ ಸಂಸ್ಥೆಯು ಸಂಪೂರ್ಣ ರಕ್ಷಣೆಯ ಸುವಾರ್ತೆಯನ್ನು ಸಾರುವ ತನ್ನ ಮೂಲ ಧ್ಯೆಯವನ್ನು ಮುಂದುವರಿಸಿತು.





# ನಮ್ಮ ಜಾಗತಿಕ ಸಭೆ

ನಜರೆನ್ ಸಭೆಯು ಒಂದು ಜಾಗತಿಕ ಸಭೆಯಾಗಿದೆ.

1915 ರಲ್ಲಿ ಒಂದಾದ ಸಭೆಗಳು ಸಂಸ್ಥೆಗೆ ಜಾಗತಿಕವಾದ ಸ್ವಭಾವವನ್ನು ನೀಡಿದವು. ಆ ಸಮಯದಲ್ಲಿ ಅರ್ಜೆಂಟೀನಾ, ಕೆನಡಾ, ಕೇಪ್ ವೆರ್ದೆ, ಚೀನಾ ಕ್ಯೂಬಾ, ಗುಟೆಮಾಲ, ಭಾರತ, ಜಪಾನ್, ಮೆಕ್ಸಿಕೋ, ಪೆರು, ಸ್ವಾಜಿಲ್ಯಾಂಡ್, ದಿ ಯುನೈಟೆಡ್ ಕಿಂಗ್ಡಮ್ ಮತ್ತು ಯುನೈಟೆಡ್ ಸ್ಟೇಟ್ಸ್ ನಲ್ಲಿ ನಜರೆನ್ ಸಭೆಗಳು ಅಸ್ತಿತ್ವದಲ್ಲಿದ್ದವು. ಈ ಸಭೆಯು ಬಾರ್ಬಡೋಸ್, ಮೊಜಾಂಬಿಕ್, ಪ್ಯಾಲೆಸ್ಟೈನ್, ದಕ್ಷಿಣ ಆಫ್ರಿಕಾ ಸಿರಿಯಾ ಮತ್ತು ಟ್ರಿನಿಡಾಡ ಗೂ ಕೂಡ ತನ್ನ ವಿಸ್ತಾರವನ್ನು ಹರಡಿತು. ಈ ಹಂತದಲ್ಲಿ ರಾಷ್ಟ್ರೀಯ ನಾಯಕರು ಬೇಕಾಯಿತು, ಇದರಲ್ಲಿ ತಾಲೂಕು ಮೇಲ್ವಿಚಾರಕರು ವಿ. ಜಿ. ಸಾಂಟಿನ್ (ಮೆಕ್ಸಿಕೋ)ಹಿರೋಷಿ ಕಿತಗ್ವ (ಜಪಾನ್) ಮತ್ತು ಸ್ಯಾಮ್ಯುಯೆಲ್ ಭುಜಬಲ್(ಭಾರತ) ಕೂಡ ಸೇರಿದ್ದರು.

ಬೇರೆ ಬೇರೆ ಗುಂಪುಗಳು ಸೇರಿದ ಹಾಗೆ ಸಭೆಯ ಅಂತರರಾಷ್ಟ್ರೀಯ ಗುಣಗಳು ಬೆಳೆಯತೊಡಗಿದವು.

1992 ರಲ್ಲಿ ಜೆ. ಜಿ ಮೋರಿಸನ್ ರವರು ಲೇಮಾನ್ ಹೋಲಿನೆಸ್ ಅಸೋಸಿಯೇಷನ್ ನ ಕೆಲಸಗಾರರನ್ನು ಮತ್ತು 1,000 ಕ್ಕೂ ಹೆಚ್ಚು ಸದಸ್ಯರನ್ನು ದಕೊಟಸ್, ಮಿನ್ನೆಸೋಟ ಮತ್ತು ಮೊಂಟಾನಾ ದಿಂದ ಸಭೆಗೆ ತಂದರು. ಚುಂಗ್ ನಾಮ್ ಸೂ (ರಾಬರ್ಟ್ ಚುಂಗ್)ರವರು 1930 ರಲ್ಲಿ ಅನೇಕ ಕೋರಿಯನ್ ಬೋಧಕರನ್ನು ಮತ್ತು ಅವರ ಸಭೆಗಳನ್ನು ನಜರೆನ್ ಸಭೆಗೆ ತಂದು ಸೇರಿಸಿದರು. ಆಸ್ಟ್ರೇಲಿಯಾದಲ್ಲಿ ಎ. ಎ. ಇ. ಬರ್ಗ್ ರವರ ನೇತೃತ್ವದಲ್ಲಿ ಅವರ ಸಭೆಗಳು 1945 ರಲ್ಲಿ ನಜರೆನ್ ಸಭೆಗೆ ಸೇರಿದವು. ಅಲ್ಫ್ರೆಡೋ ಡೆಲ್ ರೂಸೋ ರವರು ಇಟಾಲಿಯನ್ ಸಭೆಗಳನ್ನು 1948 ರಲ್ಲಿ ಈ ಸಂಸ್ಥೆಗೆ ಸೇರಿಸಿದರು. ದಕ್ಷಿಣ ಆಫ್ರಿಕಾದ ದಿ ಹೆಫಿಜಿಬಹ್ ಫೈತ್ ಮಿಷನರಿ ಅಸೋಸಿಯೇಷನ್ ರವರು ತಮ್ಮ ಕೇಂದ್ರಗಳಾದ ಟಬೋರ್, ಲೋವ ಸಭೆಗಳನ್ನು 1950 ರಲ್ಲಿ ನಜರೆನ್ ಸಭೆಗೆ ಸೇರಿಸಿದರು.

1907 ರಲ್ಲಿ ಡೇವಿಡ್ ಥಾಮಸ್ ರವರು ಅಂತರರಾಷ್ಟ್ರೀಯ ಹೋಲಿನೆಸ್ ಮಿಷನ್ ನ್ನು ಸ್ಥಾಪಿಸಿದರು, ತಮ್ಮ ಕೆಲಸವನ್ನು ದಕ್ಷಿಣ ಆಫ್ರಿಕಾದಲ್ಲಿ ಡೇವಿಡ್ ಜೋನ್ಸ್ ರವರ ಮೂಲಕ ಅಭಿವೃದ್ಧಿ ಪಡಿಸಿದರು. 1952 ರಲ್ಲಿ ಇಂಗ್ಲೆಂಡ್ ಮತ್ತು ಆಫ್ರಿಕಾ ದಲ್ಲಿ ಜೆ. ಬಿ. ಮ್ಯಾಕ್ ಲಗಾನ್ ರವರ ನೇತೃತ್ವದಲ್ಲಿದ್ದ ಸಭೆಗಳನ್ನು ನಜರೆನ್ ಸಭೆಯ ಜೊತೆ ಸೇರಿಸಿದರು. 1934 ರಲ್ಲಿ ಮೇನರಡ್ ಜೇಮ್ಸ್ ಮತ್ತು ಜಾಕ್ ಫೋರ್ಡ್ ರವರು ಕ್ಯಾಲ್ವರಿ ಹೋಲಿನೆಸ್ ಸಭೆಗಳನ್ನು ಸ್ಥಾಪಿಸಿ 1955 ರಲ್ಲಿ ನಜರೆನ್ ಸಭೆಯ ಜೊತೆ ವಿಲೀನ ಗೊಳಿಸಿದರು. 1918 ರಲ್ಲಿ ಕೆನಡಾದಲ್ಲಿ ಪ್ರಾರಂಭವಾದ ಗಾಸ್ಪೆಲ್ ವರ್ಕರ್ಸ್ ಸಭೆಯು ಫ್ರಾಂಕ್ ಗೊಫ್ಫಿನ್ ಒಂಟರಿಯವರಿಂದ ಸಭೆಯೂ ಕೂಡ 1958 ರಲ್ಲಿ ನಜರೆನ್ ಸಭೆಯ ಜೊತೆ ಸೇರಿಕೊಂಡಿತು. 1940 ರಲ್ಲಿ ನೈಜಿರಿಯನ್ ರು

ಭಾರತೀಯ ನಜರೆನ್ ಸಭೆಯನ್ನು ಜೆರೆಮಿಯ ಯು. ಎಕೈದೆಮ್ ರವರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾಗಿ 1988 ರಲ್ಲಿ ಅಂತರರಾಷ್ಟ್ರೀಯ ಸಂಸ್ಥೆಯೊಂದಿಗೆ ವಿಲೀನವಾಯಿತು.

ನಜರೆನ್ ಸಭೆಯೂ ಶಕ್ತಿಶಾಲಿಯಾಗಿ ಬೆಳೆಯುತ್ತಿರುವಂತೆ ಇದರ ಅಂತರರಾಷ್ಟ್ರೀಯ ಗುರುತು ಸ್ಥಿರವಾಗಿ ಸ್ಥಾಪಿತವಾಯಿತು. ಈ ಬೆಳವಣಿಗೆಗಳ ಹಿನ್ನಲೆಯಲ್ಲಿ ನಜರೆನ್ ಸಭೆಯು ಇತರ ಬೇರೆ ಪ್ರೊಟೆಸ್ಟೆಂಟ್ ಸಭೆಗಳಿಗೆ ಭಿನ್ನವಾದ ಮಾದರಿಯನ್ನು ಆತ್ಮಸಾಕ್ಷಿಯಾಗಿ ರೂಪಿಸಿತು. 1976 ರಲ್ಲಿ ಒಂದು ಕಮಿಷನ್ ಸಂಸ್ಥೆಯ ಭವಿಷ್ಯವನ್ನು ಪರಿಕ್ಷಿಸಿತು. 1980 ರ ಸಾಮಾನ್ಯ ಸಭೆಯಲ್ಲಿ ಈ ಸಂಸ್ಥೆಯು ಅವಶ್ಯಕವಾದ ಅಂತರರಾಷ್ಟ್ರೀಯ ವಿಧಾನವನ್ನು ಎರಡು ನಿಯಮಗಳ ಅಡಿಯಲ್ಲಿ ರೂಪಿಸಿಕೊಳ್ಳಲು ಶಿಫಾರಸುಗಳನ್ನು ನೀಡಿತು.

- ಮೊದಲನೆಯದಾಗಿ ನಜರೆನ್ ಸಭೆಗಳು ಮತ್ತು ತಾಲೂಕುಗಳು ಜಾಗತಿಕವಾಗಿ "ಪ್ರಪಂಚದಾದ್ಯಂತ ಇರುವ ವಿಶ್ವಾಸಿಗಳ ಸಹವಾಸವನ್ನು ಏರ್ಪಡಿಸಿ ಅದರಲ್ಲಿ ವಿಶ್ವಾಸಿಗಳ ಸಂಸ್ಕೃತಿ ಹಿನ್ನಲೆಗೆ ತಕ್ಕಂತೆ ಹೊಂದಿಕೊಳ್ಳುವ" ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕು
- ಎರಡನೆಯದಾಗಿ "ನಜರೆನ್ ಸಭೆಯ ವ್ಯತ್ಯಾಸವಾದ ಮೂಲ ಧ್ಯೆಯಗಳನ್ನು" ಗುರುತಿಸುವ ಸಾಮಾನ್ಯ ಅಂಕಿತವನ್ನು ಗುರುತಿಸಬೇಕು ವಿಶೇಷವಾಗಿ "ವಾಕ್ಯದ ಪವಿತ್ರತೆಯನ್ನು ಹರಡಲು….(ಹಾಗೆ) ಒಪ್ಪಂದಗಳಿಗೆ ಒಳಪಡದ ನೆಜರೆನ್ ಸಭೆಯ ವಿಶೇಷ ಗುರುತುಗಳನ್ನು ಮೂಲ ಉದ್ದೇಶಗಳನ್ನು ರೂಪಿಸಬೇಕು."

1980 ರಲ್ಲಿ ಸಾಮಾನ್ಯ ಸಭೆಯಲ್ಲಿ "ಅಂತರರಾಷ್ಟ್ರೀಯ ತತ್ವಜ್ಞಾನದ ಏಕತೆ" ಯನ್ನು ನಂಬಿಕೆಯ ಲೇಖನಗಳ ಸುತ್ತ ಅಂಗಿಕರಿಸಲಾಯಿತು. ಇದರಿಂದ ಎಲ್ಲಾ ಭೋಧಕರಿಗೂ ಉತ್ತಮವಾದ ತರಬೇತಿಯ ಅವಶ್ಯವನ್ನು ಕಂಡಿಕೊಂಡಿತು, ಮತ್ತು ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ತತ್ವಜ್ಞಾನದ ತರಬೇತಿಯ ಸಂಸ್ಥೆಗಳನ್ನು ಸ್ಥಾಪಿಸಲು ಕರೆನೀಡಿತು. ಇದು ನಜರೆನ್ ಸಭೆಗೆ ಪವಿತ್ರತೆಗೆ ಒತ್ತು ನಿಡುವ ಅಂತರರಾಷ್ಟ್ರೀಯ ಬೆಳವಣಿಗೆಯನ್ನು ನೀಡಿತು.ಈ ಸಮುದಾಯವು ಜನರನ್ನು ಮತ್ತು ದೇಶಗಳನ್ನು ವಿಭಾಗಿಸುವ ಹಾಗೂ ವಸಹಾತು ವಿಧಾನವಾದ "ಶಕ್ತಿಶಾಲಿ ಮತ್ತು ಬಲಹಿನ, ದಾನಿಗಳು ಮತ್ತು ಪಡೆದುಕೊಳ್ಳುವವರು" ಎಂಬ ವ್ಯವಸ್ಥೆಯನ್ನು ಎದುರಿಸುವುದಕ್ಕೆ ಸಿದ್ದಮಾಡಿತು. ಈ ವಿಧಾನವು 'ಪ್ರಪಂಚವನ್ನು ಹೊಸ ನೋಟದಿಂದ ನೋಡುವ ವಿಧಾನವನ್ನು:ಒಬ್ಬನು ಸಮಾನತೆ ಹಾಗೂ ಶಕ್ತಿಯನ್ನು ಎಲ್ಲಾ ಸಹಪಾಟಿಗಳಲ್ಲಿ ಬೆಳೆಸಿತು.

ಆಗಿನಿಂದ ನಜರೆನ್ ಸಭೆಯು ಪ್ರೊಟೆಸ್ಟೆಂಟ್ ರ ಮದ್ಯದಲ್ಲಿ ವಿಶೇಷವಾದ ಬೆಳವಣಿಗೆಯ ವಿಧಾನವನ್ನು ಬೆಳೆಸಿಕೊಂಡಿತು. 1998 ರ ವೇಳೆಗೆ ಅರ್ಧದಷ್ಟು ನಜರೆನ್ ಸಭಿಕರು ಯುನೈಟೆಡ್ ಸ್ಟೇಟ್ಸ್ ಮತ್ತು ಕೆನಡಾ ದ ಹೊರಗೆ ಇದ್ದರು. ಮತ್ತು 2001 ರ ಸಾಮಾನ್ಯ ಸಭೆಯಲ್ಲಿ ಪಾಲ್ಗೊಂಡ ನಾಲ್ಕರಲ್ಲಿ ಇಬ್ಬರೂ ಪ್ರತಿನಿಧಿಗಳು ಇಂಗ್ಲಿಷ್ ಭಾಷೆಯನ್ನೂ ತಮ್ಮ ಎರಡನೇಯ ಭಾಷೆಯಾಗಿ ಮಾತಾಡಿದರು ಇಲ್ಲವೇ ಆ ಭಾಷೆಯನ್ನು ಉಪಯೋಗಿಸಲೇ ಇಲ್ಲ. 2009 ರಲ್ಲಿ ಕೇಪ್ ವೆರ್ದೆ ನ ಆಫ್ರಿಕನ್ ಯುಗೆನಿಯೋ ಡುಅರ್ತೆ ಎಂಬುವವರು ಸಾಮಾನ್ಯ ಮೇಲ್ವಿಚಾರಕರಾಗಿ ಆಯ್ಕೆಯಾದರು.

## ಅಂತರರಾಷ್ಟ್ರೀಯ ಸೇವೆಯ ವಿಶೇಷ ಗುಣಗಳು.

ಚಾರಿತ್ರಿಕವಾಗಿ ನಜರೆನಿನ ಶ್ರಮಗಳು ಸುವಾರ್ತೆ,ಸಾಮಾಜಿಕ ಸೇವೆ, ಮತ್ತು ಶಿಕ್ಷಣ ಮೇಲೆ ಕೆಂದ್ರಿಕೃತವಾಗಿವೆ. ಇವೆಲ್ಲವೂ ಕೂಡ ಸಾವಿರಾರು ಭೋಧಕರು ಮತ್ತು ಸಾಮಾನ್ಯ ಸಭಿಕರು ಹಾಗೂ ವಿಭಿನ್ನ ರೀತಿಯ ಸಂಸ್ಕೃತಿಯ ಸುವಾರ್ತಿಕರ ಸಹಕಾರದಿಂದ ಸಾಧ್ಯವಾಗಿದೆ. ಈ ಕೆಲಸಗಾರರು ವೆಸ್ಲಿಯವರ ಈ ಸಿದ್ದಾಂತಗಳನ್ನು ತಮ್ಮದೇ ಆದ ರೀತಿಯಲ್ಲಿ ತಮ್ಮ ಸಂಸ್ಕೃತಿಗೆ ಅನುಗುಣವಾಗಿ ಭೋದಿಸಿದ್ದಾರೆ.

ಹಿರಾಮ್ ಎಫ್. ರೆಯ್ನೊಲ್ಡ್ಸ್ ರವರು ಪ್ರಪಂಚ ಸುವಾರ್ತೆಯ ಸಿದ್ದಾಂತವನ್ನು ಪ್ರಾರಂಭಿಸಿದ ನಾಯಕರಾಗಿದ್ದಾರೆ. ನಜರೆನ್ ಸಭೆಯು ವಿಭಿನ್ನ ಸಂಸ್ಕೃತಿಗಳಲ್ಲಿ ಸುವಾರ್ತೆಯನ್ನು ಸಾರಲು ಕೆಲಸ ಮಾಡುತ್ತಿದ್ದಾರೆ. ತಮ್ಮ 25 ವರ್ಷಗಳ ಮೇಲ್ವಿಚಾರಕರಾಗಿ ಅವರು ಸುವಾರ್ತೆಯ ನಿರಂತರ ಪ್ರಭೋಧಕರಾಗಿದ್ದಾರೆ, ಮತ್ತು ಸಂಸ್ಥೆಯಲ್ಲಿ ಸುವಾರ್ತೆಯ ಶ್ರಮಗಳನ್ನು ಹೆಚ್ಚಿಸಲು ಬಹಳ ಪ್ರಯತ್ನ ಪಟ್ಟರು. 1915 ರಿಂದ ನಜರೆನ್ ಮಿಷನ್ ಇಂಟರ್ ನ್ಯಾಷನಲ್- ಈ ಸಂಸ್ಥೆಯು ತರಬೇತು, ಪ್ರೋತ್ಸಾಹ ಮತ್ತು ಹಣ ಸಂಗ್ರಹಣೆ ಯನ್ನು ನಜರೆನ್ ಸುವಾರ್ತ ಸೇವೆಗಾಗಿ ಪ್ರಪಂಚದ ಎಲ್ಲಾ ಗುಂಪುಗಳಿಗಾಗಿ ಸೇವೆ ಮಾಡುತ್ತಿದೆ.

ಆರಂಭದ ನಜರೆನಿನವರು ಕರುಣೆಯುಳ್ಳ ಜನರಾಗಿದ್ದರು. ಅವರು ದೇವರ ಕೃಪೆಯನ್ನು ಭಾರತದಲ್ಲಿ ಬರಗಾಲ ಪೀಡಿತ ಪ್ರದೇಶದಲ್ಲಿ ಸಹಾಯ, ಅನಾಥಾಶ್ರಮಗಳನ್ನು ಸ್ಥಾಪಿಸುವುದು, ಅನಾಥ ಹೆಣ್ಣು ಮಕ್ಕಳಿಗೆ ಮತ್ತು ಮಹಿಳೆಯರಿಗೆ ಹೆರಿಗೆ ಆಸ್ಪತ್ರೆಗಳನ್ನು ತೆರೆಯುವುದು, ಮತ್ತು ನಗರ ಪ್ರದೇಶಗಳಲ್ಲಿ ಅನಾಥರಿಗೆ ಹಾಗು ಮದ್ಯವ್ಯಸನಿಗಳಿಗೆ ಆಶ್ರಿತ ಸ್ಥಾನಗಳನ್ನು ಕಲ್ಪಿಸುವುದರ ಮೂಲಕ ಸಾರುತ್ತಿದ್ದಾರೆ. 1920 ರಲ್ಲಿ ಸಭೆಯ ಪ್ರಾಮುಖ್ಯತೆಯು ವೈದ್ಯಕಿಯಕ್ಕೆ ವರ್ಗಾವಣೆಯಾಯಿತು. ನಜರೆನ್ ಸಭೆಯು ಚೀನಾ ಮತ್ತು ಸ್ವಾಜಿಲ್ಯಾಂಡ್ ಗಳಲ್ಲಿ ಆಸ್ಪತ್ರೆಗಳನ್ನು ಕಟ್ಟಿತು, ಮತ್ತು ನಂತರ ಭಾರತದಲ್ಲಿ ಮತ್ತು ಪಪುವಾ ನ್ಯೂ ಗಿನಿಯಾ ಈ ಆಸ್ಪತ್ರೆಗಳನ್ನು ಕಟ್ಟಿತು. ನಜರೆನ್ ವೈದ್ಯಕೀಯ ತಂತ್ರಜ್ಞರು ರೋಗಿಗಳನ್ನು ಗಮನಿಸುತ್ತಾ, ಶಸ್ತ್ರ ಚಿಕಿತ್ಸೆಯನ್ನು ನಡೆಸಿ, ಶುಶ್ರಕಿಯರ ತರಬೇತಿಯನ್ನು ನೀಡಿ, ಮತ್ತು ಚಾಲಿತ ವೈದ್ಯಕೀಯ ಆಸ್ಪತ್ರೆಗಳನ್ನು ಪ್ರಪಂಚದ ಅತೀ ಬಡ ದೇಶಗಳಲ್ಲಿ ಚಾಲನೆ ಮಾಡಿದ್ದಾರೆ. ಸಭೆಯು ಆಫ್ರಿಕಾದಲ್ಲಿ ವಿಶೇಷವಾದ ಕುಷ್ಟರೋಗದ ಆಸ್ಪತ್ರೆಯನ್ನು ತೆರೆಯಿತು.

1980 ರಲ್ಲಿ ನಜರೆನ್ ಸಭೆಯು ನಜರೆನ್ ಕರುಣೆಯ ಸೇವೆಯ ವಿಭಾಗವನ್ನು ಪ್ರಾರಂಭಿಸಿತು. ಇದು ವಿಸ್ತಾರವಾದ ಸಾಮಾಜಿಕ ಸೇವೆಯನ್ನು ಮಾಡಲು ಇಂದಿನವರೆಗೂ ಸಹಾಯಕಾರಿಯಾಗಿದೆ: ಮಕ್ಕಳ ಪ್ರಾಯೋಜನೆ, ನೈಸರ್ಗಿಕ ವಿಕೋಪದಲ್ಲಿ ಸಹಾಯ, ಏಡ್ಸ್ ಬಗ್ಗೆ ಶಿಕ್ಷಣ, ಅನಾಥರಿಗೆ ಸಹಾಯ, ನೀರಿನ ಯೋಜನೆಗಳು, ಆಹಾರ ವಿತರಣೆ ಮತ್ತು ಇತರೆ.

ಭಾನುವಾರದ ಶಾಲೆಗಳು ಮತ್ತು ಸತ್ಯವೇದ ತರಬೇತಿಗಳು ನಜರೆನ್ ಸಭೆಯ ನಿರಂತರ ಉದ್ದೇಶಗಳಾಗಿವೆ. ಇವೆ ಕ್ರಿಸ್ತನ ಮಾದರಿಯ ಶಿಷ್ಯತ್ವಕ್ಕೆ ಸಹಾಯಕಾರಿಯಾಗಿವೆ. ಸಭೆಯ ಆರಂಭದ ದಿನಗಳಿಂದಲೂ ಶಿಕ್ಷಣ ಮತ್ತು ವಿಧ್ಯಾಭ್ಯಾಸ ದಲ್ಲಿ ಹೂಡಿಕೆಯನ್ನು ಮಾಡಿದೆ. ಇದಕ್ಕೆ ಒಂದು ಒಳ್ಳೆಯ ಉದಾಹರಣೆ ಎಂದರೆ 1905 ರಲ್ಲಿ ಕಲ್ಕತ್ತಾ ನಗರದಲ್ಲಿ ಹೆಣ್ಣು ಮಕ್ಕಳಿಗಾಗಿ ಪ್ರಾರಂಭವಾದ ಹೋಪ್ ಸ್ಕೂಲ್ ನಜರೆನ್ ಶಾಲೆಗಳು ಪ್ರಪಂಚದೆಲ್ಲೆಡೆ ವಿಧ್ಯಾರ್ಥಿಗಳನ್ನು ಜೀವನ, ಸಮಾಜ, ಹಣಕಾಸಿನ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಲು ಸಿದ್ದಪದಿಸುತ್ತವೆ. 20 ನೇಯ ಶತಮಾನದವರೆಗೂ ಯುನೈಟೆಡ್ ಸ್ಟೇಟ್ಸ್ ನಲ್ಲಿ ನಜರೆನ್ ವಿಶ್ವವಿದ್ಯಾಲಯಗಳು ಪ್ರಾಥಮಿಕ ಹಾಗು ಉನ್ನತ ವ್ಯಾಸಂಗ ಶಾಲೆಗಳನ್ನು ತಮ್ಮ ಅಧೀನದಲ್ಲಿ ಇರಿಸಿಕೊಂಡಿದ್ದವು.

ನಜರೆನ್ ಸಭೆಯ ಸ್ಥಾಪಕರು ಉನ್ನತ ವ್ಯಾಸಂಗಕ್ಕಾಗಿ ಹೂಡಿಕೆ ಮಾಡಿದರು. ಅವರು ಭೋಧಕರು ಹಾಗೂ ಕ್ರೈಸ್ತವ ಕೆಲಸಗಾರರಿಗೆ ತರಬೇತಿ ನೀಡಲು ಬಹಳ ಮುಖ್ಯವಾಗಿದೆ. ಇದು ಸಾಮಾನ್ಯ ಸಭಿಕರನ್ನು ತರಬೇತಿಗೊಳಿಸಲು ಸಹಾಯಕಾರಿಯಾಗಿದೆ. ಅಂತರರಾಷ್ಟ್ರೀಯ ವೈದ್ಯಕೀಯ ಸಂಸ್ಥೆಯು ತನ್ನ ಪಟ್ಟಿಯಲ್ಲಿ ನಜರೆನ್ ಉನ್ನತ ವ್ಯಾಸಾಂಗ ಸಂಸ್ಥೆಗಳನ್ನು ಹಾಗು ಆಫ್ರಿಕಾ, ಬ್ರೆಜಿಲ್, ಕೆನಡಾ, ಕರೇಬಿಯನ್ ಕೊರಿಯಾ ಮತ್ತು ಯುನೈಟೆಡ್ ಸ್ಟೇಟ್ಸ್ ನಲ್ಲಿರುವ ಲಿಬರಲ್ ಆರ್ಟ್ಸ್ ಕಾಲೇಜು ಹಾಗು ವಿಶ್ವವಿಧ್ಯಾಲಯಗಳನ್ನು ಸೇರಿಸಿದೆ. ಭಾರತ ಮತ್ತು ಪಾ ಪುಯಾ ನ್ಯೂ ಗಿನಿಯ ದಲ್ಲಿ ನರ್ಸಿಂಗ್ ಶಾಲೆಗಳು ಇವೆ. ಇದಕ್ಕೆ ಅನುಗುಣವಾಗಿ ಸಭೆಯು ಪ್ರಪಂಚದ ಎಲ್ಲಾ ಭಾಗಗಳಲ್ಲಿ(ಆಫ್ರಿಕಾ, ಏಷ್ಯಾ-ಪೆಸಿಫಿಕ್, ಯುರೇಷಿಯಾ, ಮೆಸೋಅಮೆರಿಕಾ, ದಕ್ಷಿಣ ಅಮೇರಿಕಾ ಮತ್ತು ಯು ಎಸ್ ಎ - ಕೆನಡಾ) ತನ್ನ ಆರು ಸತ್ಯವೇದ ಕಾಲೇಜು ಹಾಗು ಸಂಸ್ಥೆಗಳನ್ನು ನಡೆಸುತ್ತಿದೆ. ಇದಕ್ಕೆ ಜೊತೆಯಾಗಿ ಆಸ್ಟ್ರೇಲಿಯಾ, ಕೋಸ್ಟಾ ರಿಕಾ, ಇಂಗ್ಲೆಂಡ್, ಫಿಲಿಪೈನ್ಸ್ ಮತ್ತು ಯುನೈಟೆಡ್ ಸ್ಟೇಟ್ಸ್ ನಲ್ಲಿ ತತ್ವ ಜ್ಞಾನದ ಶಾಲೆಗಳನ್ನು ನಡೆಸುತ್ತಿದೆ.

ನಜರೆನ್ ಸಭೆಯು ಸಮಯದ ಜೊತೆ ಒಂದು ಚಿಕ್ಕ ಸಮುದಾಯವಾಗಿದ್ದ ಸಭೆಯಿಂದ ಜಾಗತಿಕ ಸಮುದಾಯದ ವಿಶ್ವಾಸಿಗಳ ಗುಂಪಾಗಿ ಬೆಳೆದಿದೆ.ವೆಸ್ಲಿಯನ್ ಆಚಾರದಲ್ಲಿ ಬೇರೂರಿ ಸಭೆಯು ತನ್ನ ಜನರನ್ನು "ಕ್ರೈಸ್ತವ, ಪರಿಶುದ್ಧ ಮತ್ತು ಸುವಾರ್ತೆಯ" ಜನರೆಂದು ವರ್ಣಿಸುತ್ತದೆ. (ಮೂಲ ಮೌಲ್ಯಗಳ ಭಾಗವನ್ನು ಗಮನಿಸಿರಿ) ನಜರೆನ್ ಸಭೆಯು "ಲೋಕದಲ್ಲಿ ಕ್ರಿಸ್ತನ ಮಾದರಿಯ ಶಿಷ್ಯರನ್ನು ತಯಾರು ಮಾಡುವ" ತನ್ನ ಸುವಾರ್ತೆಯ ವ್ಯಾಖ್ಯಾನವನ್ನು ಅಂಗಿಕರಿಸುತ್ತದೆ.



# ನಮ್ಮ ಮೂಲ ಮೌಲ್ಯಗಳು

## 1. ನಾವು ಕ್ರೈಸ್ತಿಯ ಜನರು

ಜಾಗತಿಕ ಸಭೆಯ ಸದಸ್ಯರಾಗಿ, ನಾವು ಕ್ರಿಸ್ತನ ದೈವತ್ವವನ್ನು ಹಾಗು ಚಾರಿತ್ರಿಕವಾದ ತ್ರಿಯೇಕ ದೇವರ ಸಿದ್ಧಾಂತಗಳನ್ನೂ ಮತ್ತು ಕ್ರೈಸ್ತಿಯ ನಂಬಿಕೆಯನ್ನು ಎತ್ತಿಹಿಡಿಯುವ ಎಲ್ಲಾ ನಿಜವಾದ ವಿಶ್ವಾಸಿಗಳ ಸಂಗಡ ನಾವು ಕೂಡ ಸೇರುತ್ತೇವೆ. ನಾವು ನಮ್ಮ ವೆಸ್ಲಿಯನ್ ಪವಿತ್ರತೆಯ ಪರಂಪರೆಯನ್ನು ಮತ್ತು ನಂಬಿಕೆಯನ್ನು ವಾಕ್ಯಕ್ಕೆ, ತರ್ಕಕ್ಕೆ, ಆಚಾರಕ್ಕೆ ಮತ್ತು ಅನುಭವಕ್ಕೆ ಸರಿಯಾಗಿ ಅರ್ಥಮಾಡಿಕೊಳ್ಳಲು ಇರುವ ದಾರಿಯೆಂದು ನಂಬುತ್ತೇವೆ.

ಯೇಸು ಕ್ರಿಸ್ತನ ದೈವತ್ವವನ್ನು ಎಲ್ಲಾ ವಿಶ್ವಾಸಿಗಳ ಜೊತೆ ಸೇರಿಕೊಂಡು ಸಾರುವುದರಲ್ಲಿ ನಾವು ಭಾಗಿಯಾಗಿದ್ದೇವೆ. ದೇವರ ಪ್ರೀತಿಯೂ ಎಲ್ಲಾ ಮಾನವರಿಗೂ ಪಾಪ ಕ್ಷಮಾಪಣೆಯನ್ನು ಹಾಗು ತಿರುಗಿಹೊಂದಿದ ಸಂಭಂದವನ್ನು ನೀಡುತ್ತದೆ ಎಂದು ನಾವು ನಂಬುತ್ತೇವೆ. ದೇವರೊಂದಿಗೆ ನಮ್ಮ ಸಂಭಂದವನ್ನು ಸರಿಪಡಿಸಿಕೊಳ್ಳುವುದರಿಂದ ನಾವು ಒಬ್ಬರೊಂದಿಗೆ ಒಬ್ಬರು ಒಳ್ಳೆಯ ಸಂಭಂದವನ್ನು ಹೊಂದುತ್ತೇವೆ, ದೇವರು ನಮ್ಮನ್ನು ಪ್ರೀತಿಸಿದ ರೀತಿಯಲ್ಲಿ ನಾವು ಕೂಡ ಒಬ್ಬರನೊಬ್ಬರು ಪ್ರೀತಿಸುತ್ತೇವೆ, ಹಾಗೂ ದೇವರು ನಮ್ಮನ್ನು ಕ್ಷಮಿಸಿದ ರೀತಿಯಲ್ಲಿ ನಾವೂ ಕೂಡ ಮತ್ತೊಬ್ಬರನ್ನು ಕ್ಷಮಿಸುತ್ತೇವೆ. ಕ್ರಿಸ್ತನ ಮಾದರಿಯಲ್ಲಿ ಜೀವಿಸುವುದಕ್ಕೆ ನಮ್ಮ ಜೀವನವೆಲ್ಲವೂ ಕೂಡ ಒಂದು ಸಾಕ್ಷಿಯಾಗಿದೆ. ದೇವರ ವಾಕ್ಯವು ಅಧ್ಯಾತ್ಮಿಕತೆಯ ಮೂಲವಾಗಿದೆ ಮತ್ತು ಇದು ತರ್ಕ, ಅಚಾರ, ಮತ್ತು ಅನುಭವದಿಂದ ದೃಢಪಡಿಸುತ್ತದೆ.

ಯೇಸು ಕ್ರಿಸ್ತನ ದೈವತ್ವವನ್ನು ಎಲ್ಲಾ ವಿಶ್ವಾಸಿಗಳ ಜೊತೆ ಸೇರಿಕೊಂಡು ಸಾರುವುದರಲ್ಲಿ ನಾವು ಭಾಗಿಯಾಗಿದ್ದೇವೆ.

ನಜರೆನ್ ಸಭೆಯ ಸಿದ್ಧಾಂತ ಹೇಳುವ ಹಾಗೆ ಯೇಸು ಕ್ರಿಸ್ತನು ಸಭೆಯ ದೇವರಾಗಿದ್ದಾನೆ, ಮತ್ತು ಸಭೆಯು ಒಂದೇ, ಪರಿಶುದ್ದ, ಜಾಗತಿಕ, ಮತ್ತು ಶಿಷ್ಯತ್ವದ ಸಭೆಯಾಗಿದೆ. ಯೇಸು ಕ್ರಿಸ್ತನಲ್ಲಿ ಮತ್ತು ಪರಿಶುದಾತ್ಮನ ಮೂಲಕ, ತಂದೆಯಾದ ದೇವಾರು ಲೋಕದ ಎಲ್ಲಾ ಜನರಿಗೂ ಕ್ಷಮಾಪಣೆ ಹಾಗೂ ಒಳ್ಳೆಯ ಸಂಭಂದವನ್ನು ನೀಡುತ್ತಾನೆ. ಯಾರಾರು ದೇವರ ಕರೆಗೆ ನಂಬಿಕೆಯಿಂದ ಸ್ಪಂದಿಸುವರೋ ಅವರು ದೇವರ ಮಕ್ಕಳಾಗುವರು. ಕ್ರಿಸ್ತನಲ್ಲಿ ಕ್ಷಮಾಪಣೆ ಹಾಗು ಒಳ್ಳೆಯ ಸಂಬಂದವನ್ನು ಹೊಂದಿ, ನಾವಿ ಕೂಡ ಇತರರೊಂದಿಗೆ ಕ್ಷಮಾಪಣೆ ಹಾಗೂ ಒಳ್ಳೆಯ ಸಂಬಂಧವನ್ನು ಹೊಂದುತ್ತೇವೆ. ಈ ರೀತಿಯಲ್ಲಿ ನಾವು ಕ್ರಿಸ್ತನ ಸಭೆ ಮತ್ತು ಶರೀರವನ್ನು ಮಾತು ಆ ಶರೀರದ ಏಕತೆಯನ್ನು ಸಾರುತ್ತೇವೆ. ಕ್ರಿಸ್ತನ ದೇಹವಾಗಿ, ನಾವು "ಒಬ್ಬನೇ ದೇವರು, ಒಂದು ನಂಬಿಕೆ, ಒಂದೇ ದಿಕ್ಷಾಸ್ನಾನವನ್ನು ಹೊಂದಿದ್ದೇವೆ." ನಾವು ಕ್ರಿಸ್ತನ ಸಭೆಯ ಐಕ್ಯತೆಯನ್ನು ಕಾಪಾಡಲು ಮತ್ತು ಎಲ್ಲಾ ವಿಷಯಗಳಲ್ಲೂ ನಡೆಸಲು ಪ್ರಯತ್ನಿಸುತ್ತೇವೆ. (ಎಫೆಸ 4:5,೩).

## 2. ನಾವು ಪರಿಶುದ್ದ ಜನರು.

ದೇವರು ಪರಿಶುದ್ದನಾಗಿದ್ದು ನಮ್ಮನ್ನು ಪರಿಶುದ್ದತೆಯ ಜೀವನಕ್ಕೆ ಕರೆಯುತ್ತಾನೆ. ಪರಿಶುದ್ದಾತ್ಮನು ನಮ್ಮಲ್ಲಿ ಕೃಪೆಯ ಎರಡನೇಯ ಕೆಲಸವನ್ನು ಮಾಡಲು ಸಿದ್ದನಾಗಿದ್ದಾನೆ, ಈ ಕಾರ್ಯವನ್ನು ಅನೇಕ ಪದಗಳಿಂದ ಅಂದರೆ "ಸಂಪೂರ್ಣ ಪರಿಶುದ್ದತೆ" ಮತ್ತು "ಪರಿಶುದ್ದಾತ್ಮನಿಂದ ದಿಕ್ಷಾಸ್ನಾನ" ಎಂದು ಕರೆಯುತ್ತಾರೆ. ನಮ್ಮನ್ನು ಎಲ್ಲಾ ಪಾಪದಿಂದ ತೊಳೆದು, ದೇವರ ಸ್ವರೂಪಕ್ಕೆ ಬದಲಾಯಿಸಿ ದೇವರನ್ನು ನಮ್ಮ ಪೂರ್ಣ ಹೃದಯದಿಂದ ಆತ್ಮದಿಂದ ಮತ್ತು ಶಕ್ತಿಯಿಂದ ಪ್ರೀತಿಸಲು ಮತ್ತು ನಮ್ಮ ನೆರೆಹೊರೆಯವರನ್ನು ನಮ್ಮ ಹಾಗೆ ಪ್ರೀತಿಸಲು ಸಹಾಯಮಾಡಿ ಮತ್ತು ಕ್ರಿಸ್ತನ ಗುಣಗಳನ್ನು ನಮ್ಮಲ್ಲಿ ಹೊಂದಲು ಸಹಾಯ ಮಾಡುತ್ತಾನೆ. ವಿಶ್ವಾಸಿಯ ಜೀವನದಲ್ಲಿ ಪರಿಶುದ್ದತೆ ಎನ್ನುವುದು ಕ್ರಿಸ್ತನ ಹಾಗೆ ಇರುವುದು ಎಂದು ಅರ್ಥಮಾಡಿಕೊಳ್ಳಬಹುದು.

ನಮ್ಮಲ್ಲಿ ಕ್ರಿಸ್ತನ ಗುಣಗಳನ್ನು ಬೆಳೆಸಿ ಹಾಗೂ ದೇವರ ಸ್ವರೂಪವನ್ನು ನಮ್ಮಲ್ಲಿ ಮತ್ತೆ ಸೃಷ್ಟಿಸುವುದು ಪರಿಶುದ್ದಾತ್ಮನ ಕೆಲಸವಾಗಿದೆ.

ನಾವು ವಾಕ್ಯದಿಂದ ಕರೆಯಲ್ಪಟ್ಟು ಮತ್ತು ಕೃಪೆಯಿಂದ ದೇವರನ್ನು ಆರಾಧಿಸಲು ಕರೆಯಲ್ಪಟ್ಟಿರುವುದರಿಂದ, ದೇವರನ್ನು ನಮ್ಮ ಪೂರ್ಣ ಹೃದಯದಿಂದ ಆತ್ಮದಿಂದ ಮತ್ತು ಶಕ್ತಿಯಿಂದ ಪ್ರೀತಿಸಲು ಮತ್ತು ನಮ್ಮ ನೆರೆಹೊರೆಯವರನ್ನು ನಮ್ಮ ಹಾಗೆ ಪ್ರೀತಿಸಲು ನಮ್ಮನ್ನು ನಾವು ಸಂಪೂರ್ಣವಾಗಿ ದೇವರಿಗೆ ಸಮರ್ಪಿಸಿಕೊಂಡು, ಎರಡನೇಯ ಸಂಕಷ್ಟಕ್ಕೆ ಒಳಗಾಗಿ ನಾವು "ಸಂಪೂರ್ಣ ಪರಿಶುದ್ದತೆ" ಯನ್ನು ಹೊಂದಲು ಸಾಧ್ಯವೆಂದು ನಂಬುತ್ತೇವೆ. ಪರಿಶುದ್ದಾತ್ಮನು ನಮ್ಮನು ವಿಚಾರಿಸಿ, ಶುದ್ದಿಕರಿಸಿ, ತುಂಬಿ, ಮತ್ತು ಶಕ್ತಿಶಾಲಿಗಳನ್ನಾಗಿ ಮಾಡುತ್ತಾ ದೇವರ ಕೃಪೆಯಿಂದ ದಿನದಿಂದ ದಿನಕ್ಕೆ ಪ್ರಿತಿಯುಳ್ಳ ಜನರು, ಅಧ್ಯಾತ್ಮಿಕ ಕ್ರಮಶಿಕ್ಷಣ, ನೀತಿಯ ಮತ್ತು ನೈತಿಕ ಪರಿಶುದ್ದತೆ, ಕರುಣೆ, ಮತ್ತು ನ್ಯಾಯದ ವ್ಯಕ್ತಿಗಳಾಗಿ ಮಾಡುತ್ತಾನೆ. ನಮ್ಮಲ್ಲಿ ಕ್ರಿಸ್ತನ ಗುಣಗಳನ್ನು ಬೆಳೆಸಿ ಹಾಗೂ ದೇವರ ಸ್ವರೂಪವನ್ನು ನಮ್ಮಲ್ಲಿ ಮತ್ತೆ ಸೃಷ್ಟಿಸುವುದು ಪರಿಶುದ್ದಾತ್ಮನ ಕೆಲಸವಾಗಿದೆ.

ತಂದೆಯಾದ ದೇವರು, ಸೃಷ್ಟಿ ಕರ್ತನಾದ ದೇವರನ್ನು ನಾವು ನಂಬುತ್ತೇವೆ, ಆತನು ಇಲ್ಲದಿರುವುದನ್ನು ಇರುವುದಕ್ಕಾಗಿ ಕರೆಯುತ್ತಾನೆ. ಒಮ್ಮೆ ನಾವು ಇಲ್ಲದೆ ಇರುವಾಗ ನಮ್ಮನ್ನು ಇರುವ ಹಾಗೆ ಕರೆದು, ಆತನಿಗಾಗಿ ಸೃಷ್ಟಿ ಮಾಡಿಕೊಂಡು, ಮತ್ತು ನಮ್ಮನ್ನು ಆತನ ಸ್ವರೂಪದಲ್ಲಿ ಸೃಷ್ಟಿಸಿದ್ದಾನೆ. ನಾವು ದೇವರ ಸ್ವರೂಪವನ್ನು ಹೊರುವುದಕ್ಕಾಗಿ ಕರೆಯಲ್ಪಟ್ಟಿದ್ದೇವೆ "ಯಾಕೆಂದರೆ ನಾನು ನಿಮ್ಮ ದೇವರಾದ ಯೆಹೋವನು: ನೀವು ದೇವಜನರಿಗೆ ತಕ್ಕಂತಿರಬೇಕು. ನಾನು ಪರಿಶುದ್ದನಾಗಿರುವುದರಿಂದ ನೀವು ಪರಿಶುದ್ದರಾಗಿರಬೇಕು." (ಯಾಜಕಕಾಂಡ 11:44ಎ )

## 3. ನಾವು ಸೇವೆಯ ಜನರು

ನಾವು ಕ್ರಿಸ್ತನ ಕರೆಗೆ ಓಗೊಟ್ಟು ಮತ್ತು ಪರಿಶುದ್ದಾತ್ಮನಿಂದ ತುಂಬಿಸಲ್ಪಟ್ಟು ಲೋಕದ ಎಲ್ಲಾ ಕಡೆಗಳಿಗೂ ಹೋಗಿ ಕ್ರಿಸ್ತನ ದೈವತ್ವದ ಬಗ್ಗೆ ಸಾಕ್ಷಿ ನುಡಿಯುತ್ತಾ ದೇವರ ಜೊತೆ ಕೆಲಸಗಾರರಾಗಿ ಆತನ ಸಭೆಯನ್ನು ಕಟ್ಟುವುದಕ್ಕಾಗಿ ಕಳುಹಿಸಲ್ಪಟ್ಟ ಜನರಾಗಿದ್ದೇವೆ (ಮತ್ತಾಯ 28 :19-20; 2 ಕೊರಿಂಥ 6:1) ನಮ್ಮ ಧ್ಯೇಯವು (ಎ) ಆರಾಧನೆಯಿಂದ ಪ್ರಾರಂಭವಾಗುತ್ತದೆ, (ಬಿ) ಕರುಣೆಯಿಂದ ಮತ್ತು ಸುವಾರ್ತೆಯಿಂದ ಲೋಕಕ್ಕೆ ಸೇವೆ ಮಾಡುವುದಾಗಿದೆ, (ಸಿ) ಶಿಷ್ಯತ್ವ ಮೂಲಕ ವಿಶ್ವಾಸಿಗಳನ್ನು ಕ್ರೈಸ್ತಿಯ ಪರಿಪಕ್ವಕ್ಕೆ ನಡೆಸುವುದು, ಮತ್ತು (ಡಿ) ಕ್ರೈಸ್ತಿಯ ಶಿಕ್ಷಣದ ಮೂಲಕ ಸ್ತ್ರೀ ಮತ್ತು ಪುರುಷರನ್ನು ಕ್ರೈಸ್ತಿಯ ಸೇವೆಗಾಗಿ ಸಿದ್ದಪಡಿಸುವುದಾಗಿದೆ.

## ಎ. ನಮ್ಮ ಸೇವೆ ಆರಾಧನೆ

ಈ ಲೋಕದಲ್ಲಿ ಸಭೆಯ ಸೇವೆ ಆರಾಧನೆಯೊಂದಿಗೆ ಆರಂಭವಾಗುತ್ತದೆ. ದೇವರ ಮುಂದೆ ನಾವು ಒಟ್ಟಾಗಿ ಸೇರಿರುವ ಹಾಗೆ ಆರಾಧನೆಯಲ್ಲಿ, ಸತ್ಯವೇದದ ಬಹಿರಂಗ ಓದುವಿಕೆಯಲ್ಲಿ, ನಮ್ಮ ದಶಮಾಂಶ ಹಾಗೂ ಕಾಣಿಕೆಗಳನ್ನು ನೀಡುವ ಹಾಗೆ, ಪ್ರಾರ್ಥಿಸುವ ಹಾಗೆ, ಭೋಧಿಸಲ್ಪಡುವ ವಾಕ್ಯವನ್ನು ಕೇಳುವ ಹಾಗೆ, ದಿಕ್ಷಾಸ್ನಾನ ಹೊಂದುವ ಹಾಗೆ, ಮತ್ತು ಕರ್ತನ ಭೋಜನವನ್ನು ಹಂಚಿಕೊಳ್ಳುವ ಹಾಗೆ ದೇವರ ಮಕ್ಕಳ ಹಾಗೆ ಇರುವುದು ಹೇಗೆ ಎಂಬುದು ನಮಗೆ ಸ್ಪಷ್ಟವಾಗಿ ತಿಳಿದಿದೆ. ಕೂಟಗಳಾಗಿ ದೇವರನ್ನು ಆರಾಧಿಸುವುದರಿಂದ ನಮ್ಮ ಸೇವೆಯನ್ನು ನಾವು ಅರ್ಥಮಾಡಿಕೊಂಡು ದೇವರ ಕೆಲಸವನ್ನು ಪೂರ್ತಿಮಾಡಲು ಹೊಸ ಸಭೆಗಳನ್ನು ಆಯೋಜಿಸಿಕೊಂಡು ಆರಾಧನೆಯಲ್ಲಿ ಭಾಗವಹಿಸುವುದು ಮುಖ್ಯವೆಂದು ನಮ್ಮ ನಂಬಿಕೆಯಾಗಿದೆ.

ಆರಾಧನೆ ಎಂಬುದು ದೇವರಿಗೆ ನಮ್ಮ ಪ್ರೀತಿಯನ್ನು ತೋರ್ಪಡಿಸುವ ಉನ್ನತವಾದ ಅಭಿವ್ಯಕ್ತಿಯಾಗಿದೆ. ನಮ್ಮನ್ನು ವಿಮೊಚಿಸುವ ಕೃಪೆ ಹಾಗೂ ಕರುಣೆಯುಳ್ಳ ದೇವರ ಕೇಂದ್ರಿತವಾದ ಮಹಿಮೆ ಸಲ್ಲಿಸುವ ಕಾರ್ಯವು ಇದಾಗಿದೆ. ಆರಾಧನೆಯ ಮೂಲ ಹಿನ್ನಲೆ ಸ್ಥಳೀಯ ಸಭೆಯಾಗಿದೆ, ಅಲ್ಲಿ ಸ್ವಂತ ಅನುಭವಗಳನ್ನು - ಸ್ವಂತ ಮಹಿಮೆಗಳನ್ನು ಬದಿಗಿಟ್ಟು ಅದಕ್ಕೆ ಬದಲಾಗಿ ಸ್ವಂತಿಕೆಯನ್ನು ಸಮರ್ಪಿಸಿ ಮತ್ತು ಸ್ವಂತ ಅರ್ಪಣೆಯಾಗಿದೆ. ಆರಾಧನೆಯು ಸಭೆಯು ದೇವರಿಗೆ ಸಲ್ಲಿಸುವ ಪ್ರೀತಿಯ ಹಾಗೂ ವಿಧೇಯತೆಯ ಸೇವೆಯಾಗಿದೆ.

> ಶಿಷ್ಯತ್ವವೆಂದರೆ ಪರಿಶುದ್ಧಾತ್ಮನು ಕ್ರಿಸ್ತನಲ್ಲಿ ನಮ್ಮನ್ನು ಪರಿಪೂರ್ಣತೆಗೆ ತರುವ ಮಾರ್ಗವಾಗಿದೆ.

## ಬಿ. ನಮ್ಮ ಸಹಾನುಭೂತಿ ಹಾಗೂ ಸುವಾರ್ತೆಯ ಸೇವೆ

ದೇವರಿಗೆ ಸಮರ್ಪಿಸಲ್ಪಟ್ಟ ಜನರಾಗಿ ನಾವು ಕಳೆದು ಹೋಗಿರುವ ಜನರಿಗಾಗಿ ಆತನ ಪ್ರೀತಿಯನ್ನು ಮತ್ತು ಆತನ ಸಹಾನುಭೂತಿಯನ್ನು ಬಡವರಿಗೆ ಹಾಗು ಮುರಿಯಲ್ಪಟ್ಟವರಿಗೆ ಹಂಚುತ್ತೇವೆ. ಶ್ರೇಷ್ಠವಾದ ಆಜ್ಞೆ (ಮತ್ತಾಯ 22: 36-40) ಮತ್ತು ಶ್ರೇಷ್ಠ ಕೆಲಸ (ಮತ್ತಾಯ 28: 19-20) ನಮ್ಮನ್ನು ಲೋಕದೊಳಗೆ ಸುವಾರ್ತೆಗಾಗಿ, ಸಹಾನುಭೂತಿಯನ್ನು ತೋರಲು ಮತ್ತು ನ್ಯಾಯವನ್ನು ಒದಗಿಸಲು ಕಳುಹಿಸುತ್ತದೆ. ಈ ಕೊನೆಗೆ ನಾವು ಜನರನ್ನು ನಂಬಿಕೆಗೆ, ಅವಶ್ಯಕವಾದವರಿಗೆ ಸಹಾಯ ಮಾಡಲು, ಅನ್ಯಾಯದ ವಿರುದ್ಧ ನಿಲ್ಲಲು ಮತ್ತು ತುಳಿಯಲ್ಪಟ್ಟವರ ಪರವಾಗಿ ನಿಲ್ಲಲು, ದೇವರ ಸೃಷ್ಟಿಯನ್ನು ಅದರ ಸಂಪನ್ಮೂಲಗಳನ್ನು ಕಾಪಾಡಲು ಹಾಗು ಸಂರಕ್ಷಿಸಲು ಮತ್ತು ದೇವರ ಹೆಸರಿನಲ್ಲಿ ಆತನನ್ನು ಕರೆಯುವ ಪ್ರತಿಯೊಬ್ಬರಿಗೂ ಸಹವಾಸವನ್ನು ನೀಡಲು ನಾವು ಬದ್ಧರಾಗಿದ್ದೇವೆ.

ಸಭೆಯು ತನ್ನ ಸೇವೆಯ ಮೂಲಕ ಲೋಕದಲ್ಲಿ ದೇವರ ಪ್ರೀತಿಯನ್ನು ತೋರಿಸುತ್ತದೆ. ಸತ್ಯವೇದ ಕಥೆಯು ದೇವರು ಯಾವ ರೀತಿ ಸಮನ್ವಯವನ್ನು ಅಂತಿಮವಾಗಿ ಕ್ರಿಸ್ತನ ಮೂಲಕ ಹೇಗೆ ತಿರುಗಿ ತರುತ್ತಾನೆ ಎಂಬ ಕಥೆಯಾಗಿದೆ(2 ಕೊರಿಂಥ 5 :16-21). ಸಭೆಯು ದೇವರೊಂದಿಗೆ ಲೋಕದಲ್ಲಿ ದೇವರ ಪ್ರೀತಿ ಹಾಗು ಸಮನ್ವಯವನ್ನು ಸಾಧಿಸುವ ಕಾರ್ಯದಲ್ಲಿ ಸುವಾರ್ತೆ, ಸಹಾನುಭೂತಿ ಮತ್ತು ನ್ಯಾಯದ ಮೂಲಕ ಭಾಗವಹಿಸುವುದಾಗಿದೆ.

> ಆರಾಧನೆ ಎಂಬುದು ದೇವರಿಗೆ ನಮ್ಮ ಪ್ರೀತಿಯನ್ನು ತೋರ್ಪಡಿಸುವ ಉನ್ನತವಾದ ಅಭಿವ್ಯಕ್ತಿಯಾಗಿದೆ.

## ಸಿ. ಶಿಷ್ಯತ್ವದ ನಮ್ಮ ಸೇವೆ

ಕ್ರಿಸ್ತನ ಶಿಷ್ಯರಾಗಿರುವುದಕ್ಕೆ ಮತ್ತು ಇತರರನ್ನು ಆತನ ಶಿಷ್ಯರನ್ನಾಗಿ ಮಾಡಲು ನಾವು ಬದ್ಧರಾಗಿದ್ದೇವೆ. ಇದನ್ನು ಮನಸಿನಲ್ಲಿ ಇರಿಸಿಕೊಂಡು, ಇದಕ್ಕೆ ಬೇಕಾದ ಎಲ್ಲಾ ಸಂಪನ್ಮೂಲಗಳ ( ಭಾನುವಾರದ ಶಾಲೆ, ಸತ್ಯೇವೇದ ಅಧ್ಯಯನ, ಸಣ್ಣ ಜವಾಬ್ದಾರಿ ಗುಂಪುಗಳು ಮತ್ತು ಇತರೆ) ಮೂಲಕ ವಿಶ್ವಾಸಿಗಳು ದೇವರೊಂದಿಗೆ ಹಾಗೂ ಇತರರೊಂದಿಗೆ ಕ್ರೈಸ್ತವ ವಿಶ್ವಾಸದಲ್ಲಿ ಬೆಳೆಯಲು ಸಹಾಯ ಮಾಡಲು ನಾವು ಬದ್ಧರಾಗಿದ್ದೇವೆ. ಶಿಷ್ಯತ್ವ ಎಂದರೆ ನಮ್ಮನ್ನು ನಾವು ಸಂಪೂರ್ಣವಾಗಿ ದೇವರಿಗೆ ಸಮರ್ಪಿಸಿಕೊಂಡು ಮತ್ತು ಕ್ರಮಬದ್ಧವಾದ ನಂಬಿಕೆಯನ್ನು ಹೊಂದುವುದಾಗಿದೆ ಎಂದು ನಾವು ನಂಬುತ್ತೇವೆ. ನಾವು ಒಬ್ಬರಿಗೆ ಒಬ್ಬರು ಸಹಕರಿಸಿ ಜೀವನದಲ್ಲಿ ಮತ್ತು ಪರಸ್ಪರ ಸಹಕಾರವನ್ನು ಕ್ರೈಸ್ತಿಯ ಸಹಾವಾಸದಲ್ಲಿ ಮತ್ತು ಪ್ರೀತಿಯ ಜವಾಬ್ದಾರಿಯಲ್ಲಿ ಪಾಲುಗಾರರಾಗಿದ್ದೇವೆ. ಜಾನ್ ವೆಸ್ಲಿ ಯವರು "ದೇವರು ಪರಸ್ಪರ ಸಹಕರಿಸಲು ನಮಗೆ ಪರಸ್ಪರರ ಕೈಗಳನ್ನು ನೀಡಿದ್ದಾನೆ" ಎಂದು ಹೇಳಿದ್ದಾರೆ.

ಕ್ರೈಸ್ತಿಯ ಶಿಷ್ಯತ್ವ ಜೀವನದ ಮಾರ್ಗವಾಗಿದೆ. ದೇವರು ಈ ಲೋಕದಲ್ಲಿ ನಾವು ಹೇಗೆ ಜೀವಿಸಬೇಕು ಎಂದು ಕಲಿಯುವ ವಿಧಾನವಾಗಿದೆ. ದೇವರ ವಾಕ್ಯಕ್ಕೆ ಅನುಗುಣವಾಗಿ ನಾವು ಜೀವಿಸುವುದನ್ನು ಕಲಿಯುವ ಹಾಗೆ ನಂಬಿಕೆಗೆ ಒಳಪಟ್ಟ ಶಿಷ್ಯತ್ವದಲ್ಲಿ ಮತ್ತು ಒಬ್ಬರಿಗೊಬ್ಬರು ಜವಬ್ದಾರಿಯಲ್ಲಿ ನಾವು ಕ್ರಮಬದ್ದವಾದ ಶಿಷ್ಯತ್ವದಲ್ಲಿರುವ ನಿಜವಾದ ಆನಂದವನ್ನು ಮತ್ತು ಕ್ರೈಸ್ತಿಯ ಜೀವನದ ನಿಜವಾದ ಸ್ವಾತಂತ್ರ್ಯವನ್ನು ನಾವು ಅರ್ಥಮಾಡಿಕೊಳ್ಳುತ್ತೇವೆ. ಶಿಷ್ಯತ್ವ ಎನ್ನುವುದು ಕಾಯಿದೆ ಮತ್ತು ಕಾನೂನುಗಳಿಗೆ ಒಳಪಡುವ ಬರಿ ಮಾನವ ಪ್ರಯತ್ನವಲ್ಲ, ಇದು ಪರಿಶುದ್ದಾತ್ಮನು ಕ್ರಿಸ್ತನಲ್ಲಿ ನಮ್ಮನ್ನು ಪರಿಪೂರ್ಣತೆಗೆ ತರುವ ಮಾರ್ಗವಾಗಿದೆ. ಶಿಷ್ಯತ್ವದಿಂದ ಜನರು ಕ್ರೈಸ್ತಿಯ ಗುಣಗಳನ್ನು ಹೊಂದಿರುವ ಜನರಾಗಿ ಪರಿವರ್ತನೆ ಹೊಂದುತ್ತಾರೆ. ಶಿಷ್ಯತ್ವದ ಅಂತಿಮ ಗುರಿಯೆಂದರೆ ಯೇಸು ಕ್ರಿಸ್ತನ ಹೋಲಿಕೆಗೆ ಮಾರ್ಪಾಡುವುದಾಗಿದೆ. (2. ಕೊರಿಂಥ 3 :18).

## ಡಿ. ಕ್ರೈಸ್ತಿಯ ಉನ್ನತ ವಿಧ್ಯಾಭ್ಯಾಸ ನಮ್ಮ ಸೇವೆ

ಕ್ರೈಸ್ತಿಯ ಸೇವೆಗಾಗಿ ಸ್ತ್ರೀ ಮತ್ತು ಪುರುಷರನ್ನು ಸಿದ್ದರನ್ನಾಗಿಸಲು ಬೇಕಾದ ಕ್ರೈಸ್ತಿಯ ಉನ್ನತ ವ್ಯಾಸಂಗವನ್ನು ಒದಗಿಸಲು ನಾವು ಬದ್ದರಾಗಿದ್ದೇವೆ. ನಮ್ಮ ಸೇಮಿನಾರಿಗಳಲ್ಲಿ, ಸತ್ಯವೇದ ಕಾಲೇಜುಗಳಲ್ಲಿ ಮತ್ತು ವಿಶ್ವವಿಧ್ಯಾಲಯಗಳಲ್ಲಿ ಜ್ಞಾನವನ್ನು ಹುಡುಕುವುದಕ್ಕೆ, ಕ್ರೈಸ್ತಿಯ ಗುಣಗಳನ್ನು ಬೆಳಸಿಕೊಳ್ಳಲು ಮತ್ತು ದೇವರು ನೀಡಿರುವ ಸೇವೆಯ ಕರೆಯನ್ನು ಸಭೆಯಲ್ಲಿ ಮತ್ತು ಲೋಕದಲ್ಲಿ ಪೂರ್ಣಗೊಳಿಸಲು ನಮ್ಮ ನಾಯಕರನ್ನು ಬಲಪಡಿಸಲು ನಾವು ಬದ್ದರಾಗಿದ್ದೇವೆ. ಕ್ರೈಸ್ತಿಯ ಶಿಕ್ಷಣ ನಜರೆನ್ ಸಭೆಯ ಮುಖ್ಯ ಸೇವೆಯಾಗಿದೆ. ನಜರೆನ್ ಸಭೆಯ ಆರಂಭದ ದಿನಗಳಲ್ಲಿ ಕ್ರೈಸ್ತಿಯ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಜಾಗತಿಕವಾಗಿ ವೆಸ್ಲಿಯನ್-ಪರಿಶುದ್ದತೆಯ ಸುಧಾರಣೆಯನ್ನು ಸಾರಲು ಸ್ತ್ರೀ ಮತ್ತು ಪುರುಷರನ್ನು ಸಿದ್ದಪಡಿಸಲು ಸ್ಥಾಪಿಸಲಾಯಿತು. ನಮ್ಮ ನಿರಂತರವಾದ ಕ್ರೈಸ್ತಿಯ ಉನ್ನತ ವಿಧ್ಯಾಭ್ಯಾಸವು ಕಳೆದ ವರ್ಷಗಳಲ್ಲಿ ಜಾಗತಿಕವಾದ ಸಂಪರ್ಕವುಳ್ಳ ಸೆಮಿನರಿಗಳನ್ನೂ, ಸತ್ಯವೇದ ಶಾಲೆಗಳನ್ನು, ಕಾಲೇಜುಗಳನ್ನು ಮತ್ತು ವಿಶ್ವವಿಧ್ಯಾಲಯಗಳನ್ನು ಒದಗಿಸುವಲ್ಲಿ ನಮ್ಮ ಬದ್ದತೆಯನ್ನು ತೋರಿಸುತ್ತದೆ.





# ನಮ್ಮ ಧ್ಯೇಯ

## ನಜರೆನ್ ಸಭೆಯ ಮುಖ್ಯ ಧ್ಯೆಯ ಎಂದರೆ ಲೋಕದಲ್ಲಿ ಕ್ರಿಸ್ತನ ಮಾದರಿಯ ಶಿಷ್ಯರನ್ನು ತಯಾರು ಮಾಡುವುದು.

ಜಾಗತಿಕ ವಿಶ್ವಾಸದ ಸಮುದಾಯವಾಗಿ ಕ್ರಿಸ್ತನಿಂದ ಕೊಡಲ್ಪಟ್ಟಿರುವ ಶ್ರೇಷ್ಠ ಆಜ್ಞೆಗೆ ಅನುಸಾರವಾಗಿ ಅದನ್ನು ನೆರವೇರಿಸಲು ನಾವು ಬದ್ಧರಾಗಿದ್ದೇವೆ. (ಮತ್ತಾಯ 28: 19-20). ಇದರಿಂದ ಕ್ರಿಸ್ತನಲ್ಲಿರುವ ಹೊಸ ಜೀವನದ ಶುಭ ಸಂದೇಶವನ್ನು ಜನರ ಬಳಿಗೆ ಎಲ್ಲಾ ಕಡೆಗಳಲ್ಲೂ ಸಾರುತ್ತೇವೆ. ನಾವು ವಾಕ್ಯದ ಪವಿತ್ರತೆಯನ್ನು ಸಾರುತ್ತೇವೆ- ಕ್ರಿಸ್ತನ ಹಾಗೆ ಜೀವಿಸುವುದು-ಲೋಕದ ಎಲ್ಲಾ ಭಾಗಗಳಲ್ಲಿಯೂ ಇದನ್ನು ಸಾರುತ್ತೇವೆ.

ನಜರೆನ್ ಸಭೆಯು ಕ್ರಿಸ್ತನನ್ನು ರಕ್ಷಕನನ್ನಾಗಿ ಅಂಗಿಕರಿಸುವ ಪ್ರತಿಯೊಬ್ಬರನ್ನು ಒಂದು ಬಂಧನಕ್ಕೆ ತರುತ್ತದೆ. ನಾವು ಕ್ರೈಸ್ತಿಯ ಸಹಾವಾಸದಲ್ಲಿ ಒಂದಾಗುತ್ತೇವೆ, ಮತ್ತು ನಾವು ಒಬ್ಬರ ನಂಬಿಕೆಯನ್ನು ಮತ್ತೊಬ್ಬರು ಆರಾಧನೆಯಿಂದ, ಭೋಧನೆಯಿಂದ, ತರಬೇತಿಯಿಂದ ಮತ್ತು ಇತರರಿಗೆ ಮಾಡುವ ಸೇವೆಯಿಂದ ಬಲಪಡಿಸುತ್ತೇವೆ.

ಕ್ರಿಸ್ತನ ಮಾದರಿಯ ಜೀವನದ ಬದ್ಧತೆಯ ಜೊತೆಗೆ, ನಾವು ಎಲ್ಲಾ ಮನುಷ್ಯರಿಗೆ ಕ್ರಿಸ್ತನ ಹಾಗೆ ಅನುಕಂಪವನ್ನು ತೋರಲು ಪ್ರಯತ್ನಿಸುತ್ತೇವೆ.

ಸಭೆಯ ಮುಖ್ಯ ಉದ್ದೇಶವು ದೇವರನ್ನು ಘನಪಡಿಸುವುದಾದರು ಕೂಡ, ಆತನ ಸೇವೆಯಲ್ಲಿ ನಾವೆಲ್ಲರೂ ಕೂಡ ಸಕ್ರಿಯವಾಗಿ ಭಾಗವಹಿಸಬೇಕಾಗಿದೆ-ಲೋಕವನ್ನು ಆತನ ಜೊತೆ ಸಮನ್ವಯಗೊಳಿಸಬೇಕಾಗಿದೆ.

ಇದರಲ್ಲಿ ನಮ್ಮ ಸೇವೆಯ ಚಾರಿತ್ರತ್ಮಕವಾದ ನಿಯಮಗಳು: ಸುವಾರ್ತೆ, ಪರಿಶುದ್ದಿಕರಣ, ಶಿಷ್ಯತ್ವ ಮತ್ತು ಅನುಕಂಪಗಳು ಕೂಡ ಸೇರಿವೆ. ಈ ಎಲ್ಲವನ್ನೂ ಕೂಡ ನಾವು ಒಂದು ಪದದಲ್ಲಿ ಜೋತೆಗೂಡಿಸಬಹುದು; ಕ್ರಿಸ್ತನ ಹಾಗಿರುವುದು-ಪರಿಶುದ್ದತೆಯ ಮೌಲ್ಯ.

ನಜರೆನ್ ರವರು "ಕಳುಹಿಸಲ್ಪಟ್ಟ" ಜನರಾಗಿದ್ದಾರೆ-ಮನೆಗಳಿಗೆ, ಕೆಲಸದ ಸ್ಥಳಗಳಿಗೆ, ಸಮುದಾಯಗಳಿಗೆ, ಮತ್ತು ಹಳ್ಳಿಗಳಿಗೆ ಮತ್ತು ನಗರಗಳಿಗೆ ಹಾಗೂ ದೇಶಗಳಿಗೆ ಕಳುಹಿಸಲ್ಪಟ್ಟ ಜನರಾಗಿದ್ದಾರೆ.

ಪರಿಶುದ್ದಾತ್ಮನೆಂಬ ವ್ಯಕ್ತಿಯ ಮೂಲಕ ಸಾಮಾನ್ಯ ಜನರನ್ನು ಅಸಾಮಾನ್ಯ ಕಾರ್ಯಗಳನ್ನು ಮಾಡುವುದಕ್ಕಾಗಿ ದೇವರು ಇನ್ನೂ ಕರೆಯುತ್ತಿದ್ದಾನೆ.



# ನಮ್ಮ ನಜರೆನ್ ನ ಗುಣಗಳು

2013 ರ ಸಾಮಾನ್ಯ ಸಭೆಯಲ್ಲಿ ಸಾಮಾನ್ಯ ಮೇಲ್ವಿಚಾರಕರ ಮಂಡಳಿಯಲ್ಲಿ ನಜರೆನ್ ಸಭೆಯ ಏಳು ವಿಶಿಷ್ಟ ಗುಣಗಳನ್ನು ಆವಿಷ್ಕರಿಸಲಾಯಿತು:

1. ಅರ್ಥಪೂರ್ಣವಾದ ಆರಾಧನೆ
2. ತತ್ವ ಜ್ಞಾನದ ಸುಸಂಬದ್ಧತೆ
3. ಭಾವೋದ್ರಿಕ್ತ ಸುವಾರ್ತೆ ಸೇವೆ
4. ಉದ್ದೇಶಪೂರ್ವಕವಾದ ಶಿಷ್ಯತ್ವ 7
5. ಸಭೆಯ ಬೆಳವಣಿಗೆ
6. ಬದಲಾವಣೆಯುಳ್ಳ ನಾಯಕತ್ವ
7. ಉದ್ದೇಶಿತ ಅನುಕಂಪ

ಈ ವಿವರಣೆಗಳು ನಮ್ಮ ಧ್ಯೆಯಗಳ ಸ್ಥಾನವನ್ನು ಪಡೆಯುವುದಿಲ್ಲ- “ಕ್ರಿಸ್ತನ ಮಾದರಿಯ ಶಿಷ್ಯರನ್ನು ತಯಾರು ಮಾಡುವ” ನಮ್ಮ ಮೂಲ ಉದ್ದೇಶವನ್ನು ಅಥವಾ ನಮ್ಮ ಮೂಲ ಮೂಲ್ಯಗಳನ್ನೂ-“ಕ್ರೈಸ್ತಿಯ, ಪವಿತ್ರತೆಯ ಮತ್ತು ಸುವಾರ್ತೆಯ ಜಾಗವನ್ನು ಅಕ್ರಮಿಸುವುದಿಲ್ಲ. ಬದಲಾಗಿ, ಅವು ಪ್ರತಿಯೊಂದು ನಜರೆನ್ ಸಭೆಯಲ್ಲಿ ಹಾಗೂ ವಿಶಾಲತೆಯಲ್ಲಿ ನಾವು ನಜರೆನ್ ಎಂಬುದನ್ನು ತೋರಿಸುತ್ತದೆ ಎಂದು ನಾವು ನಂಬುತ್ತೇವೆ. ಪ್ರತಿಯೊಬ್ಬ ಸಭೆಯ ನಾಯಕರು ಕೂಡ ಇದನ್ನೂ ಒತ್ತಿಹೇಳಿಮತ್ತು ಎಲ್ಲಾ ನಜರೆನ್ ರವರೂ ಕೂಡ ಅದನ್ನು ಮೈ ಗೂಡಿಸಿಕೊಂಡು, ಮುನ್ನಡೆಯಬೇಕೆಂದು ಕೋರುತ್ತೇವೆ. ಇವು ಹೇಗೆ, ಸಮಯ ಬದಲಾದ ಹಾಗೆ, ನಮ್ಮ ಜಾಗತಿಕ ಸಭೆಯಲ್ಲಿ ವಾಸ್ತವವಾಗಿ ಪರಿಣಮಿಸುತ್ತವೆ ಎಂಬುದನ್ನು ಗಮನಿಸೋಣ.

## 1.ಅರ್ಥಪೂರ್ಣವಾದ ಆರಾಧನೆ

ಇದರಿಂದ ದೇವರನ್ನು ಆರಾಧಿಸುವುದೆಂದರೆ ಆತನನ್ನು ನಮ್ಮ ರಕ್ಷಣೆಯ ಬಂಡೆಯಾಗಿ ಸ್ವಿಕರಿಸುವುದಾಗಿದೆ ಎಂದು ದೃಢವಾಗಿ ಹೇಳಬಹುದು, ಎಲ್ಲಾ ದೇವರುಗಳಿಗೂ ಆತನು ಆರಸನಾಗಿದ್ದಾನೆ, ಎಲ್ಲವನ್ನೂ ಸೃಷ್ಟಿಸಿದ ಸೃಷ್ಟಿಕರ್ತನಾಗಿದ್ದಾನೆ, ಮತ್ತು ಆತನ ಜನರನ್ನು ಕಾಯುವ ಕುರುಬನಾಗಿದ್ದಾನೆ.

ಎ. ಯೇಸುವಿನ ಶಿಷ್ಯರು ಆತನ ಪ್ರಸನ್ನತೆಯಲ್ಲಿ ಜೀವಿಸಿದರು ಮತ್ತು ಆತನೊಂದಿಗೆ ಇದ್ದ ಸಂಭದದಿಂದ ಬೇರೆಯವರಿಗಾಗಿ ಸೇವೆಮಾಡಿದರು

- ಯೇಸುವು ತನ್ನ ಶಿಷ್ಯರನ್ನು ಲೋಕದೊಳಗೆ ಸೇವೆ ಮಾಡುವುದಕ್ಕಾಗಿ ಕಳುಹಿಸಿದನು.(ಮತ್ತಾಯ 10)
- ನಂತರ ಅವರು ಪವಿತ್ರಾತ್ಮನಿಂದ ತುಂಬಿದವರಾಗಿರಬೇಕೆಂದು ಅವರಿಗೆ ಹೇಳಿದನು. ಅವರು ಮೇಲುಪ್ಪರಿಗೆಯಲ್ಲಿ ಕಾದರು ಮತ್ತು ಪವಿತ್ರಾತ್ಮನು ಯೇಸುವಿನ ವಾಗ್ದಾನದಂತೆ ಬಂದನು (ಅ ಪೋ ಕೃ 2 )
- ಶಿಷ್ಯರು ಲೋಕದಲ್ಲಿ ಅವರ ಸೇವೆಯನ್ನು ಆರಂಭಿಸಿದ ನಂತರ ಅವರು ದೇವರ ರಾಯಭಾರಿಗಳಾದರು.
- ಅವರು ತಮ್ಮ ಸಮನ್ವಯದ ಸೇವೆಯ ಮೂಲಕ ಲೋಕಕ್ಕೆ ಸಮನ್ವಯದ ಸಂದೇಶವನ್ನು ತಂದರು.
- (2 ಕೊರಿಂಥ 5:11-21). ಪೌಲನು ಇದನ್ನು ಚೆನ್ನಾಗಿ ಹೇಳುತ್ತಾನೆ. "ನಾವು ಕ್ರಿಸ್ತನ ರಾಯಭಾರಿಗಳಾಗಿದ್ದೇವೆ. ದೇವರೇ ನಮ್ಮ ಮೂಲಕ ಬುದ್ಧಿ ಹೇಳುವ ಹಾಗಾಯಿತು. ದೇವರೊಂದಿಗೆ ಸಮಾಧಾನವಾಗಿರೆಂದು ಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇವೆ. ನಾವು ಆತನಲ್ಲಿ ದೇವರಿಗೆ ಸಮರ್ಪಕವಾದ ನೀತಿ ಸ್ವಾರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗ ಮಾಡಿದನು. (2 ಕೊರಿಂಥ 5:20 -21).

ಬಿ. ಯೇಸುವು ತನ್ನ ಹಿಂಬಾಲಕರಿಗೆ ಶ್ರೇಷ್ಠ ಆದೇಶದ ಸವಾಲನ್ನು ನೀಡಿದನು.

- "ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದಿಕ್ಷಾಸ್ನಾನ ಮಾಡಿಸಿ ನಾನು ನಿಮಗೆ ಅಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು." (ಮತ್ತಾಯ 28 :19 -20)
- ಆದಿ ಸಭೆಯು ಅಂತಿಯೋಕದಲ್ಲಿ ಅರ್ಥಪೂರ್ಣವಾದ ಆರಾಧನೆಯನ್ನು ನಡೆಸುವ ಮೂಲಕ ಈ ಆದೇಶವನ್ನು ನಿಜವಾಗಿಯೂ ನೆರವೆರಿಸುವುದಕ್ಕೆ ಪ್ರಾರಂಭಿಸಿತು. (ಅ ಪೋ ಕೃ 13:1 -4).

ಸಿ. ಉಪವಾಸ ಹಾಗೂ ಪ್ರಾರ್ಥನೆ ಎಂಬ ಆತ್ಮದ ಕ್ರಮಬದ್ಧತೆಯನ್ನು ಅನುಸರಿಸುವುದರಿಂದ ಅರ್ಥಪೂರ್ಣವಾದ ಆರಾಧನೆಯು ನಡೆಯುತ್ತದೆ.

- ಪವಿತ್ರಾತ್ಮನು ಆಗ ಬೇರೆಯವರನ್ನು ಅವರ ನಂಬಿಕೆಗೆ ಕರೆಯಲು ಅವರನ್ನು ಕಳುಹಿಸಿದನು.
- ಇದು ಆರಾಧನೆಯ ಹಿನ್ನಲೆಯಲ್ಲಿ ನಡೆಯಿತು.
- ಆರಾಧನೆಯು ನಮ್ಮ ಜೀವನದಲ್ಲಿ ದೇವರ ಶಕ್ತಿಯನ್ನು ಬಿಡುಗಡೆ ಮಾಡಲು ಪ್ರೇರಣೆ ನೀಡುತ್ತದೆ.
- ಆರಾಧನೆಯು ಕ್ರಿಸ್ತನ ಜೊತೆಗಿನ ನಮ್ಮ ಜೀವನವನ್ನು ಮತ್ತೆ ಹೊಸದಾಗಿಸುತ್ತದೆ. ಇದು ಮಾಡಲೇಬೇಕಾದ ಒಂದು ಅಧ್ಯಾತ್ಮಿಕ ಕ್ರಮ ಶಿಕ್ಷನವಾಗಿದೆ, ಕ್ರಿಸ್ತನ ರೂಪಕ್ಕೆ ನಮ್ಮನ್ನು ಬದಲಿಸಲು ದೇವರು ಉಪಯೋಗಿಸುವ ಒಂದು ಸಾಧನವಾಗಿದೆ.
- ನಮ್ಮ ಜೀವನದಲ್ಲಿ ವ್ಯಯಕ್ತಿಕ ಹಾಗೂ ಸಮುದಾಯ ಆರಾಧನೆಗಳನ್ನು ನಿರಂತರವಾದ ಅಭ್ಯಾಸವಾಗಿ ಮಾಡಿಕೊಳ್ಳಬೇಕು.

ಡಿ. ಅರ್ಥಪೂರ್ಣವಾದ ಆರಾಧನೆಯು ಸಮುದಾಯದ ಆರಾಧನೆಯ ಸಮಯದಲ್ಲಿ ನಮ್ಮ ಜೀವನದಲ್ಲಿ ದೇವರು ಸಂಚರಿಸುವುದಕ್ಕೆ ಸಹಾಯ ಮಾಡುತ್ತದೆ.

- ಆದಿ ಸಭೆಯು ಸಮಿತಿಗಳ ಹಾಗೂ ಕಾರ್ಯಾಗಾರಗಳ ಮೂಲಕ ತನ್ನ ವ್ಯವಹಾರಗಳನ್ನು ನಡೆಸಲಿಲ್ಲ.
- ಬದಲಾಗಿ, ಅವರು ಸಮುದಾಯದ ಆರಾಧನೆಯ ಸಮಯದಲ್ಲಿ ದೇವರು ಅವರ ಮದ್ಯದಲ್ಲಿ ಸಂಚರಿಸಿ ಅವರೊಂದಿಗೆ ಕೆಲಸ ಮಾಡಲು ಸಹಕರಿಸಿದರು.
- ನಮ್ಮ ಉದ್ದೇಶಗಳನ್ನು ನಿಲ್ಲಿಸಿ ದೇವರು ತನ್ನ ಉದ್ದೇಶಗಳನ್ನು ನಮ್ಮಲ್ಲಿ ನೆರವೇರಿಸಲು ಅವಕಾಶವನ್ನು ಕಲ್ಪಿಸಬೇಕಾಗಿದೆ.

ಇ. ಅರ್ಥಪೂರ್ಣವಾದ ಆರಾಧನೆಯು ನಾವು ಆತನಿಗಾಗಿ ಎದುರುನೋಡುವ ಹಾಗೆ ದೇವರು ನಮ್ಮಲ್ಲಿ ಮುಕ್ತವಾಗಿ ಸಂಚರಿಸಾಲು ಅವಕಾಶ ನೀಡುತ್ತದೆ.

- ನಾವು ದೇವರಿಗೆ ತನ್ನನ್ನು ತಾನು ಬಹಿರಂಗ ಪಡಿಸಲು ಸಮಯವನ್ನು ನೀಡಬೇಕು, ಇದರಿಂದ ತಿಳಿಯಪಡಿಸಲು, ಮುಂದೆ ಸಾಗಲು, ಮುಟ್ಟಲು, ರಕ್ಷಿಸಲು, ಮತ್ತು ಆತನ ಸಮಯದ ಪ್ರಕಾರ ಆತನ ವಿಧಾನದಲ್ಲಿ ಜನರನ್ನು ಪವಿತ್ರ ಗೊಳಿಸಲು ಅವಕಾಶವನ್ನು ಕೊಡಬೇಕು.

- ಪ್ರತಿಯೊಂದು ಆರಾಧನೆಯಲ್ಲಿ ದೇವರು ನಮ್ಮನ್ನು ಸಂಧಿಸಲು ಬರುತ್ತಾನೆ ಮತ್ತು ಆತನು ನಮ್ಮ ಮಧ್ಯದಲ್ಲಿ ಸಂಚರಿಸುತ್ತಾನೆ ಎಂಬ ಅತುರತೆಯಿಂದ ನಾವು ಬರಬೇಕು.
- ಪ್ರತಿ ವಾರವು ನಾವು ಆರಾಧನೆಗೆ ಬಂದಾಗ ದೇವರು ತನ್ನ ಸ್ವಂತ ವಿಧಾನದಲ್ಲಿ ಸಂಚರಿಸಲು ಆತನಿಗೆ ಅವಕಾಶವನ್ನು ಕಲ್ಪಿಸಬೇಕು, ಇದರಿಂದ ದೇವರು ಏನು ಮಾಡಬೇಕೆಂದು ಬಯಸುತ್ತಾರೆ, ನಾವು ಯಾವಾಗಲು ಅಭ್ಯಾಸವಾಗಿ ಆರಾಧನೆಯಲ್ಲಿ ಭಾಗಿಯಾಗಬಾರದು.


ಎಫ್. ದೇವರ ಮಕ್ಕಳು ಪ್ರತಿ ವಾರವು ಆತನ ಅತ್ಮನಿಂದ ಶಕ್ತಿಶಾಲಿಯಾಗಿ ತುಂಬಿಸಲ್ಪಡಲು ಆರಾಧನೆಗೆ ಸೇರಬೇಕು.

- ಮನುಷ್ಯನ ಆತ್ಮಕ್ಕೆ ದೇವರ ಅತ್ಮನಿಂದ ತುಂಬಿಸಲ್ಪಡುವುದಕ್ಕಿಂತ ಮಿಗಿಲಾದ ಇನ್ನೊಂದು ವಿಧಾನವಿಲ್ಲ.
- ಇದು ಅರ್ಥಪೂರ್ಣವಾದ ಸಮುದಾಯದ ಆರಾಧನೆಯಲ್ಲಿ ಒಳ್ಳೆಯ ರೀತಿಯಲ್ಲಿ ನಡೆಯುತ್ತದೆ.

## 2. ತತ್ವ ಜ್ಞಾನದ ಸುಸಂಬದ್ಧತೆ

ಎ . ನಮ್ಮ ನಜರೆನ್ ಸ್ವರವೂ ವಿಶಾಲವಾದ ಕ್ರೈಸ್ತವ ಸಮುದಾಯದಲ್ಲಿ ಕೇಳಲ್ಪಡಬೇಕು.

- ಇದು ತತ್ವಜ್ನಾನವಾಗಿ ನಾವು ಯಾರು ಎಂಬುದನ್ನು ತಿಳಿಸುತ್ತದೆ.
- ಇದನ್ನೇ ನಾವು ದೃಢಪದಿಸುತ್ತೇವೆ, ನಾವು ಕಾರ್ಯಗತವಾಗಲು ಇದು ನಮ್ಮನ್ನು ಪ್ರೇರೇಪಿಸುತ್ತದೆ, ಮತ್ತು ನಮ್ಮ ನಂಬಿಕೆಗಳನ್ನು ಪ್ರತಿದಿನದಲ್ಲಿ ಅನುಸರಿಸಲು ಸಹಾಯವಾಗುತ್ತದೆ.




ಬಿ. ಇವು ನಾಮ್ಮ ತತ್ವ ಜ್ಞಾನದ ಸುಸಂಬದ್ಧತೆಯ ಮೂಲವಾಗಿವೆ.

- ದೇವರ ವಾಕ್ಯ; ಕ್ರಿಸ್ತನಲ್ಲಿ ನಮ್ಮ ಗುರುತನ್ನು ಹುಡುಕಲು ಪರಿಶುದ್ಧ ವಾಕ್ಯಗಳು ಅಸ್ಥಿವಾರ ಹಾಗೂ ಮುಖ್ಯವಾದವುಗಳಾಗಿವೆ.
- ಕ್ರೈಸ್ತವ ಆಚಾರಗಳು: ನಾವು 2,000 ವರ್ಷಗಳಷ್ಟು ಸಾಂಪ್ರಾದಾಯಿಕ ಆಚಾರಗಳನ್ನು ಆಚರಿಸುತ್ತೇವೆ.
- ತರ್ಕ: ದೇವರ ಆತ್ಮವು ನಮ್ಮ ಬುದ್ಧಿಶಕ್ತಿಯ ಮೂಲಕ ಕೆಲಸ ಮಾಡುತ್ತಾ ಮತ್ತು ಆಲೋಚಿಸುವ ಶಕ್ತಿಯನ್ನು ನೀಡುತ್ತದೆ.
- ವ್ಯಯಕ್ತಿಕ ಅನುಭವ: ಕ್ರಿಸ್ತನನ್ನು ಹಿಂಬಾಲಿಸುವ ವ್ಯಕ್ತಿಗಳ ಮೂಲಕ ದೇವರು ಕೆಲಸವನ್ನು ಮಾಡುತ್ತಾನೆ ಎಂದು ನಾವು ನಂಬುತ್ತೇವೆ.

ಸಿ. ಈ ನಂಬಿಕೆಗಳು ನಮಗೆ ತತ್ವ ಜ್ಞಾನದ ಸುಸಂಬದ್ಧತೆಯನ್ನು ನೀಡುತ್ತವೆ.

- ನಾವು ಕ್ರೈಸ್ತವರು.
  - ನಾವು ತ್ರಿಯೇಕ ದೇವರನ್ನು ನಂಬುತ್ತೇವೆ-ತಂದೆ, ಮಗ, ಮತ್ತು ಪರಿಶುದ್ದಾತ್ಮ.
  - ನಾವು ಯೇಸು ಕ್ರಿಸ್ತನು ದೇವರ ಮಗನೆಂದು ನಂಬುತ್ತೇವೆ.
  - ಯೇಸು ಕ್ರಿಸ್ತನು ತ್ರಿಯೇಕ ದೇವರಲ್ಲಿ ಎರಡನೇಯ ವ್ಯಕ್ತಿಯೆಂದು ನಂಬುತ್ತೇವೆ.
  - ನಾವು ಕ್ರೈಸ್ತವ ಸಭೆಯ ಸಾಂಪ್ರಾದಾಯಿಕ ಸಿದ್ಧಾಂತಗಳನ್ನು ಮತ್ತು ಆಚಾರಗಳನ್ನು ಆಚರಿಸುತ್ತೇವೆ.
- ನಾವು ಪ್ರೊಟೆಸ್ಟೆಂಟ್ ರು
  - ನ್ಯಾಯನಿರ್ಣಯವು ಕೃಪೆಯಿಂದ ನಂಬಿಕೆಯ ಮೂಲಕ ಮಾತ್ರ ರಕ್ಷಣೆಯು ಸಾಧ್ಯವೆಂದು ನಂಬುತ್ತೇವೆ.
  - ನಾವು ದೇವರ ವಾಕ್ಯಕ್ಕೆ ಉನ್ನತವಾದ ಅಧಿಕಾರವನ್ನು ನೀಡುತ್ತೇವೆ.
  - ನಾವು ಎಲ್ಲಾ ವಿಶ್ವಾಸಿಗಳ ಯಾಜಕತ್ವದಲ್ಲಿ ನಂಬಿಕೆ ಇಡುತ್ತೇವೆ.
  - ಪ್ರಸಂಗವನ್ನು ಆರಾಧನೆಯ ಬಹು ಮುಖ್ಯವಾದ ಅಂಗವೆಂದು ನಂಬುತ್ತೇವೆ ಮತ್ತು ಪ್ರವಚನ ಪೀಠವನ್ನು ಸಭೆಯ ಮಧ್ಯದಲ್ಲಿ ಇಡುತ್ತೇವೆ.
  - ಆತ್ಮನ ವರಗಳು ಕ್ರಿಸ್ತನ ದೇಹದಲ್ಲಿ ಎಲ್ಲಾ ವಿಶ್ವಾಸಿಗಳಿಗೂ ಸಮಾನವಾಗಿ ಹಂಚಿಕೆಯಾಗಿವೆ ಎಂದು ನಂಬುತ್ತೇವೆ.
- ನಾವು ಸುವಾರ್ತಿಕರು

- o ನಾವು ಕ್ರಿಸ್ತನ ಮಾದರಿಯಲ್ಲಿ ಜೀವಿಸಲು ಕ್ರಿಸ್ತನೊಂದಿಗೆ ವ್ಯಯಕ್ತಿಕ ಅನುಬಂಧವನ್ನು ಮತ್ತು ಕ್ರಿಸ್ತನ ಮೂಲಕ ಕ್ಷಮಾಪಣೆಯನ್ನು ಹೊಂದುವುದು ಅವಶ್ಯವೆಂದು ನಂಬುತ್ತೇವೆ.
- o ನಮ್ಮ ಬದಲಾದ ಜೀವನ ಶೈಲಿಯ ಮೂಲಕ ಸಾಕ್ಷಿಯನ್ನು ನಾವು ನಂಬುತ್ತೇವೆ.

▪ ನಾವು ವೆಸ್ಲಿಯವರು

- o "ದೇವರು ಪ್ರೀತಿ ಸ್ವರೂಪನು" (1 ಯೋಹಾನ 4;8) ಎಂಬ ಈ ಮುಖ್ಯವಾದ ತತ್ವಜ್ಞಾನದ ಮೇಲೆ ನಮ್ಮ ಎಲ್ಲಾ ತತ್ವಗಳನ್ನು ಕಟ್ಟುತ್ತೇವೆ.
- o ದೇವರೊಂದಿಗೆ ಅರ್ಥಪೂರ್ಣವಾದ ಸಂಭಂದವನ್ನು ಹೊಂದಲು ಮಾನವನು ತನ್ನ ಆಯ್ಕೆಯ ಸ್ವಾತಂತ್ರ್ಯವನ್ನು ಹೊಂದಬೇಕು ಎಂದು ನಂಬುತ್ತೇವೆ.
- o ದೇವರು ಮಾನವರ ಜೊತೆ ಕೃಪೆ ಹಾಗು ಕರುಣೆಯಿಂದ ನಡೆದುಕೊಳ್ಳುತ್ತಾನೆ ಎಂದು ನಂಬುತ್ತೇವೆ.
- o ದೇವರ ತಡೆಗಟ್ಟುವ ಕೃಪೆಯೂ ಮನುಷ್ಯನ ಮುಂದೆ ಹೋಗುತ್ತದೆ, ಆ ಮನುಷ್ಯನನ್ನು ಆಳವಾದ ಪಾಪಕ್ಕೆ ಹೋಗದಂತೆ ತಡೆಯುತ್ತದೆ, ಮತ್ತು ಅವನನ್ನು ಅಥವಾ ಅವಳನ್ನು ದೇವರ ಕಡೆಗೆ ಸೆಳೆಯುತ್ತದೆ.
- o ದೇವರು ಹುಡುಕುವ, ವಿಮೋಚಿಸುವ, ರಕ್ಷಿಸುವ, ಪರಿಶುದ್ದಗೊಳಿಸುವ ಮತ್ತು ಸಾಕಷ್ಟು ಕೃಪೆಯು ಅವನ ಅಥವಾ ಅವಳ ಜೀವನದಲ್ಲಿ ಕೆಲಸ ಮಾಡುತ್ತದೆ ಮತ್ತು ಕ್ರೈಸ್ತಿಯ ಜೀವನದಲ್ಲಿ ನಿರಂತರ ಜಯವನ್ನು ನೀಡುತ್ತದೆ.
- o ವ್ಯಯಕ್ತಿಕ ಜೀವನದಲ್ಲಿ ಸಕಾರಾತ್ಮಕವಾದ ಕೃಪೆಯು ಪಾಪದ ಶಕ್ತಿಯನ್ನು ಒಡೆಯಲು ಸಹಾಯ ಮಾಡುತ್ತದೆ. ಮತ್ತು ದೇವರನ್ನು ಮನಃ ಪೂರ್ವಕ ವಾಗಿ ವಿಧೇಯನಾಗಿ ಪ್ರೀತಿಯ ಹೃದಯದಿಂದ ಆತನ ಬಳಿಗೆ ಬರುವ ವ್ಯಕ್ತಿಯನ್ನು ದೇವರು ಪಾಪಿಯಿಂದ ದೇವರ ಮಗನಾಗಿ ಪರಿವರ್ತಿಸುತ್ತಾನೆ.
- o ಪರಿಶುದ್ಧತೆ ಹಾಗು ಪವಿತ್ರತೆಯು ಈ ಜೀವನದಲ್ಲಿ ಸಾಧಿಸಬಹುದಾದ ವಾಸ್ತವಗಳಾಗಿವೆ.

▪ ನಾವು ಆತ್ಮನ ಸಾಕ್ಷಿಯನ್ನು ನಂಬುತ್ತೇವೆ.

- o ದೇವರು ಒಬ್ಬ ವ್ಯಕ್ತಿಗೆ ಅವನ ಮತ್ತು ಅವಳ ಪಾಪಗಳು ದೇವರಿಂದ ಕ್ಷಮಾಪಣೆ ಹೊಂದಿವೆ ಎಂಬ ಆಶ್ವಾಸನೆ ಯಲ್ಲಿ ನಂಬುತ್ತೇವೆ, ಮತ್ತು ಈ ನಿರಂತರ ಆಶ್ವಾಸನೆ ನಮ್ಮ ಹಿಂದಿನ ಪಾಪಗಳನ್ನು ಕ್ರಿಸ್ತನ ರಕ್ತದಿಂದ ಮುಚ್ಚುವ ಹಾಗು ಪ್ರತಿದಿನ ನಮಗೆ ಜಯವನ್ನು ನೀಡುತ್ತದೆ ಎಂದು ನಂಬುತ್ತೇವೆ.
- o ಪ್ರತಿದಿನದ ಜೀವನದ ತಿರ್ಮಾನಗಳಿಗಾಗಿ ದೇವರ ಅತ್ಮನಿಂದ ನಡೆಸಲ್ಪಡುವನೆಂದು ನಂಬುತ್ತೇವೆ. ಜೀವನದ ಪ್ರಯಾಣದ ಗುರಿಗಾಗಿ ದೇವರು ತನ್ನ ಮಕ್ಕಳನ್ನು ಪ್ರೇರೇಪಿಸಿ ಮತ್ತು ಪರಿಕ್ಷಿಸುತ್ತಾನೆ ಎಂದು ನಂಬುತ್ತೇವೆ.

ಡಿ. ಪರಿಶುದ್ಧ ಜೀವನಕ್ಕೆ ನಾಲ್ಕು ಮುಖ್ಯ ವಿಷಯಗಳಿವೆ ಎಂದು ನಾವು ನಂಬುತ್ತೇವೆ.

▪ ಕ್ರಿಸ್ತನ ಹಾಗೆ: ಪ್ರತಿದಿನ ಕ್ರಿಸ್ತನ ರೂಪಕ್ಕೆ ಬದಲಾವಣೆ ಹೊಂದಲು ದೇವರ ಆತ್ಮಕ್ಕೆ ಸಹಾಯ ಮಾಡುವುದರಿಂದ ನಮ್ಮನ್ನು ನಾವು ದೇವರು ನಮ್ಮಲ್ಲಿ ತನ್ನ ಕೆಲಸವನ್ನು ಮಾಡಲು ಅವಕಾಶವನ್ನು ಕೊಡುತ್ತೇವೆ. "ಕ್ರಿಸ್ತನಿಂದ ಉತ್ತೇಜನ, ಪ್ರೀತಿಯ ಪ್ರೇರಣೆ, ಪವಿತ್ರಾತ್ಮನ ಅನ್ಯೋನ್ಯತೆ, ಕಾರುಣ್ಯ ದಯಾರಸಗಳು ಉಂಟಾಗುವುದಾದರೆ ಐಕ್ಯಮತ್ಯವುಳ್ಳವರಾಗಿದ್ದು ನನ್ನ ಸಂತೋಷವನ್ನು ಪರಿಪೂರ್ಣ ಮಾಡಿರಿ ನಿಮ್ಮೆಲ್ಲರಲ್ಲಿ ಒಂದೇ ಪ್ರಿತಿಯಿರಲಿ; ಅನ್ಯೋನ್ಯ ಭಾವವುಳ್ಳವರಾಗಿರುವವರೂ ಒಂದೇ ಗುರಿಯಿಟ್ಟುಕೊಂಡವರೂ ಆಗಿರ್ರಿ" (ಫಿಲಿಪ್ಪಿಯವರಿಗೆ 2:1).

▪ ಜೀವನಶೈಲಿ: ನಮ್ಮ ಲೋಕದಲ್ಲಿ ನಾವು ಪರಿಶುದ್ಧ ಕಾರ್ಯಗಳಿಗಾಗಿ ಪ್ರತ್ಯೇಕ ಪಡಿಸಲ್ಪಟ್ಟಿದ್ದೇವೆ. "ಇವರನ್ನು ಲೋಕದೊಳಗಿಂದ ತೆಗೆದುಕೊಂಡು ಹೋಗಬೇಕೆಂದು ನಾನು ಕೇಳಿಕೊಳ್ಳುವುದಿಲ್ಲ; ಕೆದುಕನಿಂದ ತಪ್ಪಿಸಿ ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಲೋಕದವನಲ್ಲದೆ ಇರುವ ಪ್ರಕಾರ ಇವರು ಲೋಕದವರಲ್ಲ. ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆ ಪಡಿಸು ನಿನ್ನ ವಾಕ್ಯವು ಸತ್ಯವು." (ಯೋಹಾನ 17 :15-17).

▪ ಶೋಧನೆ ಮತ್ತು ಆಯ್ಕೆಯ ಸ್ವಾತಂತ್ರ್ಯ: ಚಟಗಳಿಗೆ ಶರಣಾಗುವ ಅಥವಾ ಶರೀರದ ಕೊರಿಕೆಗಳಿಗೆ ಒಳಗಾಗುವ ಅಥವಾ ಸೈತಾನನಿಗೆ ಶರಣಾಗುವ ಬದಲು ದೇವರಿಗೆ ಶರಣಾಗಿ ಪರಿಶುದ್ಧ ಜೀವನ ನಡೆಸಲು ದೇವರಿಂದ ಶಕ್ತಿಯನ್ನು ಪಡೆಯಬಹುದು. "ಆತನು ನಿಮ್ಮ ಮನೋನೇತ್ರಗಳನ್ನು ಬೆಳಗಿಸಿ ಆತನಿಂದ ಕರಿಸಿಕೊಂಡವರು ನಿರೀಕ್ಷಿಸುವ ಪದವಿ ಎಂಥದೆಂಬುದನ್ನೂ ನಮ್ಬುವವರಾದ ನಮ್ಮಲ್ಲಿ ಆತನು ಸಾಧಿಸುವ ಪರಾಕ್ರಮವು ಎಷ್ಟು ಅತಿಶಯವಾದದ್ದೆಂಬದನ್ನೂ ನೀವು ತಿಳಿದುಕೊಳ್ಳುವಂತೆ ಅನುಗ್ರಹಿಸಲಿ. ಆತನ ಬಲಾತಿಶಯವು ಎಷ್ಟು ಮಹತ್ತಾದದ್ದೆಂಬುದು ಕ್ರಿಸ್ತನಲ್ಲಿ ತೋರಿಬಂದಿದೆ. ಹೇಗೆಂದರೆ ಆತನು ಸತ್ತಿದ್ದ ಕ್ರಿಸ್ತನನ್ನು ಬದುಕಿಸಿ ಪರಲೋಕದೊಳಗೆ ಸಕಲ ರಾಜತ್ವ ಅಧಿಕಾರ ಮಹತ್ವ ಪ್ರಭುತ್ವಾದಿಗಳ ಮೇಲೆಯೂ ಈ ಲೋಕದಲ್ಲೂ ಮಾತ್ರವಲ್ಲದೆ ಬರುವ ಲೋಕದಲ್ಲಿ ಸಹ ಹೆಸರು ಗೊಂದವರೆಲ್ಲರ ಮೇಲೆಯೂ ತನ್ನ ಬಲಗಡೆಯಲ್ಲಿ ಕೂಡ್ರಿಸಿ ಕೊಂಡನು." (ಎಫೆಸದವರಿಗೆ 1:18 -20).

- ಆತ್ಮನ ಫಲ: ದೇವರ ಪರಿಪೂರ್ಣ ಪ್ರೀತಿಯು ಪ್ರೀತಿ, ಸಂತೋಷ, ಸಮಾಧಾನ, ಧೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ ಸಾಧುತ್ವ ಮತ್ತು ಶಮೆದಮೆ. "ಪ್ರೀತಿಯು ಇರುವಲ್ಲಿ ಹೆದರಿಕೆಯಿಲ್ಲ. ಹೆದರಿಕೆಯು ಯಾತನೆಯನ್ನು ಹೊಂದುತ್ತಾ ಇರುವುದು; ಪೂರ್ಣಪ್ರಿತಿಯು ಹೆದರಿಕೆಯನ್ನು ಹೊರಡಿಸಿಬಿಡುತ್ತದೆ. ಹೆದರುವವನು ಪ್ರೀತಿಯಲ್ಲಿ ಸಿದ್ದಿಗೆ ಬಂದವನಲ್ಲ. (1 ಯೋಹಾನ 4:18).

ಇ. ನಾವು *ಮಾಧ್ಯಮದ ಮೂಲಕ* ನಂಬಿಕೆ ಇಡುತ್ತೇವೆ- ಮಧ್ಯ ಮಾರ್ಗ. ಅನೇಕ ಅತಿರೇಕದ ಸಮಸ್ಯೆಗಳಲ್ಲಿ ನಾವು ಮದ್ಯ ಮಾರ್ಗವನ್ನು ಅವಲಂಬಿಸುತ್ತೇವೆ. ಅತಿರೇಕದ ವಿಷಯಗಳಲ್ಲಿ ವಿವರಗಳ ಬಗ್ಗೆ ನಾವು ಕಡಿಮೆ ಕೇಂದ್ರಿಕರಿಸುತ್ತೇವೆ ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಮದ್ಯಮದ ಮಾರ್ಗವನ್ನು ಆರಿಸಿಕೊಳ್ಳುತ್ತೇವೆ.

## 3. ಭಾವೋದ್ರಿಕ್ತ ಸುವಾರ್ತೆ ಸೇವೆ

ಮಾನವರಿಗಾಗಿ ಯೇಸುವು ತೋರಿದ ಪ್ರೀತಿ ಹಾಗು ಕೃಪೆಗಾಗಿ ಭಾವೋದ್ರಿಕ್ತ ಸುವಾರ್ತೆ ಸೇವೆಯು ನಮ್ಮ ಸ್ಪಂದನೆಯಾಗಿದೆ. ನಜರೆನ್ ಸಭೆಯು ಭಾವೋದ್ರಿಕ್ತ ಸುವಾರ್ತೆ ಸೇವೆಯ ಮೂಲಕ ಆರಂಭವಾಯಿತು. ನಾವು ಯಾರು ಎಂಬುದರ ಹೃದಯಭಾಗವು ಇದೆ ಆಗಿದೆ. ಫಿನೆಹಾಸ್ ಬ್ರೆಸ್ಸೀ ನಜರೆನ್ ಸಭೆಯ ಮೊದಲ ಮೇಲ್ವಿಚಾರಕರು, ಇವರು ತಮ್ಮ ಸುವಾರ್ತೆಯ ಕರೆಯಲ್ಲಿ "ನಾವು ಯಾವ ರೀತಿಯಲ್ಲಿ ಹೊಂದಿದ್ದೆವೋ ಅದೇ ರೀತಿಯಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ಹಿಂತಿರುಗಿಸಿ ಕೊಡಬೇಕಾಗಿದೆ." ಎಂದು ಹೇಳಿದರು ಕ್ರಿಸ್ತನನ್ನು ರಕ್ಷಿಸುವ ನಂಬಿಕೆಯಲ್ಲಿ ಕಂಡುಕೊಳ್ಳುವ ಪ್ರತಿಯೊಬ್ಬ ಮನುಷ್ಯರಿಗೂ ಸಹಾಯ ಮಾಡಲು ಬಯಸುತ್ತೇವೆ.

ಎ. ಭಾವೋದ್ರಿಕ್ತ ಸುವಾರ್ತೆ ಸೇವೆಯು ಯೇಸುವಿನ ಮಾದರಿ;

- 'ಆದರೆ ಜನರ ಗುಂಪುಗಳನ್ನು ನೋಡಿ ಅವರು ಕುರುಬನಿಲ್ಲದ ಕುರಿಗಳ ಹಾಗೆ ತೋಳಲಿ ಬಳಲಿ ಹೋಗಿದ್ದಾರಲ್ಲ ಎಂದು ಅವರ ಮೇಲೆ ಕನಿಕರ ಪಟ್ಟನು. ಆಗ ತನ್ನ ಶಿಷ್ಯರಿಗೆ- ಬೆಳೆಯು ಬಹಳ, ಕೆಲಸದವರು ಸ್ವಲ್ಪ ಅದ್ದರಿಂದ ಬೆಳೆಯ ಯಜಮಾನನನ್ನು- ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ ಎಂದು ಹೇಳಿದನು" (ಮತ್ತಾಯ 9 :36 -38)
- ಯೇಸುವು "ಇನ್ನು ನಾಲ್ಕು ತಿಂಗಳಿಗೆ ಸುಗ್ಗಿ ಬರುವುದೆಂದು ನೀವು ಹೇಳುವುದುಂಟಷ್ಟೇ. ನಿಮ್ಮ ಕಣ್ಣೆತ್ತಿ ಹೊಲಗಳನ್ನು ನೋಡಿರಿ; ಅವು ಬೆಳ್ಳಗಾಗಿ ಕೊಯ್ಲಿಗೆ ಬಂದವೆಂದು ನಿಮಗೆ ಹೇಳುತ್ತೇನೆ" ಎಂದು ಹೇಳಿದನು (ಯೋಹಾನ 4:35).

ಬಿ . *ಭಾವೋದ್ರಿಕ್ತ ಸುವಾರ್ತೆ ಸೇವೆಯು* ಕ್ರಿಸ್ತನಿಂದ ನೀಡಿರುವ ಅದೇಶವಾಗಿದೆ:

- ಆ ಮೇಲೆ ಅವರಿಗೆ ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ ಎಂದು ಹೇಳಿದನು (ಮಾರ್ಕ 16:15)
- ಆತನು ಅವರಿಗೆ "ಕ್ರಿಸ್ತನು ಶ್ರಮೆ ಪಟ್ಟು ಸತ್ತು ಮೂರನೆಯ ದಿನದಲ್ಲಿ ಜೀವಿತನಾಗಿ ಎದ್ದುಬರುವ ನೆಂತಲೂ ಪಾಪಪರಿಹಾರಕೊಸ್ಕರ ದೇವರ ಕಡೆಗೆ ತಿರಿಗಿಕೊಲ್ಲಬೇಕೆಂಬ ಮಾತು ಯೇರುಷಲೆಮು ಮೊದಲುಗೊಂಡು ಸಮಸ್ತ ದೇಶದವರಿಗೂ ಆತನ ಹೆಸರಿನಲ್ಲಿ ಸಾರಲ್ಪಡುವುದೆಂತಲೂ ಬರೆದದೆ, ಎಂದು ಹೇಳಿದನು (ಲೂಕ 24 :46 -47).

ಸಿ. *ಭಾವೋದ್ರಿಕ್ತ ಸುವಾರ್ತೆ ಸೇವೆಯು* ಕ್ರಿಸ್ತನಿಂದ ಬಿಡುಗಡೆಯಾಗಿರುವುದಾಗಿದೆ:

- "ರಾಜ್ಯದ ಈ ಸುವಾರ್ತೆಯು ಲೋಕದಲ್ಲೆಲ್ಲಾ ಎಲ್ಲಾ ಜನಾಂಗಗಳಿಗೆ ಸಾಕ್ಷಿಗಾಗಿ ಸಾರಲ್ಪಡುವದು; ತರುವಾಯ ಅಂತ್ಯಬರುವದು." (ಮತ್ತಾಯ 24:14)
- "ಕಳ್ಳನು ಕದ್ದುಕೊಳ್ಳುವದಕ್ಕೂ ಕೊಲ್ಲುವದಕ್ಕೂ ಹಾಳುಮಾಡು ವದಕ್ಕೂ ಮಾತ್ರ ಬರುತ್ತಾನೇ ಹೊರತು ಮತ್ತಾವದಕ್ಕೂ ಬರುವದಿಲ್ಲ; ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಸಮೃದ್ಧಿಯು ಇರಬೇಕೆಂತಲೂ ಬಂದೆನು."(ಯೋಹಾನ 10 :10)

ಡಿ. *ಭಾವೋದ್ರಿಕ್ತ ಸುವಾರ್ತೆ ಸೇವೆಯು* ಪವಿತ್ರಾತ್ಮನಿಂದ ಬಲಪಡಿಸಲ್ಪಟ್ಟಿದೆ:

- ಆತನು ನಮ್ಮನ್ನು ವ್ಯಯಕ್ತಿಕವಾಗಿ ಮತ್ತು ಸಮೂಹವಾಗಿ ಜೀವಿಸಲು ಹಾಗೂ ಸಾಕ್ಷಿ ಹೇಳಲು ಬಲಪಡಿಸುತ್ತಾನೆ.
- "ಆದರೆ ಪವಿತ್ರಾತ್ಮನು ನಿಮ್ಮ ಮೇಲೆ ಬಂದಾಗ ನೀವು ಬಲವನ್ನು ಹೊಂದುವಿರಿ; ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯದ ಲ್ಲಿಯೂ ಸಮಾರ್ಯದಲ್ಲಿಯೂ ಭೂಮಿಯ ಕಟ್ಟ ಕಡೆಯವರೆಗೂ ನೀವು ನನಗೆ ಸಾಕ್ಷಿಗಳಾಗಿರುವಿರಿ ಎಂದು ಹೇಳಿದನು." (ಅ ಪೋ ಕೃ 1 :8)

ಇ. *ಭಾವೋದ್ರಿಕ್ತ ಸುವಾರ್ತೆ ಸೇವೆಯು* ಪವಿತ್ರಾತ್ಮನಿಂದ ನಿರ್ಮಾಣವಾಗಿದೆ;

- ನಮ್ಮಲ್ಲಿ ಆತನ ಜೀವನವು ಕಾಣಿಸುವಂಥದ್ದು ಮತ್ತು ಕಾರ್ಯಸಾಧಕವಾದದ್ದು.
- "ಆದರೆ ಆತ್ಮನ ಫಲವೇನಂದರೆಪ್ರೀತಿ ಸಂತೋಷ ಸಮಾಧಾನ ದೀರ್ಘಶಾಂತಿ ವಿನಯ ಸದ್ಗುಣ ನಂಬಿಕೆ-- ಸಾತ್ವಿಕತ್ವ ಮಿತವ್ಯಯ ಇಂಥ ವುಗಳೇ; ಇಂಥವುಗಳಿಗೆ ವಿರೋಧವಾಗಿ ನ್ಯಾಯ ಪ್ರಮಾಣವಿಲ್ಲ. ಕ್ರಿಸ್ತನವರು ತಮ್ಮ ಶರೀರವನ್ನು ಅದರ ಇಚ್ಛೆ ದುರಾಶೆ ಸಹಿತವಾಗಿ ಶಿಲುಬೆಗೆ ಹಾಕಿದ್ದಾರೆ. ನಾವು ಆತ್ಮನಲ್ಲಿ ಜೀವಿಸುವದಾದರೆ ನಾವು ಸಹ ಆತ್ಮನಲ್ಲಿ ನಡೆಯೋಣ." (ಗಲಾತಿ 5:22 -25)

ಎಫ್. *ಭಾವೋದ್ರಿಕ್ತ ಸುವಾರ್ತೆ ಸೇವೆಯು* ನಮ್ಮಲ್ಲಿ ಹೊಸ ಜೀವನ ಮಟ್ಟು ಹೊಸ ಶಕ್ತಿಯನ್ನು ವ್ಯಯಕ್ತಿಕ ಹಾಗೂ ಸಭೆಯಲ್ಲಿ ತುಂಬುತ್ತದೆ.

- “ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾಗಿದ್ದಾನೆಹಳೆಯವುಗಳು ಅಳಿದುಹೋದವು .; ಇಗೋ, ಎಲ್ಲವೂ ನೂತನವಾದವು.” (1 ಕೊರಿಂಥ 5:17)
- ಪ್ರತಿ ದಿನ ರಕ್ಷಣೆ ಹೊಂದುತ್ತಿದ್ದವರನ್ನು ಕರ್ತನು ಸಭೆಗೆ ಸೇರಿಸುತ್ತಿದ್ದನು. (ಅ ಪೋ ಕೃ 2 :47ಬಿ).

ಜಿ . *ಭಾವೋದ್ರಿಕ್ತ ಸುವಾರ್ತೆ ಸೇವೆಯು* ಕ್ರಿಸ್ತನಿಗೆ ನಾವು ತೋರಿಸುವ ವಿಧೇಯತೆಯಾಗಿದೆ.

- ಪೌಲನ ಜೀವನವು ಬದಲಾವಣೆ ಹೊಂದಿದ ಜೀವನಕ್ಕೆ ತಳ್ಳಿಹಾಕಲು ಸಾಧ್ಯವಾಗದ ಸಾಕ್ಷಿಯಾಗಿದೆ.
- ಆತನ ಒಂದು ಸಾಕ್ಷಿಯಲ್ಲಿ ಅಪೋಸ್ತಲನು ಹೀಗೆ ಹೇಳುತ್ತಾನೆ., “ನಾನು ಗ್ರೀಕರಿಗೂ ಅನ್ಯಜನರಿಗೂ ಜ್ಞಾನಿಗಳಿಗೂ ಅಜ್ಞಾನಿಗಳಿಗೂ ಋಣಸ್ಥನಾಗಿದ್ದೇನೆ. ಹೀಗೆ ನಾನಾದರೋ ರೋಮ್‌ನಲ್ಲಿರುವ ನಿಮಗೂ ಸುವಾರ್ತೆಯನ್ನುಸಾರಲು ಸಿದ್ಧನಾಗಿದ್ದೇನೆ. ಕ್ರಿಸ್ತನ ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೆಪಡುವದಿಲ್ಲ; ಅದು ಮೊದಲು ಯೆಹೂದ್ಯ ರಿಗೂ ತರುವಾಯ ಗ್ರೀಕರಿಗೂ ಅಂತೂ ನಂಬುವ ಪ್ರತಿಯೊಬ್ಬನಿಗೂ ರಕ್ಷಣೆಗಾಗಿ ದೇವರ ಶಕ್ತಿಯಾಗಿದೆ.”(ರೋಮಪುರದವರಿಗೆ 1:14 -16)

ಹೆಚ್. ಕ್ರಿಸ್ತನಿಗಾಗಿ ಇರುವ ಉತ್ಸುಕತೆಯು ಶ್ರೇಷ್ಠ ಆದೇಶಕ್ಕೆ ಪ್ರಾರಂಭದ ಹೆಜ್ಜೆಯಾಗಿದೆ, (ಮತ್ತಾಯ 28 :19 -20) ನಮ್ಮ ತರಬೇತಿ ಮತ್ತು ಬಲಪಡಿಸುವುದು ಹಿಂಬಾಲಿಸುವುದು.

- ಇದರ ಪ್ರತಿಫಲವಾಗಿ ಎಲ್ಲರೂ ಕ್ರಿಸ್ತನನ್ನು ಅರಿಯಬೇಕು.
- ಹೊಂದಿಕೆಯಲ್ಲಿ ಪ್ರತಿಯೊಬ್ಬರೂ, ವಿಧಾನದಲ್ಲಿ ಮತ್ತು ತಂತ್ರಜ್ಞಾನದಲ್ಲಿ ಕಡಿಮೆ ಅವಕಾಶವಿರುವವರು ಕೂಡ, ಈ ಕರೆಗೆ ಓಗೊಟ್ಟು ಮತ್ತು ಕ್ರಿಸ್ತನ ಬಗ್ಗೆ ತಿಳಿಸಲು ತಿರ್ಮಾನಿಸಬೇಕು.

ಐ. . *ಭಾವೋದ್ರಿಕ್ತ ಸುವಾರ್ತೆ ಸೇವೆಯು* ನಮ್ಮನ್ನು ಈ ಸುವಾರ್ತೆಯನ್ನು ಎಲ್ಲರಿಗೂ ಹಂಚಲು ಪ್ರೇರೇಪಿಸುವ ದೇವರ ಶಕ್ತಿಯ ಮೇಲೆ ಅಧಾರವಾಗುವಂತೆ ಮಾಡುತ್ತದೆ.

- ನಾವು ವಾಕ್ಯವನ್ನು ನಂಬಿಕೆಯಲ್ಲಿ ಓದುತ್ತೇವೆ. ನಂತರ ದೇವರು ಹೇಳಿದ್ದನ್ನು ಬೇರೆಯವರಿಗೆ ತಿಳಿಸುತ್ತೇವೆ.
- ಸುವಾರ್ತೆಯ ಶಕ್ತಿಯು ಸ್ತ್ರೀ ಹಾಗೂ ಪುರುಷರ ಹೃದಯದ ಜೊತೆ ಮಾತಾಡುತ್ತದೆ., ಹುಡುಗ ಮತ್ತು ಹುಡುಗಿಯರು ದೇವರೊಂದಿಗೆ ತಮ್ಮ ಸಂಭಂದವನ್ನು ಸರಿಪಡಿಸಿಕೊಳ್ಳುತ್ತಾರೆ.
- ಯೇಸುವು ನಮಗೆ ಉದಾಹರಣೆಯನ್ನು ನೀಡುತ್ತಾನೆ. ” ಯಾಕಂದರೆ ಮನುಷ್ಯಕುಮಾರನು ತಪ್ಪಿ ಹೋದದ್ದನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು ಎಂದು ಹೇಳಿದನು. (ಲೂಕ 19 :10). “ಇದಾದ ಮೇಲೆ ಆ ದಿವಸಗಳಲ್ಲಿ ಒಂದು ದಿನ ಆತನು ದೇವಾಲಯದಲ್ಲಿ ಜನರಿಗೆ ಬೋಧಿಸುತ್ತಾ ಸುವಾರ್ತೆಯನ್ನು ಸಾರುತ್ತಿದ್ದಾಗ”. (ಲೂಕ 20 :1).

ಜೆ. . *ಭಾವೋದ್ರಿಕ್ತ ಸುವಾರ್ತೆ ಸೇವೆಯು* ಕ್ರಿಸ್ತನನ್ನು ಸಂಪೂರ್ಣವಾಗಿ ಅರಿಯಲು ಪ್ರೋತ್ಸಾಹಿಸುತ್ತದೆ:

- ಇದು ನಾವು ಯಾರು, ನಮ್ಮ ಜೀವನ ಶೈಲಿ ಯನ್ನು ತಿಳಿಸುತ್ತದೆ. ಸುವಾರ್ತೆಗಾಗಿ ನಮ್ಮಲ್ಲಿರುವ ಉತ್ಸಾಹವು ಜೀವನದಲ್ಲಿರುವ ಉತ್ಸಾಹಕ್ಕಿಂತ ದೊಡ್ಡದು. ಜೀವಿಸಲು ನಾವು ಮಾಡಿಕೊಂಡ ಆಯ್ಕೆಯು ನಮ್ಮನ್ನು ಸುವಾರ್ತೆ ಸಾರುವಂತೆ ಮಾಡುತ್ತದೆ.
- ಇದು ನಾವು ಏನು ತಿಳಿದಿದ್ದೇವೆ ಎಂಬುದನ್ನು ತಿಳಿಸುತ್ತದೆ. ಯೇಸುವಿನಿಂದ ಗುಣವಾದ ಕುರುಡನು ಹೇಳಿದ ಸಾಕ್ಷಿಯ ಹಾಗೆ “ಆತನು ಪಾಪಿಯೋ ಅಲ್ಲವೋ ನನಗೆ ಗೊತ್ತಿಲ್ಲ; ಒಂದು ಮಾತ್ರ ಬಲ್ಲೆನು; ಅದೇನಂದರೆ ನಾನು ಕುರುಡನಾಗಿದ್ದೆನು; ಈಗ ನಾನು ನೋಡುತ್ತೇನೆ” (ಯೋಹಾನ 9 :25).
- ಇದು ನಮಗೆ ನೀಡಿರುವ ಅವಕಾಶದಲ್ಲಿ ನಾವು ಎಷ್ಟು ಕೃತಜ್ಞತೆಯಾಗಿದ್ದೇವೆ ಎಂದು ತೋರಿಸುತ್ತದೆ. “ನೀವು ಉಚಿತವಾಗಿ ಹೊಂದಿದ್ದೀರಿ, ಉಚಿತ ವಾಗಿ ಕೊಡಿರಿ.” (ಮತ್ತಾಯ 10 :8ಬಿ).

ಕೆ. *ಭಾವೋದ್ರಿಕ್ತ ಸುವಾರ್ತೆ ಸೇವೆಯು* ನಮ್ಮನ್ನು ಶಿಷ್ಯರಾಗಿರಲು ಪ್ರೇರೇಪಣೆ ನೀಡುತ್ತದೆ.

- ಜೀವನದ ಪ್ರಯಾಣದ ಉದ್ದಕ್ಕೂ, ನಮಗೆ ಗೊತ್ತಿರುವ ಜನರನ್ನು ಪ್ರೆರೆಪಿಸುತ್ತೇವೆ ಮತ್ತು ನಮ್ಮ ನಂಬಿಕೆಯನ್ನು ಇತರರೊಂದಿಗೆ ಹಂಚುವಾಗ ನಮಗೆ ಗೊತ್ತಿಲ್ಲದಂತೆ ಇದನ್ನು ಮಾಡುತ್ತೇವೆ.
- ಪ್ರತಿಯೊಬ್ಬ ಕ್ರೈಸ್ತವನು ಕೂಡ ದೇವರೊಂದಿಗೆ ಅವನ ಹಾಗು ಅವಳ ಸಂಬಂಧದ ಬಗ್ಗೆ ಉದ್ರೆಕವಾಗಿರಬೇಕು, ಇದರಿಂದ ಇತರರೊಂದಿಗೆ ದೇವರ ಬಗ್ಗೆ ಹಂಚಿಕೊಳ್ಳುವುದು ಬಹಳ ಸಹಜವಾಗಿ ಬರುತ್ತದೆ.

ಎಲ್. *ಭಾವೋದ್ರಿಕ್ತ ಸುವಾರ್ತೆ ಸೇವೆಯು* ನಮ್ಮಲ್ಲಿರುವ ಕ್ರಿಯಾಶೀಲತೆಯನ್ನು ಪ್ರೇರೇಪಿಸುತ್ತದೆ.

- ಸಾಧನಗಳು-ಕೆಲವು ಉದಾಹರಣೆಗಳು:ಯೇಸುವಿನ ಚಲನಚಿತ್ರ, ಎವನ್ಜೆಬಲ್, ಎವನ್ಜೆಕುಬೆ.
- ವಿಧಾನಗಳು- ಅನೇಕ ವಿಧಾನಗಳು, ಒಂಡು ಸಂದೇಶ.
- ತಂತ್ರಗಳು- ಬಹು ಜನರ ಸುವಾರ್ತೆ, ಸ್ನೇಹ ಮತ್ತು ವ್ಯಯಕ್ತಿಕ ಸುವಾರ್ತೆ, ಚಿಕ್ಕ ಗುಂಪಿನ, ನಗರ, ಮತ್ತು ಅನೇಕ ವಿಧಾನದ ಸುವಾರ್ತೆಗಳು.

4.ಉದ್ದೇಶಪೂರ್ವಕವಾದ ಶಿಷ್ಯತ್ವ

ಎ. ಯೇಸುವು ಸಭೆಯನ್ನು *ಉದ್ದೇಶಪೂರ್ವಕವಾದ* ಶಿಷ್ಯರನ್ನು ತಯಾರು ಮಾಡಲು ಕರೆದನು.

- "ಆದದರಿಂದ ನೀವು ಹೋಗಿ ಎಲ್ಲಾ ಜನಾಂಗಗಳಿಗೆ ಬೋಧಿಸಿ ತಂದೆಯ, ಮಗನ, ಪರಿಶುದ್ಧಾತ್ಮನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿರಿ; ಇದಲ್ಲದೆ ನಾನು ನಿಮಗೆ ಆಜ್ಞಾಪಿಸಿದ್ದೆಲ್ಲವನ್ನು ಕೈಕೊಳ್ಳುವ ಹಾಗೆ ಅವರಿಗೆ ಬೋಧಿಸಿರಿ; ಮತ್ತು ಇಗೋ, ಲೋಕಾಂತ್ಯದ ವರೆಗೂ ಯಾವಾಗಲೂ ನಾನು ನಿಮ್ಮ ಸಂಗಡ ಇದ್ದೇನೆ ಅಂದನು." (ಮತ್ತಾಯ 28 :19 -20).
- ಸಭೆಯು ಕ್ರಿಸ್ತನ ಹಾಗಿರುವ ಶಿಷ್ಯರನ್ನು ಸಿದ್ದಮಾಡುವ ಉದ್ದೇಶವನ್ನು ಹೊಂದಿದೆ.
- ಕ್ರಿಸ್ತನ ಹಾಗಿರುವ ಶಿಷ್ಯರು ಕ್ರಿಸ್ತನಲ್ಲಿ ಜೀವಿಸುವ ಜನರು, ಕ್ರಿಸ್ತನ ಹಾಗೆ ಬೆಳೆಯುವವರು ಮತ್ತು ಆತನು ಹೇಳುವ ಹಾಗೆ ಮಾಡುವವರು. ಅವರು ಅವರನ್ನು ಮರೆಯುತ್ತಾರೆ, ತಮ್ಮ ಪೂರ್ಣ ಹೃದಯದಿಂದ, ಆತ್ಮದಿಂದ, ಮನಸ್ಸಿನಿಂದ ಮತ್ತು ಶಕ್ತಿಯಿಂದ ದೇವರಿಗೆ ವಿಧೇಯರಾಗಿ ಮತ್ತು ಆತನನ್ನು ಪ್ರೀತಿಸುತ್ತಾರೆ. (ಮಾರ್ಕ 12 :30, ಯೋಹಾನ 15, ಲೂಕ 9).
- ಉದ್ದೇಶಪೂರ್ವಕವಾದ ಸಂಭಂದದ ಶಿಷ್ಯತ್ವವು ಯೇಸುವಿನೊಂದಿಗೆ ಅತ್ಯಂತ ಹತ್ತಿರದ ವಿಧೆಯತೆಯನ್ನು ಬೆಳೆಸಿಕೊಳ್ಳಲು ಸಹಾಯಮಾಡುತ್ತದೆ. ಈ ಸಂಭಂದಗಳಲ್ಲಿ ಕ್ರಿಸ್ತನ ಆತ್ಮವು ಅವರನ್ನು ಕ್ರಿಸ್ತನ ಹಾಗೆ ಮಾರ್ಪಾಟು ಮಾಡುತ್ತದೆ.- ಹೊಸ ವಿಶ್ವಾಸಿಗಳ ಮೌಲ್ಯಗಳನ್ನು ಆ ರಾಜ್ಯದ ಮೌಲ್ಯಗಳಾಗಿ ಮತ್ತು ಬೇರೆಯವನ್ನು ಕುಟುಂಬಕ್ಕೆ, ಸಭೆಗೆ ಮತ್ತು ಲೋಕ್ದಕ್ಕೆ ಅಂಕಿತ ಮಾಡುವ ಆತನ ಕಾರ್ಯದಲ್ಲಿ ಭಾಗಿಯಾಗಿಯಾಗುವಂತೆ ಮಾಡುತ್ತದೆ.

ಬಿ. ಯೇಸುವಿನೊಂದಿಗೆ ವ್ಯಯಕ್ತಿಕ ಸಂಭಂದ ಹೊಂದಲು ನಾವು ವ್ಯಕ್ತಿಗಳನ್ನು ಕ್ರಿಸ್ತನ ಬಳಿಗೆ ತರುವುದರ ಮೂಲಕ ಪ್ರಾರಂಭಿಸುತ್ತೇವೆ.

- ಕೃಪೆಯಿಂದ ನಂಬಿಕೆಯ ಮೂಲಕ ಪಾಪಗಳ ಅರಿಕೆ ಹಾಗು ಪಾಪಗಳ ಕ್ಷಮಾಪಣೆಯ ಮೂಲಕ ನಂಬಿಕೆಯ ಜೀವನವು ಪ್ರಾರಂಭವಾಗುತ್ತದೆ.
- ಕ್ರಿಸ್ತನಲ್ಲಿನ ಈ ಹೊಸ ಸೃಷ್ಟಿಗಳು ಹೊಸದಾಗಿ ಸೃಷ್ಟಿಸಲ್ಪಟ್ಟು ಮತ್ತು ದೇವರ ಕುಟುಂಬದೊಳಗೆ ಸೇರಿಸಲ್ಪಡುತ್ತಾರೆ.
- ಹೊಸ ಜೀವನ ಬದಲಾದ ಹೃದಯವನ್ನು ಹಾಗೂ ಬದಲಾದ ಜೀವನ ಶೈಲಿಯನ್ನು, ಅವರಿಗೆ ಗೊತ್ತಿರುವವರಿಗೆ ದೇವರ ಕೃಪೆಯನ್ನು ತಿಳಿಸುವ ಸಾಕ್ಷಿಗಳಾಗಿರುತ್ತವೆ.
- ಈ ಹೊಸ ವಿಶ್ವಾಸಿಗಳನ್ನು ನಾವು ಬಹು ಬೇಗ ಬೆಳೆಸುತ್ತಾ ಅವರು ಅವರ ಸ್ವಂತಿಕೆಯಿಂದ ರಕ್ಷಿಸಲ್ಪಟ್ಟಿಲ್ಲ ಬದಲಾಗಿ ದೇವರ ಕೃಪೆಯಿಂದ ಅವರು ರಕ್ಷಣೆ ಹೊಂದಿದ್ದಾರೆ ಹಾಗೂ ಅವರು ಅವರಿಗೆ ತಿಳಿದಿರುವವರನ್ನು ಕ್ರಿಸ್ತನ ಬಳಿಗೆ ತರಬೇಕಾಗಿದೆ ಎಂದು ಕಲಿಸುತ್ತೇವೆ. ಅವರು ಶಿಷ್ಯರನ್ನು ತಯಾರು ಮಾಡುವ ಶಿಷ್ಯರಾಗಿ ಬೆಳೆಯುತ್ತಾರೆ.
- ಶಿಷ್ಯತ್ವ ಎನ್ನುವುದು ಕ್ರಿಸ್ತನನ್ನು ಅರಿಯದವರಿಗೆ ಆತನ ಬಗ್ಗೆ ಪರಿಚಯಿಸುವುದಾಗಿದೆ.

ಸಿ. ನಾವು *ಉದ್ದೇಶಪೂರ್ವಕವಾಗಿ* ಕ್ರಿಸ್ತನ ಹಾಗಿರುವ ಶಿಷ್ಯತ್ವವನ್ನು ನಮ್ಮ ಶಕ್ತಿಶಾಲಿಯಾದ ಭೋಧನ ಸಾಧನವಾಗಿ ಉಪಯೋಗಿಸುತ್ತೇವೆ.

- ನಮ್ಮ ಭೋಧಕರು ಕ್ರಿಸ್ತನಲ್ಲಿ ಹೇಗೆ ನಮ್ಮ ನಂಬಿಕೆಯನ್ನು ಬೆಳೆಸಿಕೊಳ್ಳುವುದು ಎಂಬ ಶಿಕ್ಷಣದ ಭೋಧನೆಗಳನ್ನು ಭೋಧಿಸುತ್ತಾರೆ.
- ನಮ್ಮ ಭೋಧಕರು ಸತ್ಯವೇದ ಆಧಾರಿತ ಪ್ರಸಂಗಗಳನ್ನು ಮಾಡುತ್ತಾ ಮತ್ತು ಜನರನ್ನು ಬೆಳವಣಿಗೆಯ ಕಡೆಗೆ ಆರೈಕೆ ಮಾಡುತ್ತಾರೆ ಮತ್ತು ಸತ್ಯವೇದದ ಕಡೆಗೆ ಹೆಚ್ಚಿನ ಹಸಿವೆಯನ್ನು ಹೊಂದಲು ಪ್ರೋತ್ಸಾಹ ನೀಡುತ್ತಾರೆ.
- ನಮ್ಮ ಭೋಧಕರು ತಮ್ಮ ಎಲ್ಲಾ ಶಿಷ್ಯತ್ವದ ಶ್ರಮೆಯಲ್ಲಿ ದೇವರ ವಾಕ್ಯವನ್ನು ಆಧಾರವಾಗಿ ಮಾಡುತ್ತಾರೆ.
- . ನಮ್ಮ ಭೋಧಕರು ಅವರ ಜನರಿಗೆ ಸತ್ಯವೇದವನ್ನು ಹೇಗೆ ಅಧ್ಯಯನ ಮಾಡುವುದು ಹಾಗು ತಮ್ಮ ದೈನಂದಿನ ಜೀವನದಲ್ಲಿ ಹೇಗೆ ಅಳವಡಿಕೊಳ್ಳುವುದು ಎಂಬುದನ್ನು ತಿಳಿಸುತ್ತಾರೆ.
- ನಮ್ಮ ಭೋಧಕರು ವರ್ಷಪೂರ್ತಿ ಹೊಂದಾಣಿಕೆಯಾಗುವ ರೀತಿಯಲ್ಲಿ ವಾಕ್ಯದ ಆಹಾರವನ್ನು ಒದಗಿಸುತ್ತಾರೆ.
- ನಮ್ಮ ಭೋಧಕರು ಕ್ರಿಸ್ತನ ಶಿಷ್ಯತ್ವದಲ್ಲಿ ನಡೆಯಲು ಬೇಕಾದ ಎಲ್ಲಾ ಪ್ರಯತ್ನಗಳಲ್ಲಿ ಪವಿತ್ರಾತ್ಮನ ಶಕ್ತಿಯ ಮೇಲೆ ಅಧಾರವಾಗಿರುತ್ತಾರೆ.
- ಯೇಸುವು ಅನೇಕ ಜನರಿಗೆ ವಾಕ್ಯವನ್ನು ಭೋಧಿಸಿದನು ಮತ್ತು ಚಿಕ್ಕ ಗುಂಪುಗಳಲ್ಲಿ ತನ್ನ ಶಿಷ್ಯರಿಗೆ ಭೋಧಿಸಿದನು.
- ಯೇಸುವು ಸಾಮ್ಯತೆಗಳಿಲ್ಲದೆ ಯಾವುದನ್ನು ಭೋಧಿಸಲಿಲ್ಲ ಇದರಿಂದ ಜನರು ಚೆನ್ನಾಗಿ ಅರಿಯಲು ಸಹಾಯವಾಯಿತು (ಮಾರ್ಕ4:34)

ಡಿ. ನಾವು ಪೋಷಣೆಯನ್ನು ಬೆಳೆಸುವ ಭಾನುವಾರದ ಶಾಲೆಯ ತರಗತಿಗಳನ್ನು ನಡೆಸುತ್ತೇವೆ ಮತ್ತು ಕ್ರಿಸ್ತನ ಹಾಗಿರುವ ಶಿಷ್ಯರನ್ನು ಬೆಳೆಸುತ್ತೇವೆ.

- ನಮ್ಮ ಭಾನುವಾರದ ಶಾಲೆಯ ಉಪಾದ್ಯಾಯರು ತಮ್ಮ ವಾಕ್ಯದ ವಿವರಣೆಯಲ್ಲಿ ಕ್ರಿಸ್ತನ ಹಾಗಿರುವ ಶಿಷ್ಯರನ್ನು ಬೆಳೆಸುವ ಮತ್ತು ದೇವರ ವಾಕ್ಯವನ್ನು ಜೀವನಕ್ಕೆ ಅಳವಡಿಸಿಕೊಳ್ಳುವ ವಿಧಾನವನ್ನು ತಿಳಿಸುತ್ತೇವೆ.
- ನಮ್ಮ ಭಾನುವಾರದ ಶಾಲೆಯ ಉಪಾದ್ಯಾಯರು ಯುವ ವಿಶ್ವಾಸಿಗಳಲ್ಲಿ ವಿಶೇಷವಾದ ಆಸಕ್ತಿಯನ್ನು ತರಗತಿಯ ಹೊರಗೂ ಕೂಡ ತೋರಿಸುತ್ತಾ, ಕ್ರೈಸ್ತವ ವಿಶ್ವಾಸಕ್ಕೆ ಸಂಭಂಧಿಸಿದ ಪ್ರಶ್ನೆಗಳಿಗೆ ಉತ್ತರಿಸುತ್ತಾ ಹಾಗೂ ದೇವರ ಕೃಪೆಯಲ್ಲಿ ಬೆಳೆಯುವಂತೆ ಪ್ರೋತ್ಸಾಹಿಸುತ್ತಾರೆ.

- ನಮ್ಮ ಭಾನುವಾರದ ಶಾಲೆಯ ಉಪದೇಶದ ವಿಧಾನವು ಚಿಕ್ಕ ಮಕ್ಕಳಿಂದ ಹಿಡಿದು ವಯೋವೃದ್ಧ ವರೆಗೂ ಬೇಕಾದ ಕಾರ್ಯಕ್ರಮಗಳನ್ನು ಹೊಂದಿದ್ದು, ಸತ್ಯವೇದವನ್ನು ವ್ಯವಸ್ಥಿತವಾಗಿ ಕಲಿಯಲು ಬೇಕಾದ ಸಹಾಯವನ್ನು ನೀಡುತ್ತದೆ. "ನಡೆಯಬೇಕಾದ ಮಾರ್ಗಕ್ಕೆ ತಕ್ಕಂತೆ ಹುಡುಗನನ್ನು ಶಿಕ್ಷಿಸು ಮುಪ್ಪಿನಲ್ಲಿಯೂ ಓರೆಯಾಗನು. (ಜ್ಞಾನೋಕ್ತಿಗಳು 22:6)

ಇ. ನಾವು ಜವಾಬ್ದಾರಿಯನ್ನು ಪ್ರೋತ್ಸಾಹಿಸುವ ಚಿಕ್ಕ ಸತ್ಯವೇದ ಗುಂಪುಗಳನ್ನು ಬೆಳೆಸುತ್ತೇವೆ.

- ಚಿಕ್ಕ ಸತ್ಯವೇದ ಅಧ್ಯಯನ ಗುಂಪುಗಳು ವಿಶ್ವಾಸದಲ್ಲಿ ಬೆಳೆದಿರುವ ಹಾಗು ಹೊಸ ವಿಶ್ವಾಸಿಗಳ ನಡುವೆ ಒಂದು ರೀತಿಯ ಜವಬ್ದಾರಿಯನ್ನು ಬೆಳೆಸುತ್ತವೆ.
- ಚಿಕ್ಕ ಗುಂಪುಗಳಲ್ಲಿ ಸಾಮಾನ್ಯ ಕೂಟಗಳಿಗಿಂತ ಮಿಗಿಲಾದ ಜೀವನದ ಹಾದಿಯಾಗಿ ಸ್ನೇಹವನ್ನು ಬೆಳಸುವ ಬಾಂಧವ್ಯಗಳು ಬೆಳೆಯುತ್ತವೆ.
- ಈ ಚಿಕ್ಕ ಗುಂಪುಗಳು ಸತ್ಯವೇದ ಅಧ್ಯಯನ ಹಾಗು ಸಾಮಾಜಿಕ ರೀತಿಯಲ್ಲಿ ಕೃಪೆಯ ಸಂಭಂದವನ್ನು ಬೆಳೆಸುತ್ತವೆ.
- ಚಿಕ್ಕ ಗುಂಪುಗಳ ಶಿಷ್ಯತ್ವದ ಗುಂಪುಗಳು ಸಹಾಯ ಮಾಡುವ ವಿಧಾನಗಳಾಗಿ ಭಾನುವಾರದ ಆಚೆಗೂ ಬೆಳೆಯುತ್ತವೆ.

ಎಫ್. ನಾವು ವ್ಯವಸ್ಥಿತವಾದ ಸಭೆಯ ಕಾರ್ಯಕ್ರಮದಿಂದ ಆತ್ಮಿಕ ಬೆಳವಣಿಗೆಯನ್ನು ಪ್ರೋತ್ಸಾಹಿಸುತ್ತೇವೆ.

- ಸತ್ಯವೇದ ಪ್ರಶ್ನಾವಳಿಯಾ ಕಾರ್ಯಕ್ರಮಗಳು.
- ಮಕ್ಕಳ ಯಾತ್ರೆಯ ಸೇವೆ.
- ರಜಾಕಾಲದ ಸತ್ಯವೇದ ಶಾಲೆಗಳು.
- ಕ್ರಿಸ್ಮಸ್ ಹಾಗೂ ಇಸ್ಟೆರ್ ಹೊರಗೆ ಹೋಗಿ ಮಾಡುವ ಕಾರ್ಯಕ್ರಮಗಳು.
- ಅನುಕಂಪದ ಸೇವೆಯ ಪ್ರಯತ್ನಗಳು.
- ಬೇರೆಯವರಿಗಾಗಿ ಮಾಡುವ ಶಿಷ್ಯತ್ವದ ಸೇವೆಗಳು.
- ಪುರುಷರಿಗಾಗಿ, ಸ್ತ್ರೀಯರಿಗಾಗಿ, ಹಿರಿಯ ವ್ಯಕ್ತಿಗಳಿಗಾಗಿ, ಒಂಟಿಯಾಗಿರುವವರಿಗಾಗಿ, ವಿಶೇಷ ಅವಶ್ಯಕತೆಯುಳ್ಳವರಿಗಾಗಿ, ಕ್ರೀಡೆಯ ತಂಡಗಳಿಗಾಗಿ ಮತ್ತು ವಿವಿಧ ರೀತಿಯ ಗುಂಪುಗಳಿಗಾಗಿ ಬೇಕಾದ ಸೇವೆಗಳನ್ನು ಪ್ರೋತ್ಸಾಹಿಸುತ್ತಾ, ಜನರನ್ನು ಕ್ರಿಸ್ತನ ಹಾಗೂ ಆತನ ಸಭೆಯ ಜೊತೆ ಸೇರಿಸಲು ಪ್ರಯತ್ನಿಸುತ್ತೇವೆ.

ಜಿ. ನಾವು ಸಭಿಕರಿಗೆ ಬೆಳೆಯಲು ಮತ್ತು ಅವರ ವ್ಯಯಕ್ತಿಕ ವಿಶ್ವಾಸ ಜೀವನವನ್ನು ವೃದ್ಧಿಪಡಿಸಲು ಸಿಗುವಂತಹ ಎಲ್ಲಾ ವಿಧವಾದ ಸಾಧನಗಳನ್ನು ಉಪಯೋಗಿಸಿಕೊಳ್ಳಲು ಸಹಾಯಮಾಡುತ್ತೇವೆ.

- ಸತ್ಯವೇದವನ್ನು ಅಧ್ಯಯನಗಳ ಸಹಾಯದಿಂದ ಕಲಿಯಲು;ಸತ್ಯವೇದವನ್ನು ಧ್ವನಿಯ ಮೂಲಕ ಕೇಳುವುದು.
- ಪ್ರತಿದಿನ ಪ್ರಾರ್ಥಿಸುವುದು.
- ಕ್ರೈಸ್ತವ ಸಂಗೀತವನ್ನು ಕೇಳುವುದು.
- ಕ್ರೈಸ್ತವ ಸಾಹಿತ್ಯಗಳನ್ನು ಓದುವುದು.
- ಕ್ರಿಸ್ತನ ಹಾಗೆ ಇರಲು ಜವಬ್ದಾರಿಯಿಂದ ಸಹಾಯ ಮಾಡುವ ವ್ಯಕ್ತಿಯ ಜೊತೆ ಪ್ರತಿದಿನ ಪ್ರಾರ್ಥಿಸುವ ವ್ಯಕ್ತಿಯನ್ನು ಹುಡುಕುವುದು.
- ನಿಮ್ಮನ್ನು ಕಠಿಣವಾದ ಪ್ರಶ್ನೆಗಳನ್ನು ಕೇಳುವ ಜವಬ್ದಾರಿಯ ವ್ಯಕ್ತಿಯನ್ನು ಹುಡುಕುವುದು.
- ನಿಮ್ಮ ಜೀವನದಲ್ಲಿ ದೇವರು ಮಾಡುತ್ತಿರುವ ಕಾರ್ಯಗಳನ್ನು ಇತರರೊಂದಿಗೆ ಹಂಚಿಕೊಳ್ಳುವ ಶಿಸ್ತನ್ನು ಬೇಳಿಸಿಕೊಳ್ಳುವುದು.

ಹೆಚ್. ಪ್ರತಿದಿನ ದೇವರ ಸನ್ನಿಧಾನವನ್ನು ಹುಡುಕುವ ಅಭ್ಯಾಸವನ್ನು ಬೆಳೆಸಿಕೊಳ್ಳಲು ವಿಶ್ವಾಸಿಗಳನ್ನು ಪ್ರೋತ್ಸಾಹಿಸುತ್ತೇವೆ.

- ಕ್ರೈಸ್ತವ ಜೀವನವೆಂದರೆ ನಮ್ಮ ದೇವರು ಮತ್ತು ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಜೊತೆ ವ್ಯಯಕ್ತಿಕ ಸಂಬಂಧವನ್ನು ಬೆಳೆಸಿಕೊಳ್ಳುವ ಒಂದು ಮಾರ್ಗವಾಗಿದೆ ಎಂದು ನಾವು ವರ್ಣಿಸಬಹುದು.
- *ಉದ್ದೇಶ ಪೂರ್ವಕವಾದ* ಶಿಷ್ಯತ್ವವು ಕ್ರಿಸ್ತನ ಜೊತೆ ಹೆಚ್ಚು ಸಮಯವನ್ನು ಕಳೆಯುವುದರಿಂದ ಚೆನ್ನಾಗಿ ಬೆಳೆಯುತ್ತದೆ.
- ಅದ್ದರಿಂದ, ಪ್ರತಿದಿನ ನಾವು ಕ್ರಿಸ್ತನ ಸ್ವರವನ್ನು ಕೇಳುತ್ತೇವೆ.; ನಾವು ಪ್ರತಿದಿನ ಆತನ ವಾಕ್ಯದಲ್ಲಿ ಪೋಷಣೆ ಹೊಂದುತ್ತೇವೆ;ನಾವು ಪ್ರತಿದಿನ ಆತನ ಸನ್ನಿಧಿಯನ್ನು ಆನಂದಿಸುತ್ತೇವೆ.
- ಕ್ರಿಸ್ತನ ಹಾಗಿರುವ ಶಿಷ್ಯತ್ವವು ಉದ್ದೇಶಪೂರ್ವಕವಾಗಿ ಆತನನ್ನು ಹುಡುಕುತ್ತದೆ ಮತ್ತು ಅವರ ಜೀವನದಲ್ಲಿ ಬರುವ ಎಲ್ಲಾ ವ್ಯಕ್ತಿಗಳ ಜೊತೆ ಸಿದ್ಧವಾಗಿ ಆತನ ಬಗ್ಗೆ ಹಂಚಿಕೊಳ್ಳುವುದಾಗಿದೆ.

ಐ. ನಾವು ಶಿಷ್ಯರನ್ನು *ಉದ್ದೇಶಪೂರ್ವಕವಾಗಿ* ಬೇರೆಯವನ್ನು ಶಿಷ್ಯರನ್ನಾಗಿ ಮಾಡಲು ಪ್ರೋತ್ಸಾಹಿಸುತ್ತೇವೆ.

- ಶಿಷ್ಯರನ್ನಾಗಿ ಮಾಡಲು ದೇವರು ಆಜ್ಞಾಪಿಸಿ ಮತ್ತು ಅಧಿಕಾರವನ್ನು ನೀಡಿದ್ದಾನೆ. (ಮತ್ತಾಯ 28:19 -20)
- ನಾವು ಪ್ರಾರ್ಥನಾಪೂರ್ವಕವಾಗಿ ವೃದ್ಧಿಗೆ ಬಂದಿರುವ ಕ್ರೈಸ್ತರು ಉದ್ದೇಶಪೂರ್ವಕವಾಗಿ ನಮ್ಮನ್ನು ಶಿಷ್ಯರನ್ನಾಗಿ ಮಾಡಲು ಹಾಗು ಬೆಳೆಸಲು ಬಯಸುತ್ತೇವೆ.

- ಇತರೆ ಚಿಕ್ಕ ಶಿಷ್ಯ ಗುಂಪುಗಳನ್ನು ನಮ್ಮ ಗುಂಪುಗಳ ಜೊತೆ ಸೇರಲು ನಾವು ಪ್ರಾರ್ಥನಾಪೂರ್ವಕವಾಗಿ ಆಹ್ವಾನಿಸುತ್ತೇವೆ.
- ನಾವು ದೇವರನ್ನು ಹುಡುಕುವ ಹಾಗೆ ನಮ್ಮ ಜೀವನಗಳನ್ನು ಇವರಿಗಾಗಿ ಮುಡುಪಾಗಿಡುತ್ತೇವೆ.
- ಸತ್ಯವೇದವನ್ನು ಕಥೆಯ ರೂಪದಲ್ಲಿ ಕಲಿಯುವುದರಿಂದ ಚಿಕ್ಕ ಗುಂಪುಗಳಲ್ಲಿ ಇದು ಹೆಚ್ಚಾಗಿ ಪರಿಣಾಮಕಾರಿಯಾಗಿ ಕೆಲಸ ಮಾಡಿ ಅದರ ಮೂಲಕ ಬೇರೆಯವರಿಗೆ ಹೆಚ್ಚಾಗಿ ಸುವಾರ್ತೆಯನ್ನು ಸಾರುವ ಅವಕಾಶಗಳು ಲಭಿಸುತ್ತವೆ.
- ಪ್ರಾರ್ಥನೆ. ದೇವರ ವಾಕ್ಯ, ಮತ್ತು ಉದ್ದೇಶಪೂರ್ವಕವಾಗಿ ಬೇರೆಯವರನ್ನು ಕ್ರಿಸ್ತನ ಹಾಗೆ ಜೀವಿಸಲು ಸಹಾಯ ಮಾಡುವುದರಿಂದ ಸಭೆಯಲ್ಲಿ ದೃಢವಾದ ಶಿಷ್ಯತ್ವವು ಬೆಳೆಯುತ್ತದೆ.

## 5.ಸಭೆಯ ಬೆಳವಣಿಗೆ.

ಎ. ಕ್ರೈಸ್ತವ ಸಭೆಯು ಕ್ರಿಸ್ತನೊಂದಿಗೆ ಪ್ರಾರಂಭವಾಗಿದೆ, ಆತನು ವಿಶ್ವಾಸಿಯ ಮೊದಲ ಸಮುದಾಯವನ್ನು ಪ್ರಾರಂಭಿಸಿದನು.

- ವಿಶ್ವಾಸದ ಸಮುದಾಯವು ನಿರಂತರವಾಗಿ ದೇವರನ್ನು ಆರಾಧಿಸಲು ಸೇರುತ್ತಿತ್ತು.
- ಅದು ಬೆಳೆಯಲು ಪ್ರಾರಂಭಿಸಿತು ಮತ್ತು ಪೌಲನು ಹಾಗೂ ಬರ್ನಾಬಾಸ ರ ಮೊದಲ ಸುವಾರ್ತಾ ಪ್ರಯಾಣದಿಂದ ಹೊಸ ಸಭೆಗಳು ಹುಟ್ಟಿಕೊಂಡವು. (ಅ. ಪೋ. ಕೃ. 13-14)

ಬಿ. ಪೌಲನು ಸಭೆಗಳನ್ನು ಸ್ತಾಪಿಸಲು ಎರಡನೇಯ ಸುವಾರ್ತ ಪ್ರಯಾಣವನ್ನು ಆರಂಭಿಸಿದನು, ಆದರೆ ಪವಿತ್ರಾತ್ಮನು ಅವರನ್ನು ಬೇರೆಯ ದಿಕ್ಕುಗಳಿಗೆ ನಡೆಸಿದನು. (ಅ. ಪೋ. ಕೃ. 16).

- ದೇವರ ಕೆಲಸಕ್ಕಾಗಿ ನಾವು ಯಾವಾಗಲೂ ಕೂಡ ತೆರೆದ ಮನಸ್ಸಿನಿಂದ ಇರಬೇಕು ಮತ್ತು ಆತನ ಅತ್ಮನಿಂದ ನಡೆಸಲ್ಪಡಬೇಕು.
- ಪೌಲನಿಗೆ ದರ್ಶನವಾಯಿತು. ಅದು ಬೇರೆ ಜನರಿಂದ ಅಥವಾ ಸಮುದಾಯ ಸಮೀಕ್ಷೆಯಿಂದ ಬರಲಿಲ್ಲ. ಅದು ದೇವರ ಹೃದಯದಿಂದ ಬಂತು. ನಮ್ಮ ಹೊಸ ಸಭೆಗಳನ್ನು ಸ್ಥಾಪಿಸುವ ದರ್ಶನವು ಕೂಡ ದೇವರಿಂದ ಬರಬೇಕು.
- ಪೌಲನಿಗೆ ಒಬ್ಬ ಮನುಷ್ಯನ ದರ್ಶನವಾಯಿತು. ಅದು ಒಂದು ನಕ್ಷೆಯ, ವಿಧಾನದ, ಒಂದು ಹೇಳಿಕೆಯ, ನಿಲಿನಕ್ಷೆಯ ಅಥವಾ ಒಂದಿ ಕಾರ್ಯಕ್ರಮದ ದರ್ಶನವಲ್ಲ. ಪೌಲನ ದರ್ಶನ ಕಳೆದು ಹೋದ ಮಾನವರ ಬಗ್ಗೆ ಯಾಗಿತ್ತು. ಕ್ರಿಸ್ತನೊಂದಿಗೆ ಸಂಭಂಧವನ್ನು ಬೆಳೆಸುವಂತಹ ಅಸೆಯುಳ್ಳ ಕಳೆದುಹೋದ ಜನರನ್ನು ಹುಡುಕುವುದಕ್ಕಾಗಿ ನಾಮಾ ಹೊಸ ಸಭೆಯ ಸ್ಥಾಪನೆಯ ದರ್ಶನ ಬರಬೇಕು.
- ಪೌಲನಿಗೆ ಮೇಸಿಡೋನಿಯದಿಂದ ಬಂದ ಮನುಷ್ಯನ ದರ್ಶನವಾಯಿತು. ಈ ಮನುಷ್ಯನು ಒಂದು ನಿರ್ಧಿಷ್ಟವಾದ ಸ್ಥಳ,ಸಂಸ್ಕೃತಿ,ಭಾಷೆ, ಮತ್ತು ಚರಿತ್ರೆಗೆ ಸೇರಿದವನಾಗಿದ್ದನು. ದೇವರು ನಮಗೂ ಕೂಡ ನಿರ್ಧಿಷ್ಟವಾದ ಗುಂಪು ಅಥವಾ ಸಮುದಾಯದ ದರ್ಶನವನ್ನು ನೀಡುತ್ತಾನೆ. ನಾವು ದೇವರು ನಮಗಾಗಿ ಇರಿಸಿರುವ ದರ್ಶನವನ್ನು ಕಂಡುಕೊಂಡು ಅದಕ್ಕೆ ವಿಧೇಯರಾಗಬೇಕು.
- ಪೌಲನಿಗೆ ಮೇಸಿಡೋನಿಯದಿಂದ ಬಂದ ಮನುಷ್ಯನು ನಿಂತಿರುವ ದರ್ಶನವಾಯಿತು. ಈ ಮನುಷ್ಯನು ಪೌಲನಿಗಿಂತ ಕಡಿಮೆಯವನಾಗಿರಲಿಲ್ಲ. ನಾವು ಒಬ್ಬರ ಕಣ್ಣನ್ನು ಮತ್ತೊಬ್ಬರು ನೋಡುತ್ತೇವೆ. ನಾನು ಸುವಾರ್ತೆಯೊಂದಿಗೆ ಹೋಗುವ ಮನುಷ್ಯನು ನನಗೆ ಸರಿಸಾಟಿಯೇ ಎಂದು ನೋಡುತ್ತೇವೆ.
- ಪೌಲನಿಗೆ ಮೇಸಿಡೋನಿಯದಿಂದ ಬಂದ ಮನುಷ್ಯನು ನಿಂತುಕೊಂಡು ಕೂಗುತ್ತಿರುವ ದರ್ಶನವಾಯಿತು. "ಬಂದು ನಮಗೆ ಸಹಾಯ ಮಾಡಿರಿ!" ಇಂತಹ ದರ್ಶನಗಳು ನಮ್ಮನ್ನು ಮುನ್ನಡೆಸುತ್ತವೆ. ನಾವು ನಮ್ಮ ನಗರಗಳಿಗೆ,ನೆರೆಹೊರೆಯ ಪ್ರದೇಶಗಳಿಗೆ, ಕುಲ, ಮತ, ಹಾಗೂ ಕುಟುಂಬಗಳಿಗೆ ಹೋಗಬೇಕು. ನಾವು ಈ ಲೋಕಕ್ಕೆ ಕ್ರಿಸ್ತನನ್ನು ತರಬೇಕಾಗಿದೆ.

ಸಿ. ದೇವರು ಪೌಲನಿಗೆ ತನ್ನ *ಸಭೆಯ ಬೆಳವಣಿಗೆಯನ್ನು* ವಿವರಿಸಿದ ಹಾಗೆ ತನ್ನ ಸಭೆಯಲ್ಲಿ ನಿರಂತರವಾದ ದೈವಿಕವಾದ ನಾಯಕತ್ವ ಮಹತ್ವವನ್ನು ತಿಳಿಸಿದನು.

- ಮೇಸಿಡೋನಿಯದಿಂದ ಬಂದ ಆ ಮನುಷ್ಯನು ಸ್ತ್ರಿಯಾಗಿದ್ದನು. ಫಿಲಿಪ್ಪಿ ಯಾ ಲಿಡಿಯಾ ಈ ಸುವಾರ್ತೆಯ ಅವಕಾಶದ ಮೊದಲ ಗ್ರಹಿಸುವ ವ್ಯಕ್ತಿಯಾದಳು.
- ಪೌಲನು ನದಿಯ ತೀರದಲ್ಲಿ ಪ್ರಾರ್ಥಿಸುತ್ತಿದ್ದ ಮಹಿಳೆಯರಲ್ಲಿ ಅನೇಕ ಮಂದಿ ಸುವಾರ್ತೆಯನ್ನು ಗ್ರಹಿಸುವ ವಿಶ್ವಾಸಿಗಳಾಗಿ ಪಡೆದನು.
- ತನ್ನ ಹಿಂದಿನ ಸಭೆಯ ಪ್ರಾರಂಭಕ್ಕಾಗಿ ಯೆಹೂದ್ಯರ ಸಭೆಯನ್ನು ಉಪಯೋಗಿಸದ ಹಾಗೆ ಮಾಡದೆ ಈ ಬಾರಿ ಸಭೆಯನ್ನು ಮನೆಯಲ್ಲಿ ಪ್ರಾರಂಭಿಸಿದನು.
- ಬೆಲೆಬಾಳುವ ವಸ್ತ್ರಗಳ ವ್ಯಾಪಾರಿಯಾಗಿದ್ದ ಲಿಡಿಯಾ, ಈ ಮನೆಯ ಸಭೆಯನ್ನು ನಡೆಸಿದಳು.
- ಸಭೆಯ ಬೆಳವಣಿಗೆಗಾಗಿ ಇರುವ ವಿಧಾನಗಳು ಯಾವಾಗಲೂ ಕೂಡ ಹಿಂದಿನ ವಿಧಾನಗಳ ಹಾಗೆ ಇರುವುದಿಲ್ಲ.

ಡಿ. *ಸಭೆಯ ಸ್ಥಾಪನೆ* ದೊಡ್ಡ ತ್ಯಾಗವನ್ನು ಬಯಸುತ್ತದೆ.

- ಸುವಾರ್ತೆಯ ಪ್ರಯತ್ನಗಳು ಪೌಲ ಮತ್ತು ಸೀಲರನ್ನು ಸೆರೆಮನೆಯಲ್ಲಿ ಇರಿಸಿದವು. ಅವರು ತಮ್ಮ ವ್ಯಯಕ್ತಿಕ ತ್ಯಾಗ ಮಾಡಿದರು. ಅವರು ದೇವರಿಗಾಗಿ ಕಷ್ಟ ಪಡುವಾಗ ಹಾಡುಗಳನ್ನು ಹಾಡಿದರು. (ಅ. ಪೋ. ಕೃ. 16:25).
- ಈ ದಿನಗಳಲ್ಲಿ ಸಭೆಯ ನಾಯಕರು ಹಾಗೂ ಕ್ರಿಸ್ತನ ಹಿಂಬಾಲಕರು ಸಭೆಯನ್ನು ಪ್ರಾರಂಭಿಸುವಾಗ ಅದೇ ರೀತಿಯ ಕಷ್ಟಗಳನ್ನು ಅನುಭವಿಸುತ್ತಾರೆ. ಇದು ಅನೇಕ ಘಂಟೆಗಳ ಪ್ರಾರ್ಥನೆ, ಕಣ್ಣೀರು, ಶ್ರಮ, ಪ್ರಯತ್ನ, ಹಣ ಮತ್ತು ಕೆಲವು ಸಮಯಗಳಲ್ಲಿ ಹೊಸ ಸಭೆಗಳನ್ನು ಸ್ಥಾಪಿಸಲು ರಕ್ತವನ್ನು ಕೂಡ ಹರಿಸಬೇಕಾಯಿತು.
- ಪೌಲ ಮತ್ತು ಸೀಲರ ವ್ಯಯಕ್ತಿಕ ಕಷ್ಟಗಳ ಹೊರತಾಗಿಯೂ ಫಿಲಿಪ್ಪಿಯಲ್ಲಿಯ ಸೆರೆಮನೆಯ ನಾಯಕನನ್ನು ಅವರ ಹೊಸ ಭೋಧಕನಾಗಿ ಹೊಸ ಸಭೆಯು ಮನೆಯಲ್ಲಿ ಆರಂಭವಾಯಿತು.

ಇ. ನಮ್ಮ ಪರಿಸ್ಥಿತಿಗಳ ಹೊರತಾಗಿಯೂ ನಾವು ಪರಿಶುದ್ಧಾತ್ಮನ ಸನ್ನಿಧಿಯಲ್ಲಿ ಹಾಗೂ ದೇವರ ಪ್ರಸನ್ನತೆಯಲ್ಲಿ ಜೀವಿಸಬೇಕಾಗುತ್ತದೆ.

- ಪೌಲ ಮತ್ತು ಸೀಲರು ಅವರಿಗೆ ಬಿದ್ದ ಹೊಡೆತಗಳನ್ನು ಗಮನಿಸಲಿಲ್ಲ ಮತ್ತು ಸೆರೆಮನೆಯಲ್ಲಿ ಕಳೆದ ರಾತ್ರಿಯನ್ನು ವ್ಯಯಕ್ತಿಕ ನಷ್ಟವೆಂದು ಪರಿಗಣಿಸಲಿಲ್ಲ. ಬದಲಾಗಿ, ನಕಾರಾತ್ಮಕ ಸನ್ನಿವೇಶಗಳಲ್ಲಿಯೂ ಕೂಡ ದೇವರು ಅವರಿಗೆ ಜಯವನ್ನು ನೀಡುತ್ತಾನೆ ಎಂದು ನಂಬಿದರು.
- ಪೌಲ ಮತ್ತು ಸೀಲರು ತಾವು ದೇವರ ಆತ್ಮನಿಂದ ನಡೆಸಲ್ಪಡುತ್ತಿದ್ದಾರೆ ಎಂದು ಗಮನಿಸಿದರು; ಆತನು ಅವರನ್ನು ಕಾಪಾಡುತ್ತಾನೆ ಎಂದು ಅರಿತರು.
- ಫಿಲಿಪ್ಪಿಯಲ್ಲಿಯ ಸೆರೆಮನೆಯಲ್ಲಿ ಉಂಟಾದ ಭೂಕಂಪವು ದೇವರು ಇನ್ನೂ ಇಂತಹ ಕಾರ್ಯಗಳಲ್ಲಿ ನಿಯಂತ್ರಣದಲ್ಲಿದ್ದಾನೆಂದು ತೋರಿಸುತ್ತದೆ. (ಅ. ಪೋ. ಕೃ. 16:25-26). ಸೇವೆಯ ಕಷ್ಟದ ಸಮಯದಲ್ಲಿ ಆತನು ನಮ್ಮನ್ನು ಮರೆಯುವುದಿಲ್ಲ.
- ದೇವರಿಗೆ ವಿಧೇಯರಾಗಿ ಮತ್ತು ಆತನ ಚಿತ್ತವನ್ನು ನಡೆಸಿದಾಗ ಈ ರೀತಿಯ ಸಮಯಗಳಲ್ಲಿ ದೇವರು ಆತನ ಸಮಯದಲ್ಲಿ ತನ್ನ ಶಕ್ತಿಯಿಂದ ಭಾಗಿಯಾಗುತ್ತಾನೆ. ಕೆತ್ತತನವು ದೇವರ ಕೆಲಸವನ್ನು ಅದ್ದಿಪಡಿಸುವಾಗಲೂ ಕೂಡ ದೇವರಿ ಅಂತಿಮ ಜಯವನ್ನು ಗಳಿಸುತ್ತಾನೆ.
- ನಾವೊಬ್ಬರೇ ದೇವರ ರಾಜ್ಯವನ್ನು ಕಟ್ಟುತ್ತಿಲ್ಲಅಥವಾ ಆತನ ರಾಜ್ಯವನ್ನು ಮುಂದೆ ಸಾಗಿಸುತ್ತಿಲ್ಲ; ದೇವರು ತನ್ನ ರಾಜ್ಯವನ್ನು ಕಟ್ಟುತ್ತಿದ್ದಾನೆ.

ಎಫ್. *ಸಭೆಯ ಸ್ಥಾಪನೆಯ* ವಿಧಾನಗಳು ಸಭೆಯ ಚರಿತ್ರೆಯುದ್ದಕ್ಕೂ ಬದಲಾಗಿವೆ.

- ಸಭೆಯ ಚರಿತ್ರೆಯ ಮೊದಲ 400 ವರ್ಷಗಳಲ್ಲಿ ಯಾವುದೇ ರೀತಿಯ ಕಟ್ಟಡಗಳನ್ನು ಕಟ್ಟಲಿಲ್ಲ.
- ಸಭೆಯ ಕಟ್ಟಡಗಳನ್ನು ಪ್ರತಿಷ್ಠೆಪಡಿಸುವುದು, ಆಸ್ತಿಗಳನ್ನು ಕೊಳ್ಳುವುದು, ಹಾಗೂ ಭೋಧಕರನ್ನು ನಿಯಮಿಸುವುದು ನಂತರದ ಕಾಲದಲ್ಲಿ ಬಂತು.
- ನಜರೆನ್ ಸಭೆಯಲ್ಲಿ ಸಭೆಯ ವಿವರಣೆ ಹೀಗೆ ಇದೆ: ಆತ್ಮಿಕ ಬೆಳವಣಿಗೆಗಾಗಿ, ಆರಾಧನೆ, ಆಥವಾ ಸೂಚನೆಗಳಿಗಾಗಿ ಒಂದು ನಿರ್ಧಿಷ್ಟ ಸ್ಥಳದಲ್ಲಿ, ನಿಯಮಿತವಾದ ನಾಯಕನ ಅಧ್ಯಕ್ಷತೆಯಲ್ಲಿ, ಮತ್ತು ನಜರೆನ್ ಸಭೆಯ ಸಂದೇಶ ಹಾಗೂ ಧ್ಯೆಯಗಳನ್ನು ಹಿಂಬಾಲಿಸುವ ಗುಂಪನ್ನು ಸಭೆಯಾಗಿ ಗುರುತಿಸಿ ಅದನ್ನು ತಾಲೂಕು ಮಟ್ಟದಲ್ಲಿ ಅದನ್ನು ಗುರುತಿಸಿ (ಮೇಲ್ವಿಚಾರಕರ ಮಂಡಳಿಗೆ) ತಿಳಿಸುತ್ತೇವೆ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಸಭೆಯೆಂದರೆ ವಿಶ್ವಾಸಿಗಳ ಗೊಂಚಲು ಹೊರೆತು ಅದು ಕಟ್ಟಡ ಹಾಗೂ ಆಸ್ತಿಗಳು ಅಲ್ಲ.
- ಪರಿಶುದ್ಧಾತ್ಮನು ಸಭೆಯು ಹೊಸ ರೀತಿಯಲ್ಲಿ ಬೆಳೆಯಲು ಸಹಾಯ ಮಾಡುತ್ತಿದ್ದಾನೆ.
- ಪ್ರತಿಯೊಂದು ಸಭೆಯು ಕೂಡ ಮತ್ತೊಂದು ಚಿಕ್ಕ ಸಭೆಯನ್ನು ಬೆಳೆಸಬೇಕಾಗುತ್ತದೆ.
- ಈ ಚಿಕ್ಕ ಸಭೆಗಳು ಮನೆಗಳಲ್ಲಿ ಅಥವಾ ಸ್ಥಳಗಳಲ್ಲಿ ಸೇರಿ ಆರಾಧಿಸಬೇಕು.
- ಪ್ರತಿಯೊಬ್ಬ ಭೋಧಕರು ಜೊತೆಯಾಗಿ ಕೆಲಸಮಾಡುವ ಸ್ವಯಂ ಸೇವಕರು ಸುವಾರ್ತೆಯಲ್ಲಿ ತರೆಬೇತಿಯನ್ನು ಪಡೆದವನಾಗಿರಬೇಕು.
- ಈ ವಿಧಾನಗಳಲ್ಲಿ ಹೊಸ ಸಭೆಗಳನ್ನು ಸ್ಥಾಪಿಸಲು ಹಣಕಾಸಿನ ಅಗತ್ಯವಿರುವುದಿಲ್ಲ. ಪ್ರತಿಯೊಬ್ಬ ಸಭಿಕರೂ ಕೂಡ ಹೊಸ ಸಭೆಯನ್ನು ಸ್ಥಾಪಿಸಲು ದೇವರು ನಿಡುವ ಕರೆಯನ್ನು ಅಂಗಿಕರಿಸಬಹುದು.
- ಈ ವಿಧಾನವು ದೇವರು ತನ್ನ ಸಭೆಗಳನ್ನು ಲೋಕದ ಎಲ್ಲಾ ಹೊಸ ಸ್ಥಳಗಳಲ್ಲಿ ಬೆಳೆಸಲು ಸಹಾಯಮಾಡುತ್ತದೆ; ದರ್ಶನವನ್ನು ತೆಗೆದುಕೊಳ್ಳುವ ಅಂಕಿತ ಮನೋಭಾವದ ಹೃದಯಗಳು ಮತ್ತು ಆತನಿಂದ ನಡೆಸಲ್ಪಡುವ ಮನಸ್ಸುಗಳು ಆತನಿಗೆ ಬೇಕಾಗಿವೆ.

ಜಿ. ಸಭೆಯ ಬೆಳವಣಿಗೆಯ ಉದ್ದೇಶವು ಕ್ರಿಸ್ತನಿಗಾಗಿ ಹೊಸ ಜನರನ್ನೂ ತಲುಪುವುದಾಗಿದೆ.

- ಯೇಸುವು "ಆದರೆ ಆತನು ಅವರಿಗೆಬೇರೆ ಪಟ್ಟಣಗಳಿಗೂ ದೇವರ ರಾಜ್ಯವನ್ನು ನಾನು ಸಾರಲೇಬೇಕು--; ಇದಕ್ಕಾಗಿಯೇ ನಾನು ಕಳುಹಿಸಲ್ಪಟ್ಟಿದ್ದೇನೆ" ಎಂದು ಹೇಳಿದನು. (ಲೂಕ 4:43).
- ನಾವು ಸಭೆಯ ಅಭಿವೃದ್ಧಿಗಾಗಿ ಅರ್ಪಣೆ ಮಾಡಿರುವ ಶಿಷ್ಯರಾಗಿ ದೇವರ ರಾಜ್ಯಕ್ಕಾಗಿ ಕ್ರಿಸ್ತನ ರಾಯಭಾರಿಗಳಾಗಿದ್ದೇವೆ.
- ಸಂಸ್ಥೆಯನ್ನು ಕಾಪಾಡುವುದು ನಮ್ಮ ಉದ್ದೇಶವಲ್ಲ.
- ಯೇಸು ಕ್ರಿಸ್ತನ ರಕ್ಷಿಸುವ ಜ್ಞಾನಕ್ಕೆ ಸಾಧ್ಯವಾದಷ್ಟು ಜನರನ್ನು ಸೇರಿಸಬೇಕು.

- ಈ ಹೊಸ ವಿಶ್ವಾಸಿಗಳನ್ನು ಕ್ರಿಸ್ತನ ಮಾದರಿಯಲ್ಲಿ ಬದಲಾವಣೆಮಾಡಬೇಕು.
- ಯೇಸು "ನೀವು ಸುಗ್ಗಿಯು ಬರುವದಕ್ಕೆ ಇನ್ನೂ ನಾಲ್ಕು ತಿಂಗಳುಗಳು ಇವೆಯೆಂದು ಹೇಳುತ್ತೀರಲ್ಲವೋ? ಮತ್ತುಇಗೋ--, ನಿಮ್ಮ ಕಣ್ಣುಗಳನ್ನು ಮೇಲಕ್ಕೆತ್ತಿ ಹೊಲಗಳನ್ನು ನೋಡಿರಿ, ಯಾಕಂದರೆ ಅವು ಈಗಾ ಗಲೇ ಬೆಳ್ಳಗಾಗಿ ಕೊಯ್ಲಿಗೆ ಬಂದವೆ ಎಂದು ನಾನು ನಿಮಗೆ ಹೇಳುತ್ತೇನೆ"ಎಂದು ಹೇಳಿದನು (ಯೋಹಾನ 4:35).

## 6. ಪರಿವರ್ತನೆಯ ನಾಯಕತ್ವ.

ಎ. ಕ್ರಿಸ್ತನ ಮಾದರಿಯ ನಾಯಕತ್ವವನ್ನು ಬೆಳೆಸಲು ನಾವು ಬಯಸುತ್ತೇವೆ. ಯೇಸುವು ನಮ್ಮ ಉದಾಹರಣೆ. ಅದ್ದರಿಂದ . ಪರಿವರ್ತನೆಯ ನಾಯಕನು ಕ್ರಿಸ್ತನ ಹಾಗಿರುವ ನಾಯಕನು.

ಬಿ. ಪರಿವರ್ತನೆಯ ನಾಯಕರು ಒಪ್ಪಿಸಿಕೊಳ್ಳುವ ಹಾಗೂ ವಿನಯವಂತರು.

- ತಂದೆಯ ಚಿತ್ತಕ್ಕೆ ವಿಧೇಯನಾದ ಕ್ರಿಸ್ತನ ಮಾದರಿಯನ್ನು ಅವರು ಹಿಂಬಾಲಿಸುತ್ತಾರೆ. (ಫಿಲಿಪ್ಪಿ 2:5-8).
- ಅವರು ತಮ್ಮ ಅವಶ್ಯಕತೆಗಳನ್ನು ಪೂರೈಸಲು ಹಾಗು ತಮ್ಮ ಪ್ರಾರ್ಥನೆಗಳಿಗೆ ಉತ್ತರ ಹುಡುಕಲು ದೇವರ ಮೇಲೆ ಅಧಾರವಾಗಿರುತ್ತಾರೆ. (ಯೋಹಾನ 15:7).
- ಅವರು ಹಿರಿಯರ ಅಧಿಕಾರಕ್ಕೆ ಒಳಪಟ್ಟು ಮತ್ತು ತಮ್ಮ ಬಗ್ಗೆ ವಿನಯವಾಗಿ ಆಲೋಚಿಸುತ್ತಾರೆ. (ಎಫೆಸದವರಿಗೆ 5:21).

ಸಿ. ಪರಿವರ್ತನೆಯ ನಾಯಕರು ಸೇವಕರಾಗಿರುತ್ತಾರೆ.

- ಯೇಸುವು ಸೇವೆ ಮಾಡಿಸಿಕೊಳ್ಳಲು ಬರಲಿಲ್ಲ, ಬದಲಾಗಿ ಆತನು ಸೇವೆ ಮಾಡಲು ಬಂದನು ಎಂಬ ಮಾದರಿಯನ್ನು ಅವರು ಹಿಂಬಾಲಿಸುತ್ತಾರೆ (ಮಾರ್ಕ 10:45; ಮತ್ತಾಯ 20;28)
- ಅವರು ಈ ರೀತಿಯ ಸೇವಕರ ಆತ್ಮ ಹಾಗು ಗುಣಗಳಿಂದ ಕಲಿಯುತ್ತಾರೆ (ಫಿಲಿಪ್ಪಿ 2).

ಡಿ. ಪರಿವರ್ತನೆಯ ನಾಯಕರು ದರ್ಶನವುಳ್ಳ ನಾಯಕರಾಗಿರುತ್ತಾರೆ.

- "ದರ್ಶನವಿಲ್ಲದಿರುವಲ್ಲಿ ಜನರು ನಾಶವಾಗುತ್ತಾರೆ; ನ್ಯಾಯಪ್ರಮಾಣವನ್ನು ಕೈಕೊಳ್ಳುವವನು ಧನ್ಯನು" (ಜ್ಞಾನೋಕ್ತಿಗಳು 29:18)
- "ಆಗ ಕರ್ತನು ನನಗೆ ಉತ್ತರಕೊಟ್ಟು ಹೇಳಿದ್ದೇ ನಂದರೆದರ್ಶನವನ್ನು ಬರೆ--; ಓದುವವನು ಶೀಘ್ರ ವಾಗಿ ಓದುವಂತೆ ಅದನ್ನು ಹಲಗೆಗಳ ಮೇಲೆ ಕೆತ್ತು" (ಹಬಕ್ಕೂಕ 2:2)
- ಯೇಸುವು ಪರಲೋಕದ ದರ್ಶನವನ್ನು ಸಿದ್ಧಪದಿಸಿದನು; ನಾವು ಕೂಡ ಬೇರೆಯವರು ಅದನ್ನು ಅರಿಯಲು ಅದೇ ರೀತಿಯಲ್ಲಿ ದರ್ಶನವನ್ನು ಸಿದ್ಧಪಡಿಸಬೇಕು.
- ಈ ಗುಣಗಳು ನಾಯಕರು ಹಾಗೂ ಹಿಂಬಾಲಕರಲ್ಲಿ ಕಾಣಬೇಕು.
- ದರ್ಶನವುಳ್ಳ ನಾಯಕರು ಸಭೆಗಾಗಿ ಹಾಗೂ ಸಮುದಾಯಕ್ಕಾಗಿ ಮತ್ತು ಬೇರೆಯವರಿಗಾಗಿ ದೇವರ ದರ್ಶನಕ್ಕಾಗಿ ಹುಡುಕುತ್ತಾರೆ.

ಇ. ಪರಿವರ್ತನೆಯ ನಾಯಕರು ವಿಧಾನಪೂರ್ವಕವಾಗಿ ಕೆಲಸಮಾಡುತ್ತಾರೆ.

- ಅವರ ಸಮುದಾಯಕ್ಕಾಗಿ ದೇವರು ನೀಡಿರುವ ದರ್ಶನವನ್ನು ದೇವರ ರಾಜ್ಯದ ಸಾಧನೆಯಾಗಿ ಅವರು ಬದಲಾವಣೆ ಮಾಡುತ್ತಾರೆ.
- ಅವರು ಈ ಸಮಯದಲ್ಲಿ ಎದುರಾಗುವ ಸನ್ನಿವೇಶಗಳಲ್ಲಿ ಇಸಾಕರನ ಮಕ್ಕಳ ಹಾಗೆ ಸತ್ಯವೇದದಲ್ಲಿ ಉತ್ತರವನ್ನು ಹುಡುಕುವರು.
- ಅವರು ದೇವರ ರಾಜ್ಯಕ್ಕಾಗಿ ಹುಡುಕುವ ಆತ್ಮಗಳ ಬಗ್ಗೆ ದರ್ಶನವನ್ನು ಹೊಂದುತ್ತಾರೆ.
- ಅವರು ತಮ್ಮಮ ದರ್ಶನವನ್ನು ನಿಜವಾಗಿ ಮಾರ್ಪಡಿಸುತ್ತಾರೆ ಇದರಿಂದ ವಿಶ್ವಾಸಿಗಳನ್ನು ಫಸಲಿಗೆ ಬಂದ ಹೊಲದ ಹಾಗೆ ಬದಲಾವಣೆ ಮಾಡುತ್ತಾರೆ.
- ಅವರು ದರ್ಶನವನ್ನು ಅಂಟ್ಟು ಸೇವೆಯನ್ನು ರಾಜ್ಯದ ಸುಲಭವಾದ ಯೋಜನೆಗಳಾಗಿ ಬದಲಾಯಿಸುತ್ತಾರೆ (ಲೂಕ 14;28-30).

ಎಫ್. ಪರಿವರ್ತನೆಯ ನಾಯಕರು ತಂಡಗಳನ್ನು ಬೆಳೆಸುತ್ತಾರೆ.

- ಯೇಸುವು ನಮ್ಮ ಮಾದರಿ; ಆತನು ಎಲ್ಲಾ ಸೇವೆಯನ್ನು ತಾನಾಗಿಯೇ ಮಾಡದೆ ತಂಡಗಳನ್ನು ಕಟ್ಟಿ ಅವುಗಳನ್ನು ಬಲಪಡಿಸಿದನು (ಮತ್ತಾಯ 10)
- ಯೇಸುವಿನ ಶಿಷ್ಯರು ಸಾಮಾನ್ಯ ಮನುಷ್ಯರಾಗಿದ್ದರು, ಆದರೆ ಅವ್ರು ಪ್ರಪಂಚವನ್ನು ತಲೆಕೆಳಕಾಗಿ ಮಾಡಿದರು (ಅ. ಪೋ. ಕೃ. 17:6).
- ಪರಿವರ್ತನೆಯ ನಾಯಕರು ದೇವರ ರಾಜ್ಯಕ್ಕಾಗಿ ಸಭೆಯಲ್ಲಿರುವ ಎಲ್ಲರನ್ನೂ ಕೂಡ ಭಾಗಿಯಾಗುವಂತೆ ಪ್ರೋತ್ಸಹ ನೀಡುತ್ತಾರೆ.

ಜಿ. . ಪರಿವರ್ತನೆಯ ನಾಯಕರು ಅನುಕಂಪದ ಪ್ರತಿಪಾದಕರಾಗಿರುತ್ತಾರೆ.

- ಯೇಸುವು ತನ್ನ ಶಿಷ್ಯರನ್ನು ಸುವಾರ್ತೆಯ ಕೆಲಸಕ್ಕಾಗಿ ಕಳುಹಿಸಿದಾಗ, ಆತನು ಅವರಿಗೆ "ಇಗೋ, ತೋಳಗಳ ಮಧ್ಯದಲ್ಲಿ ಕುರಿಗಳನ್ನು ಕಳುಹಿಸುವಂತೆ ನಾನು ನಿಮ್ಮನ್ನು ಕಳುಹಿಸುತ್ತೇನೆಆದದ ರಿಂದ ನೀವು ಸರ್ಪಗಳಂತೆ ಜಾಣರೂ ಪಾರಿವಾಳಗಳಂತೆ ನಿಷ್ಕಪಟಿಗಳಾಗಿರ್ರಿ ." ಎಂದು ಹೇಳಿದನು (ಮತ್ತಾಯ 10:16).
- ಪರಿವರ್ತನೆಯ ನಾಯಕರು ಕೃಪೆ ಹಾಗೂ ಆಜ್ಞೆ, ನ್ಯಾಯ ಮತ್ತು ಕನಿಕರ ಎಲ್ಲವನ್ನೂ ಪರಿಶುದ್ಧತೆಯಿಂದ ಸಮವಾಗಿ ಕಾಪಾಡುತ್ತಾರೆ.
- ಅವರು ವಿವೇಚನೆಯಿಂದ ತೀರ್ಮಾನವನ್ನು ಮಾಡುವವರಾಗಿದ್ದು, ಅವರ ತಿರ್ಮಾನಗಳನ್ನು ನೆರವೇರಿಸುವವರಾಗಿರಬೇಕು.
- ಆದರೂ ಕೂಡ, ಅವರ ತಿರ್ಮಾನಗಳು ಅನುಕಂಪದಿಂದ ಕೂಡಿರಬೇಕು.
- ಅವರು ಸತ್ಯವನ್ನು ಪ್ರೀತಿಯಿಂದ ಹೇಳಬೇಕು (ಎಫೆಸದವರಿಗೆ 4:15).

ಹೆಚ್. ಪರಿವರ್ತನೆಯ ನಾಯಕರು ಸ್ಪಷ್ಟವಾಗಿ ಸಂಭಾಷಿಸುತ್ತಾರೆ.

- ಯೇಸುವು ತನ್ನ ಈ ಲೋಕದ ಸೇವೆಯಲ್ಲಿ ಅನೇಕ ಬಾರಿ "ಕಿವಿಯುಳ್ಳವನು ಕೇಳಲಿ" ಎಂದು ಹೇಳಿದನು (ಮತ್ತಾಯ 13:43) ಯೇಸುವು ತನ್ನ ಹಿಂಬಾಲಕರು ಸ್ಪಷ್ಟವಾಗಿ ಕೇಳಬೇಕು ಹಾಗೂ ನಿರಂತರವಾಗಿ ಕೇಳಬೇಕು ಎಂದು ಹೇಳಿದನು.
- ಪರಿವರ್ತನೆಯ ನಾಯಕರು ಯೇಸುವಿನ ಹಾಗೆ ಸ್ಪಷ್ಟವಾಗಿ ಹಾಗೂ ಮೊನಚಾಗಿ ಮಾತಾಡ ಬೇಕೆಂದು ಬಯಸುತ್ತಾನೆ.
- ಪರಿವರ್ತನೆಯ ನಾಯಕರು ಸ್ಪಷ್ಟ, ನಿರಂತರ ಹಾಗೂ ಒಪ್ಪಿಸುವ ಸಂಭಾಷಣೆಯ ಪಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುತ್ತಾರೆ "ನಾನು ನಿಮ್ಮೆಲ್ಲರಿಗಿಂತಲೂ ಹೆಚ್ಚಾಗಿ ಭಾಷೆಗಳನ್ನಾಡುತ್ತೇನೆಂದು ನನ್ನ ದೇವರನ್ನು ಕೊಂಡಾಡುತ್ತೇನೆ" (1. ಕೊರಿಂಥ 14; 8).

ಐ. ಪರಿವರ್ತನೆಯ ನಾಯಕರು ದೇವರ ರಾಜ್ಯವನ್ನು ನಡೆಸುವುದಕ್ಕಾಗಿ ಮುಂದಿನ ಪಿಳಿಗೆಯನ್ನು ಸಿದ್ಧಪಡಿಸುತ್ತಾರೆ.

- ಯೇಹೊಶುವನ ನಾಯಕತ್ವವು ಮುಂದಿನ ಪೀಳಿಗೆಯ ನಾಯಕರನ್ನು ಸಿದ್ಧಪಡಿಸಲು ವಿಫಲವಾಯಿತು; ಆತನು ಆತನ ಕಾಲದವರೆಗೆ ಮಾತ್ರ ನಾಯಕತ್ವ ನಡೆಸಿದನು (ನ್ಯಾಯಾದೀಶರು 2:10).
- ಪರಿವರ್ತನೆಯ ನಾಯಕರು ಅವರ ಕಾಲಕ್ಕೆ ಮಾತ್ರ ಸಾಮ್ರಾಜ್ಯವನ್ನು ಕಟ್ಟುವುದಿಲ್ಲ; ಅವ್ರು ಪ್ರಸ್ತುತ ಹಾಗು ಮುಂದಿನ ಪಿಳಿಗೆಯನ್ನು ತರಬೇತಿಗೊಳಿಸುತ್ತಾರೆ.
- ಯಾವ ನಾಯಕತ್ವವು ಕೂಡ ಮುಂದಿನ ಪೀಳಿಗೆಯ ನಾಯಕರಿಲ್ಲದೆ ಯಶಸ್ವಿಯಾಗುವುದಿಲ್ಲ. "ಅನೇಕ ಸಾಕ್ಷಿಗಳ ಮುಂದೆ ನೀನು ನನ್ನಿಂದ ಕೇಳಿದವುಗಳನ್ನೇ ಇತರರಿಗೆ ಸಹ ಬೋಧಿಸ ಶಕ್ತರಾದ ನಂಬಿಗಸ್ತ ಮನುಷ್ಯರಿಗೆ ಒಪ್ಪಿಸಿಕೊಡು" (2. ತಿಮೋಥಿ 2:2).

## 7. ಉದ್ದೇಶಿತ ಅನುಕಂಪ

ಎ. *ಉದ್ದೇಶಿತ ಅನುಕಂಪವು* ದೇವರ ಹೃದಯವನ್ನು ತೋರಿಸುತ್ತದೆ.

- ದೇವರು ತನ್ನ ಮಗನನ್ನು ಈ ಲೋಕಕ್ಕೆ ಕಳುಹಿಸುವುದು ಮತ್ತು ಯೇಸು ಮಾನವರ ಪರವಾಗಿ ಸಾಯುವುದು ದೇವರ ಕೃಪೆ ಹಾಗೂ ಅನುಕಂಪದ ಉನ್ನತ ಬಹುಮನಗಳಾಗಿವೆ.
- ಯೋಹಾನ 3: 16-17 ರಲ್ಲಿ ದೇವರು ನಾವು ನಿತ್ಯಜೀವವನ್ನು ಪಡೆಯಲು ಆತನ ಮಗನನ್ನು ಈ ಲೋಕಕ್ಕೆ ಕಳುಹಿಸಿದನು. ಅದೇ ರೀತಿಯಲ್ಲಿ 1. ಯೋಹಾನ 3: 16-17 ರಲ್ಲಿ ದೇವರು ಮಾನವರ ಬಗ್ಗೆ ಹೊಂದಿರುವ ಪ್ರೀತಿಯನ್ನು ವಿಶ್ವಾಸಿಗಳು ಆತನ ಸೃಷ್ಟಿಯ ಬಗ್ಗೆ ತೋರಿಸುವ ಅನುಕಂಪದಲ್ಲಿ ಅಡಗಿದೆ ಎಂದು ತಿಳಿಸುತ್ತದೆ.
- ಯೇಸುವಿನ ಜೀವನ, ಮರಣ, ಮತ್ತು ಪುನರುತ್ಥಾನವು ಬೇರೆಯವರ ಹಾಗೂ ಲೋಕದ ಬಗ್ಗೆ ದೇವರು ಪ್ರೀತಿಯಲ್ಲಿ ಮುಂದೆ ಸಾಗುವ ಅನುಕಂಪವನ್ನು ತೋರಿಸುತ್ತದೆ(ಮತ್ತಾಯ 9:36).

ಬಿ. *ಉದ್ದೇಶಿತ ಅನುಕಂಪವು* ಯಾವಾಗಲೂ ಕೂಡ ದೇವರ ಹೆಸರಿನಲ್ಲಿ ಇರುತ್ತದೆ.

- ಯೇಸುವು ನಮ್ಮ ಅನುಕಂಪದ ಮಾದರಿಯಾಗಿದ್ದಾನೆ. ಸುವಾರ್ತೆಗಳಲ್ಲಿ, ಯೇಸುವು ತನ್ನ ಹೃದಯದಲ್ಲಿ ಮನುಷ್ಯರೊಂದಿಗೆ ಹಿಂಸೆಯನ್ನು "ಅನುಭವಿಸಿದನು."
- ಯೇಸುವು ವಿಶೇಷವಾಗಿ ಬಡವರು, ಕಳೆದುಹೋದವರು, ರೋಗಿಗಳು, ಕಡೆಗಣಿಸಲ್ಪಟ್ಟವರು, ಮತ್ತು ತೊಂದರೆಯಲ್ಲಿದ್ದವರ ಬಗ್ಗೆ ವಿಶೇಷವಾದ ಅನುಕಂಪವನ್ನು ಹೊಂದಿದ್ದನು.
- ಆತನು ಸಂಪೂರ್ಣ ಮನುಷ್ಯ ಹಾಗೂ ಪೂರ್ಣ ದೇವರಾಗಿ ಯೇಸುವು ಹೇಗೆ ಜೀವಿಸಬೇಕು ಹಾಗೂ ಹೇಗೆ ಪ್ರಿತಿಸಬೇಕು ಎಂಬುದರಲ್ಲಿ ನಮಗೆ ಮಾದರಿಯಾಗಿದ್ದಾನೆ.
- ಯೇಸುವಿನ ಹೆಸರಿನಲ್ಲಿ ನಾವು ಮಾಡುವ ಎಲ್ಲಾ ವಿಧವಾದ ಸೇವೆ, ಉದಾರತೆ, ಅಥವಾ ಕರುಣೆಯ ಕಾರ್ಯಗಳಲ್ಲಿ ನಾವು ಯೇಸುವಿನ ಪ್ರೀತಿಯನ್ನು ತೋರಿಸಲು ಪ್ರಯತ್ನಿಸುತ್ತೇವೆ (ಮತ್ತಾಯ 10:42).

ಸಿ. *ಉದ್ದೇಶಿತ ಅನುಕಂಪವು* ಪ್ರತಿಯೊಬ್ಬ ಮನುಷ್ಯನ ಗೌರವವನ್ನು ಕಾಪಾಡುತ್ತದೆ.

- ದೇವರು ಮಕ್ಕಳು ಯೇಸುವಿನ ಹೆಸರಿನಲ್ಲಿ ನೀಡುವ ನಿರೀಕ್ಷೆ, ಪ್ರೀತಿ, ಮತ್ತು ಸಹಾಯಗಳು ಬೇರೆಯವರ ಅಂದರೆ ದೇವರ ಸ್ವರೂಪದಲ್ಲಿ, ಹಾಗೂ ದೇವರ ಸೃಷ್ಟಿಯ ಹಾಗೆ ಇರುವವರ ಗೌರವವನ್ನು ಕಾಪಾಡುವುದರಲ್ಲಿ ವ್ಯಕ್ತವಾಗುತ್ತವೆ.
- ಅನುಕಂಪವು ಕ್ರಿಸ್ತನಲ್ಲಿ ದೇವರ ಪ್ರೀತಿಯನ್ನು ತೋರಿಸುವುದಕ್ಕಿಂತ ಬೇರೆ ಯಾವ ಉದ್ದೇಶವನ್ನು ಹೊಂದಿಲ್ಲ.

ಡಿ. *ಉದ್ದೇಶಿತ ಅನುಕಂಪವು* ಬದಲಾವಣೆ ಹೊಂದಿರುವ ವಿಶ್ವಾಸಿಗಳಲ್ಲಿ ಸ್ವಾಭಾವಿಕವಾಗಿ ಹೊರಹೊಮ್ಮುತ್ತದೆ.

- ಸಭೆಯು ಲೋಕದಲ್ಲಿ ದೇವರ ಪ್ರೀತಿಯನ್ನು ಸಾದೃಶ್ಯವಾಗಿ ತೋರಿಸಲು ಕರೆಯಲ್ಪಟ್ಟಿದೆ.
- ಅನುಕಂಪದ ಕೆಲಸಗಳು ಮಾನವನ ಶ್ರಮೆಯಿಂದ ಹಾಗು ಸಾಮಾಜಿಕ ಕಾರ್ಯಗಳಿಂದ ಮಾತ್ರ ಪೂರ್ತಿಯಾಗುವುದಿಲ್ಲ.
- ಕ್ರಿಸ್ತನ ದೇಹವಾಗಿ ನಮ್ಮ ಅನುಕಂಪದ ಕರೆಯು ಯೇಸುವಿನ ಸಂಪೂರ್ಣ ಜೀವನ ಹಾಗೂ ಪರಿಶುದ್ಧಾತ್ಮನ ನಡೆಸುವಿಕೆಯಿಂದ ತುಂಬಿರುತ್ತದೆ.
- ಪರಿಶುದ್ಧಾತ್ಮನು ವಿಶ್ವಾಸಿಗಳ ಹೃದಯಗಳನ್ನು ಪರಿವರ್ತಿಸಿ ಅವರು ಅದಕ್ಕೆ ಬದಲಾಗಿ ಲೋಕದಲ್ಲಿ ಶಾರೀರಿಕ, ಸಾಮಾಜಿಕ, ಹಾಗೂ ಆತ್ಮಿಕ ಬದಲಾವಣೆಯನ್ನು ತರುತ್ತಾರೆ.
- ಪ್ರತಿಯೊಂದು ವಿಶ್ವಾಸಿ ಸಮುದಾಯದ ಆತ್ಮಿಕ ಜೀವನದಲ್ಲಿ ಅನುಕಂಪವು ಬಿಡಿಸಲಾಗದ ಮತ್ತು ಚಟುವಟಿಕೆಯಿಂದ ಕೂಡಿದ ಕಾರ್ಯವಾಗಿರುತ್ತದೆ.

ಇ. *ಉದ್ದೇಶಿತ ಅನುಕಂಪವು* ಸಂಪೂರ್ಣವಾದ ಸೇವೆಯ ನಮ್ಮ ವೆಸ್ಲಿಯನ್ ವಿವರಣೆಯಾಗಿದೆ.

- ನಾವು ತಂದೆಯಾದ ದೇವರಿಂದ ಕಳುಹಿಸಲ್ಪಟ್ಟು ಮತ್ತು ಪರಿಶುದ್ಧಾತ್ಮನಿಂದ ಬಲಪಡಿಸಲ್ಪಟ್ಟು ಲೋಕದೊಳಗೆ ಹೋಗಿ ಹಾಗೂ ದೇವರಿಗೆ ಸೇವೆ ಮಾಡಲು ಕರೆಯಲ್ಪಟ್ಟಿದ್ದೇವೆ.
- ದೇವರು ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಆತ್ಮನ ಶಕ್ತಿಯ ಮೂಲಕ ಕೆಲಸ ಮಾಡುತ್ತಿದ್ದಾನೆ ಮತ್ತು ಈ ಒಳ್ಳೆಯ ಕೆಲಸದಲ್ಲಿ ನಾವು ಭಾಗಿಯಾಗಬೇಕೆಂದು ಆತನು ಬಯಸುತ್ತಾನೆ ಎಂದು ನಾವು ನಂಬುತ್ತೇವೆ.
- ನಿಜವಾದ ಸುವಾರ್ತೆಯು ನಮ್ಮ ಸುತ್ತಲಿರುವವರ ಜೀವನದಲ್ಲಿ ಬದಲಾವಣೆಯನ್ನು ತರುವ ಕರೆ ಹಾಗು ಬದ್ಧತೆಯಾಗಿದೆ.
- ಯೇಸುವಿನ ಅದೇ ಹೆಸರಿನಲ್ಲಿ ನಾವು ನಲುಗುವವರ, ಮತ್ತು ಮುರಿದಿರುವವರ ಹತ್ತಿರ ಹೋಗುತ್ತೇವೆ, ಮತ್ತು ಅವರಿಗಾಗಿ ಸ್ವಸ್ಥತೆ, ನಿರೀಕ್ಷೆ, ಶಾಂತಿ, ಮತ್ತು ಪ್ರೀತಿಯನ್ನು ಅವಶ್ಯ, ಕಡೆಗಣಿಸಲ್ಪಟ್ಟಿರುವ, ಮತ್ತು ತೊಂದರೆಯಲ್ಲಿರುವವವರಿಗಾಗಿ ತರುತ್ತೇವೆ.
- ನಾವು ಒಬ್ಬರಿಗೊಬ್ಬರು ಪ್ರೀತಿಯಲ್ಲಿ ಮತ್ತು ಸ್ನೇಹದಲ್ಲಿ ಸೇರಿದ್ದೇವೆ ಹಾಗೂ ಸಾಮಾಜಿಕ ಬದಲಾವಣೆಯನ್ನು ತರುವ ಸಮುದಾಯದಲ್ಲಿ ಸೇರಿದ್ದೇವೆ. ಇದೆ ರೀತಿಯಲ್ಲಿ ದೇವರು ತನ್ನ ರಾಜ್ಯವನ್ನು ಕಟ್ಟುತ್ತಾನೆ ಮತ್ತು ಬೆಳೆಸುತ್ತಾನೆ.

ಎಫ್. *ಉದ್ದೇಶಿತ ಅನುಕಂಪವು* ಮುರಿದಿರುವ ಲೋಕವನ್ನು ವಿಮೋಚಿಸುವ ದೇವರ ಸೇವೆಯಲ್ಲಿ ಇರುವ ಬದ್ಧತೆಯಿಂದ ತುಂಬಿದ ನಮ್ಮ ಜೀವನದಿಂದ ಹೊರಬರುತ್ತದೆ.

- ನಾವು ನೋಡಲು, ಕೇಳಲು, ಮತ್ತು ಮುರಿದಿರುವ ಹಾಗು ನೋವಿನಿಂದ ತುಂಬಿದ ಮಾನವರನ್ನು ದೇವರು ಕಾಪಾಡುವಂತೆ ನಾವು ಕೂಡ ಕಾಪಾಡುತ್ತೇವೆ.
- ಮಾನವರನ್ನು ನೋವಿನಿಂದ ಕಾಪಾಡಲು ಬೇಕಾದ, ಸಿಗಬಹುದಾದ ಎಲ್ಲಾ ರೀತಿಯ ಸಂಪನ್ಮೂಲ ಗಳನ್ನು ಉಪಯೋಗಿಸುತ್ತೇವೆ ಮತ್ತು ದೇವರ ಯೋಜನೆಯಾದ ತಿರುಗಿ ಕಟ್ಟುವುದು, ಸಂಪೂರ್ಣತೆ, ರಕ್ಷಣೆ, ಮತ್ತು ಶಾಂತಿ ಯನ್ನು ಲೋಕದಲ್ಲಿ ಮತ್ತು ಲೋಕಕ್ಕೆ ಕೊಡಲು ಹುಡುಕುತ್ತೇವೆ.
- ಸಮಾಜದಲ್ಲಿರುವ ಅನ್ಯಾಯವನ್ನು ಸೃಷ್ಟಿಸುವ ವ್ಯವಸ್ಥೆಗಳ ವಿರುದ್ಧ ಜನರನ್ನು ತುಳಿಯುವುದಕ್ಕೆ ಸಹಾಯಕಾರಿಯಾಗಿರುವ ಕೆಟ್ಟ ವ್ಯವಸ್ಥೆಗಳನ್ನು ಯೇಸುವಿನ ಹೆಸರಿನಲ್ಲಿ ಸರಿಪಡಿಸಲು ಪ್ರಯತ್ನ ಪಡುತ್ತೇವೆ.
- ನಾವು ಮಾಡುವ ಎಲ್ಲಾ ಕಾರ್ಯಗಳಲ್ಲಿ ದೇವರ ಧ್ಯೇಯವನ್ನು ಮತ್ತು ದೇವರಿಗೆ ಮಹಿಮೆಯನ್ನು ತರಲು ಪ್ರಯತ್ನಿಸುತ್ತೇವೆ (ಮೀಕನು 6:8)



# ನಮ್ಮ ವೆಸ್ಲಿಯನ್ ವೇದಾಂತ

## ಮಾರ್ಪಡಿಸುವ ಕೃಪೆಯ ಅದ್ಭುತ

“ನಮ್ಮ ಎಲ್ಲಾ ಪಾಪಗಳಿಗಿಂತ ಕೃಪೆಯು ಬಲು ದೊಡ್ಡದು.” ಎಂಥಹಾ ಅದ್ಬುತವಾದ ಯೋಚನೆ! ಆದರೆ ಅದು ಒಂದು ಹಾಡಿನ ಮೊದಲನೆಯ ಸಾಲು.

ದೇವರು ಯೇಸುವಿನಲ್ಲಿ ಮಾನವನಾಗಿ ಅವತಾರವನ್ನು ತಾಳಿದನು ಮತ್ತು ಪ್ರಪಂಚವನ್ನು ತನ್ನೊಂದಿಗೆ ಸಮಾಧಾನಪಡಿಸಿದನು (ಯೊಹಾನ3: 15-16; ರೋಮ 1:1-16) ನಾವು ಇನ್ನೂ ಪಾಪಿಗಳಾಗಿದ್ದಾಗಲೂ ದೇವರು ತನ್ನ ಸ್ವಂತ ಮಗನನ್ನು ಪಾಪದ “ಪರಿಹಾರದ ಬಲಿಯಾಗಿ” ಕೊಟ್ಟನು (ರೋಮ 3 :25). ಲೋಕದ ಎಲ್ಲಾ ಪಾಪವನ್ನು ಸರ್ವ ಲೋಕದ ಸೃಷ್ಟಿಕರ್ತನು ತನ್ನ ಮೇಲೆ ಹೊತ್ತುಕೊಂಡನು ಮತ್ತು ನಮ್ಮೆಲ್ಲರಿಗೂ ರಕ್ಷಣೆಯನ್ನು ಅನುಗ್ರಹಿಸಿದನು!

ಯೇಸುವಿನಲ್ಲಿ ದೇವರ ನೀತಿಯು-ಆತನ ರಕ್ಷಣೆಯು-ಬಯಲಾಯಿತು (ರೋಮ 3:21). ಈ ಕಾರ್ಯವಿಲ್ಲದೇ ಹೋಗಿದ್ದಾರೆ ಇಡೀ ಮಾನವಕುಲವು ನಿರೀಕ್ಷೆಯಿಲ್ಲದೆ ದೇವರಿಂದ ದೂರವಾಗುತ್ತಿತ್ತು (ಎಫೆಸ1:5-2:10). ದೇವರಿಂದ ನಮ್ಮನ್ನು ದೂರ ಮಾಡುವ ಎಲ್ಲಾ ಶಕ್ತಿಯನ್ನು ಸೋಲಿಸುವಂತೆ ಆಯಿತು.(ಕೊಲಸ್ಸೇ 2:15). ಈಗ ಕ್ರಿಸ್ತನಲ್ಲಿರುವ ವಿಶ್ವಾಸದ ಮೂಲಕ (ರೋಮ 3;22), ನಾವು ಸ್ವತಂತ್ರರಾದೆವು (ರೋಮ 8:2)!

ಹೊಸ ಒಡಂಬಡಿಕೆಯು ನಮ್ಮ ಮೇಲೆ ದೇವರ ವಿಸ್ತಾರವಾಗಿ ಸುರಿಸಿದ ಐಶ್ವರ್ಯಗಳ ಕುರಿತಾಗಿ ಆತನಿಗೆ ಸ್ತುತಿಯನ್ನು ಸಲ್ಲಿಸುವಂತೆ ಕಾಣುತ್ತದೆ (ಎಫೆಸ1:6 -10). ಕ್ರಿಸ್ತನಲ್ಲಿ ದೇವರ ಸಂಪೂರ್ಣತೆಯು ಶರಿರಧಾರಿಯಾಗಿ ನೆಲೆಸಿದೆ, ಮತ್ತು ಯಾರು ಕ್ರಿಸ್ತನನ್ನು ಅಂಗಿಕರಿಸುತ್ತಾ ರೋ ಅವರಲ್ಲಿ ಆತನು ಸಂಪೂರ್ಣವಾಗಿ ನೆಲೆಸುತ್ತಾನೆ. (ಕೊಲಸ್ಸೇ 2:8-15). ದೇವರ ಕೃಪೆಯ ಪರಿಫಲವನ್ನು ಪರೀಕ್ಷಿಸಿದ ನಂತರ ಪೌಲನು ಹೇಳುತ್ತಾನೆ “ಹಾ, ದೇವರ ಜ್ಞಾನದ ಮತ್ತು ತಿಳುವಳಿಕೆಯ ಐಶ್ವರ್ಯವು ಎಷ್ಟೋ ಅಗಾಧ ವಾಗಿದೆಆತನ ತೀರ್ಪುಗಳು ಪರಿಶೋಧನೆಗೂ ಆತನ ಮಾರ್ಗಗಳು ಕಂಡು ! !ಹಿಡಿಯುವದಕ್ಕೂ ಅಸಾಧ್ಯ ವಾಗಿವೆ” (ರೋಮ 11:33). ಆ ಐಶ್ವರ್ಯದ ಕೆಲವು ಭಾಗಗಳನ್ನು ನಾವು ಗುರುತಿಸಬಹುದು: ಪಾಪದ ಕ್ಷಮಾಪಣೆ, ದೇವರ ಆತ್ಮನು ನಮ್ಮಲ್ಲಿ ನೆಲೆಸುವುದ, ಕ್ರಿಸ್ತನ ರೂಪ ನಮ್ಮಲ್ಲಿ ಬರುವುದು, ನಿತ್ಯ ಜೀವ, ದೇವರೊಂದಿಗೆ ಸಮಾಧಾನ, ಪವಿತ್ರತೆ, ಸಭೆಯ ಸಹವಾಸ ಮತ್ತು ದೇವರ ಬರೋಣದ ನಿರೀಕ್ಷೆ.

ಯೇಸುವು ಮಾತಾಡಿದಾಗ ಅನಿಏಕರು ಕೇಳಿದ್ದು ನಿಜವಾಗಲೂ “ಶುಭ ಸಂದೇಶ,” ಅದು, ದೇವರು ಉಚಿತವಾಗಿ ಪಾಪಿಗಳನ್ನು ತನ್ನೊಂದಿಗೆ ಸಂಧಾನಪಡಿಸಿಕೊಳ್ಳುತ್ತಾನೆ. ದ್ವೆಷಿಸಲ್ಪಡುವ ಸುಂಕದವನು ಅಥವಾ ವ್ಯಭಿಚಾರದಲ್ಲಿ ಹಿಡಿಯಲ್ಪಟ್ಟ ಸ್ತ್ರೀ, ದೇವರ ಪ್ರಿತಿಯನ್ನು ಕೇಳಿ, ಪಶ್ಚಾತಾಪ ಪಡಬಹುದು, ಕ್ಷಮಾಪಣೆ ಹೊಂದಬಹುದು ಮತ್ತು ನಿತ್ಯ ಜೀವವನ್ನು ಪಡೆಯಬಹುದು. ದೇವರ ಕೃಪೆಯನ್ನು ಹೊಂದಲು ತಮಗಿರುವ ಅಸಹಾಯಕತೆಯನ್ನು ಗಮನಿಸಿ ಆತನ ಬಳಿಗೆ ಬರುವ ಪ್ರತಿಯೊಬ್ಬರಿಗೂ ಆತನು ಅದನ್ನು ಉಚಿತವಾಗಿ ನೀಡುತ್ತಾನೆ. (ಲೂಕ 15)

ನಾವು ಇದನ್ನು ಅರಿಯುವ ಮುನ್ನ ಪರಿಶುದ್ಧಾತ್ಮನು ನಮ್ಮನ್ನು ರಕ್ಷಣೆಗೆ ನಡೆಸಲು ಕೆಲಸ ಮಾಡುತ್ತಿದ್ದಾನೆ, ದೇವರ ಸ್ವರವನ್ನು ಕೇಳದೆ ಇರುವ ಸ್ಥಳವು ಇಲ್ಲವೆಂದು ಕಿರ್ತನೆಗಾರನು ತಿಳಿಸುತ್ತಾನೆ (ಕೀರ್ತನೆ 19:3). ಪೌಲನು ಕ್ಷಣದಿಂದ ಕ್ಷಣಕ್ಕೆ ಇಡೀ ಸೃಷ್ಟಿಯು ತನ್ನ ಉಳಿವಿಗಾಗಿ ದೇವರ ಮೇಲೆ ಆಧಾರವಾಗಿದೆ ಎಂದು ನಮಗೆ ತಿಳಿಸುತ್ತಾನೆ (ಕೊಲಸ್ಸೇ 1:15-17). ಕ್ರಿಸ್ತನು ಎಲ್ಲರನ್ನೂ ಕೂಡ ಬೆಳಗಿಸುತ್ತಾನೆ ಎಂದು ಯೋಹಾನನು ತಿಳಿಸುತ್ತಾನೆ

ದೇವರ ಕ್ರಿಯಾತ್ಮಕತೆಯ ಮತ್ತು ದೇವರ ನಂಬಿಕೆಯ ಜೊತೆಗೆ ಸರಿಹೊಂದುವಂತೆ, ಪರಿಶುದ್ಧಾತ್ಮನು ವ್ಯಯಕ್ತಿಕವಾಗಿ ಹಾಗು ಸಮಾಜದ ಚರಿತ್ರೆಯಲ್ಲಿ ಸುವಾರ್ತೆಗಾಗಿ ದಾರಿಯನ್ನು ತೆರೆಯುತ್ತಾನೆ. ಆತನು ಸುವಾರ್ತೆಯನ್ನು ಸಾರುವುದಕ್ಕಿಂತ ಮುಂಚೆ ತಾನಿ ಹೋಗಿ ವಾಕ್ಯವನ್ನು ಕೇಳಲು ಜನರನ್ನು ಸಿದ್ದಪಡಿಸುತ್ತಾನೇ-ಮತ್ತು ನಿರೀಕ್ಷೆಯಿಂದ ಶುಭವಾರ್ತೆಯನ್ನು ಕೇಳುವಂತೆ ಮಾಡುತ್ತಾನೆ.

ಅತ್ಮಾವಲೋಕನದಿಂದ, ಎಲ್ಲಾ ಕ್ರೈಸ್ತವರು ಪರಿಶುದ್ಧಾತ್ಮನು ತಮ್ಮನ್ನು ಕ್ರೈಸ್ತವ ವಿಮೋಚನೆಗೆ ನಡೆಸಿದ ವಿಧಾನವನ್ನು ಹುಡುಕಬಹುದು. ದೇವರ ಸಿದ್ದಪಡಿಸುವ ಈ ವೈವಿಧ್ಯತೆಯನ್ನು ಈ ಕೃಪೆಯನ್ನು "ನಿರೋಧಿಸುವ ಕೃಪೆ" ಅಥವಾ ಮುಂದೆ ಹಾದು ಹೋಗುವ ಕೃಪೆ ಎಂದು ಕರೆಯುತ್ತೇವೆ.

ದೇವರು ನಮ್ಮ ಪರವಾಗಿ ಇದ್ದಾನೆ. ದೇವರು ನಮ್ಮ ಪರವಾಗಿ ಆತನ ಮಗನ ಮೂಲಕ ನೆರವೇರಿಸಿದ್ದಾನೆ, ಈಗ ಆತನು ಪರಿಶುದ್ಧಾತ್ಮನ ಮೂಲಕ ಅದನ್ನು ನಮಗೆ ನೀಡುತ್ತಿದ್ದಾನೆ.ನಿಜವಾಗಲೂ ದೇವರು ತನ್ನ ಮಗನ ಮೂಲಕ ಸಾಧಿಸಿದ ರಕ್ಷಣೆಯಿಂದ ಇಡೀ ಸೃಷ್ಟಿಯು ಲಾಭವನ್ನು ಪಡೆದಿದೆ (ರೋಮ 8:19-25).

ದೇವರು ಪಾಪವನ್ನು ಕ್ಷಮಿಸಿ ಮತ್ತು ಪಾಪಿಗಳನ್ನು ತನ್ನೊಡನೆ ಸಂಧಾನಮಾಡಿಕೊಳ್ಳುವುದನ್ನು ನಿತಿನಿರ್ಣಯ ಎಂಬ ಹೆಸರಿನಿಂದ ಕರೆಯುತ್ತೇವೆ. ನೀತಿನಿರ್ಣಯ-ದೇವರ ಮೆಚ್ಚಿಗೆಯ ಕಡೆಗೆ ತಿರುಗುವುದು- ಕೃಪೆಯಿಂದ ನಂಬಿಕೆಯ ಮೂಲಕವಾಗಿದೆ.

ನೀತಿನಿರ್ಣಯ ಎಂಬುದು ದೇವರ ರಕ್ಷಣೆಯ ಕೆಲಸದ ಒಂದು ಭಾಗವಾಗಿದೆ. ನಿಜವಾಗಿಯೂ ದೇವರು ವಿಶ್ವಾಸಿಯ ಜೀವನದಲ್ಲಿ ನೆಲೆಸಲು ಪರಿಶುದ್ಧಾತ್ಮನು ಸಹಾಯ ಮಾಡುವುದು ಎರಡನೇಯ ಸಹಾಯವಾಗಿದೆ. ಅವನು ಅಥವಾ ಅವಳು ಹೊಸದಾಗಿ ದೇವರ ಅತ್ಮನಿಂದ ಹುಟ್ಟುತ್ತಾನೆ. ಈ ಹೊಸ ಜೀವನದ ಅನುಭವವನ್ನು ಹೊಸ ಒಡಂಬಡಿಕೆಯು ಹೊಸ ಜೀವನ, ಮೇಲಿನಿಂದ ಬಂದ ಜನನ, ನಿತ್ಯ ಜೀವನ, ದೇವರ ರಾಜ್ಯಕ್ಕೆ ಪ್ರವೇಶ, ಹೊಸ ಜೀವನದ ಅನುಭವದಲ್ಲಿ ನಡೆಯುವುದು, ಮತ್ತು ಆತ್ಮದಲ್ಲಿ ಜೀವಿಸುವುದು ಎಂದು ಕರೆಯುತ್ತದೆ.

ಭಾಷೆ ಯಾವುದಾದರೇನು ದೈವಿಕ ಕೃಪೆಯ ಅದ್ಭುತದಿಂದ ಕ್ರೈಸ್ತವನಲ್ಲಿ ಆತ್ಮನು ಮನೆಯನ್ನು ಪಡೆಯುತ್ತಾನೆ ಮತ್ತು ಮಾರ್ಪಾಟನ್ನು ತರುತ್ತಾನೆ. ಎಲ್ಲಿ ಒಮ್ಮೆ ಮರಣವಿತ್ತೋ, ಈಗ ಅಲ್ಲಿ ಜೀವವಿದೆ ದೇವರೊಂದಿಗೆ ಯುದ್ದವಿದ್ದ ಕಡೆ ಈಗ ಶಾಂತಿಯಿದೆ; ಒಮ್ಮೆ ನಿರಾಶೆಯಿತ್ತೋ ಅಲ್ಲಿ ಈಗ ನಿರೀಕ್ಷೆಯಿದೆ. ಹೊಸ ಒಡಂಬಡಿಕೆಯು ಇದನ್ನು "ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾಗಿದ್ದಾನೆ .ಹಳೆಯವುಗಳು ಅಳಿದುಹೋದವು; ಇಗೋ, ಎಲ್ಲವೂ ನೂತನವಾದವು.ಎಲ್ಲವುಗಳು ದೇವರವುಗಳಾಗಿವೆ; ಆತನು ಯೇಸು ಕ್ರಿಸ್ತನ ಮೂಲಕ ನಮ್ಮನ್ನು ತನಗೆ ಸಮಾಧಾನಪಡಿಸಿಕೊಂಡು ಸಮಾಧಾನದ ವಿಷಯವಾದ ಸೇವೆಯನ್ನು ನಮಗೆ ಅನುಗ್ರಹಿಸಿದ್ದಾನೆ." (2. ಕೊರಿಂಥ 5:17-18ಎ).

ಹೊಸ ಒಡಂಬಡಿಕೆಯು ಕ್ರೈಸ್ತವರನ್ನು "ಕ್ರಿಸ್ತನಲ್ಲಿರುವುದನ್ನು" ಮತ್ತು ಕ್ರಿಸ್ತನು ಅವರಲ್ಲಿ ಇರುವುದರ ಬಗ್ಗೆ ಮಾತಾಡುತ್ತದೆ. ಒಂದು ಕಡೆ "ಕ್ರಿಸ್ತನಲ್ಲಿ" ರುವದರಿಂದ ನಂಬಿಕೆಯಿಂದ ದೇವರೊಂದಿಗೆ ಸಮಾಧಾನವನ್ನು ಹೊಂದುತ್ತಾರೆ (ರೋಮ 8:1), ಪಶ್ಚಾತಾಪ ಹೊಂದಿದ ಪಾಪಿಯನ್ನು ದೇವರೊಂದಿಗೆ ಆತನು ಸಮಾಧಾನ ಪಡಿಸುತ್ತಾನೆ.

ಆದರೆ ಹೊಸ ಒಡಂಬಡಿಕೆಯು ಕ್ರಿಸ್ತನು ನಮ್ಮಲ್ಲಿರುವ "ನಿರೀಕ್ಷೆಯ ಮಹಿಮೆಯಾಗಿದ್ದಾನೆ" (ಕೊಲೆಸ್ಸಿ 1;27) ಎಂಬುದರ ಬಗ್ಗೆ ಮಾತಾಡುತ್ತದೆ. ಪರಿಶುದ್ಧಾತ್ಮನ ಮೂಲಕ ಕ್ರಿಸ್ತನು ತನ್ನ ಪುನರುತ್ಥಾನದ ಜೀವವನ್ನು ನಮ್ಮಲ್ಲಿ -ಆತನಲ್ಲಿ- ಆತನ ಮಕ್ಕಳಲ್ಲಿ ತುಂಬುತ್ತಾನೆ. ಆತನು ಅವರಲ್ಲಿ ನೆಲೆಸುತ್ತಾನೆ ಮತ್ತು ಆತ್ಮನ ಫಲಗಳನ್ನು ಅವರಲ್ಲಿ ಬೆಳೆಸುತ್ತಾನೆ (ಗಲಾತಿಯವರಿಗೆ 5:22-23)

"ಆದರೆ" ಅನೇಕರು ಕೇಳುತ್ತಾರೆ ವಾಸ್ತವವಾಗಿ ಕ್ರೈಸ್ತವನಾಗಿ ನಾನು ಯಾವ ರೀತಿಯ ಆತ್ಮಿಕ ಜೀವನವನ್ನು ನಡೆಸಬಹುದು? ಹಳೆಯ ಪಾಪದ ಅಭ್ಯಾಸಗಳು ನನ್ನ ಜೀವನವನ್ನು ಎಳೆಯುವುದಿಲ್ಲವೇ? ಅಥವಾ ನನ್ನಲ್ಲಿರುವ ಆತ್ಮನು ನನಗೆ ಉತ್ತಮವಾದ ಜೀವನವನ್ನು ಒದಗಿಸುತ್ತಾನೆಯೇ? ಹೊಸ ಒಡಂಬಡಿಕೆಯು ಉತ್ತರಿಸುತ್ತದೆ "ಚಿಕ್ಕಮಕ್ಕಳೇ, ನೀವು ದೇವರಿಗೆ ಸಂಬಂಧಪಟ್ಟವರಾ ಗಿದ್ದೀರಿಅವರನ್ನು ಜಯಿಸಿದ್ದೀರಿ. ನಿಮ್ಮಲ್ಲಿರುವಾತನು . ಲೋಕದಲ್ಲಿ ಇರುವವನಿಗಿಂತ ದೊಡ್ಡವನಾಗಿದ್ದಾನೆ" (1 ಯೋಹಾನ 4:4).

ಯೇಸುವನ್ನು ಮರಣದಿಂದ ಎಬ್ಬಿಸಿದ ಆದೇ ಶಕ್ತಿಯು ಮರಣದ, ನರಕ, ಪಾಪ ಮತ್ತು ಸಮಾಧಿಯ ಮೇಲೆ ಆತನನ್ನು ಜಯಶಾಲಿಯಾಗಿ ಮಾಡಿತು-ಅದೇ ಶಕ್ತಿಯು ಪರಿಶುದ್ಧಾತ್ಮನ ಮೂಲಕ ನಮ್ಮಲ್ಲಿ ಕೆಲಸಮಾಡುತ್ತಾನೆ (ಎಫೆಸ 1:19)! ಒಮ್ಮೆ ಹಳೆಯ ಪಾಪದ ಆಜ್ಞೆಯು ಮತ್ತು ಮರಣವು ಅಧಿಕಾರ ನಡೆಯಿತು. ಆದರೆ ಈಗ "ಜೀವವನ್ನುಂಟು ಮಾಡುವ ಆತ್ಮನ ನಿಯಮವು ಕ್ರಿಸ್ತ ಯೇಸುವಿನಲ್ಲಿ ನನ್ನನ್ನು ಪಾಪ ಮರಣಗಳ ನಿಯಮ ದಿಂದ ಬಿಡಿಸಿತು" (ರೋಮ 8:2).

ಎಲ್ಲಾ ಕ್ರೈಸ್ತವರಿಗೂ ಸಂತೋಷದ ನಿಯಮವೆಂದರೆ ಅವರು ಪರಿಶುದ್ಧಾತ್ಮನಿಂದ ತುಂಬಲ್ಪಟ್ಟಿದ್ದಾರೆ, ಇದರಿಂದ ಅವರು ಶರೀರದ ಅಧೀನದಲ್ಲಿ ಜೀವಿಸದೆ ಆತ್ಮನ ಅಧೀನದಲ್ಲಿ ಜೀವಿಸುತ್ತಾರೆ (ರೋಮ 8:1-8). ನೀವು ವ್ಯಯಕ್ತಿಕವಾಗಿ ದೇವರ ಮಾರ್ಪಡಿಸುವ ಈ ಅದ್ಭುತವನ್ನು ಕೃಪೆಯನ್ನು ನಿಮ್ಮ ಜೀವನದಲ್ಲಿ ಅನುಭವಿಸಿದ್ದಿರಾ?


AΩ

# ನಂಬಿಕೆಯ ಸಾಹಿತ್ಯ ಲೇಖನ

ಲೇಖನ1

## ತ್ರಿಯೇಕ ದೇವರು

ನಾವು ಒಬ್ಬನೇ ನಿರಂತರವಾಗಿ, ಅಸ್ಥಿತ್ವದಲ್ಲಿರುವ, ಅಪರಿಮಿತ, ಸರ್ವಾಧಿಕಾರಿಯಾದ ಸೃಷ್ಟಿಕರ್ತನಾದ ಮತ್ತು ವಿಶ್ವವನ್ನು ಕಾಪಾಡುವ ದೇವರಲ್ಲಿ ನಂಬಿಕೆಯಿಡುತ್ತೇವೆ; ಆತನೊಬ್ಬನೆ ದೇವರು,ಗುಣದಲ್ಲಿ ಸ್ವಭಾವಗಳಲ್ಲಿ ಮತ್ತು ಉದ್ದೇಶಗಳಲ್ಲಿ ಪರಿಶುದ್ದನು. ಪರಿಶುದ್ದದನಾದ ದೇವರು ಮತ್ತು ಪ್ರೀತಿಯುಳ್ಳ ದೇವರು ತ್ರಿಯೇಕ ದೇವರಲ್ಲಿ ಇರುವುದು ಅವಶ್ಯಕ, ತಂದೆಯಾಗಿ, ಮಗನಾಗಿ, ಮತ್ತು ಪರಿಶುದ್ದಾತ್ಮನಾಗಿ ನಮಗೆ ಬಹಿರಂಗವಾಗಿದ್ದಾನೆ

ಆದಿಕಾಂಡ 1; ಯಾಜಕಕಾಂಡ 19:2; ದ್ವಿತಿಯೋಪದೇಶಕಾಂಡ 6:4-5; ಯೆಶಾಯ 5:16;6:1-7;40 ;18-31; ಮತ್ತಾಯ 3:16-17; 28:19-20; ಯೋಹಾನ 14:6-27; 1 ಕೊರಿಂಥ ದವರಿಗೆ 8 :6; 2 ಕೊರಿಂಥ ದವರಿಗೆ 13:14; ಗಲಾತಿಯರಿಗೆ 4:4-6; ಎಫೆಸದವರಿಗೆ 2:13-18 1 ಯೋಹಾನ 1;5;4:8.

ಲೇಖನ 2

## ಯೇಸು ಕ್ರಿಸ್ತನು

ಯೇಸು ಕ್ರಿಸ್ತನು ತ್ರಿಯೇಕ ದೇವರರಲ್ಲಿ ಎರಡನೇಯ ವ್ಯಕ್ತಿಯೆಂದು ನಾವು ನಂಬುತ್ತೇವೆ; ಆತನು ನಿತ್ಯತ್ವದಿಂದ ತಂದೆಯ ಜೊತೆಯಲ್ಲಿ ಇದ್ದು, ಪರಿಶುದ್ದಾತ್ಮನಿಂದ ಮಾನವನಾಗಿ ಮತ್ತು ಕನ್ಯೆಯಾದ ಮರಿಯಳ ಮೂಲಕ ಹುಟ್ಟಿದನು, ಇದರಿಂದ ಎರಡು ಪರಿಪೂರ್ಣ ಸ್ವಭಾವಗಳು ಅದನ್ನು ದೇವರ ಹಾಗು ಮಾನವನ ಸ್ವಭಾವಗಳು ಒಂದು ವ್ಯಕ್ತಿಯಲ್ಲಿ ದೇವರು ಮತ್ತು ಮನುಷ್ಯನು, ದೇವ-ಮಾನವ ಎಂದು ನಾವು ನಂಬುತ್ತೇವೆ.

ಯಯೂಸ್ ಕ್ರಿಸ್ತನು ನಮ್ಮ ಪಾಪಗಳಿಗಾಗಿ ಮರನಿಸಿದನು ಎಂದು ನಾವು ನಂಬುತ್ತೇವೆ, ಮತ್ತು ಆತನು ನಿಜವಾಗಿ ಸಮಾಧಿಯಿಂದ ಎದ್ದು ಹಾಗೂ ಆತನ ಶರೀರವನ್ನು ನಿಜವಾಗಿ ಹಿಂದಕ್ಕೆ ಪಡೆದು, ಮನುಷ್ಯನ ಸ್ವಭಾವಕ್ಕೆ ಬೇಕಾದ ಎಲ್ಲಾ ಪರಿಪೂರ್ಣತೆಯನ್ನು ಕಾಪಾಡಿಕೊಂಡು ಇದರಿಂದ ಪರಲೋಕಕ್ಕೆ ಏರಿ ಹೋಗಿ ಮತ್ತು ನಮಗಾಗಿ ಅಲ್ಲಿ ಆತನು ಮಧ್ಯಸ್ಥಿಕೆಯನ್ನು ನಡೆಸುತ್ತಿದ್ದಾನೆ.

ಮತ್ತಾಯ 1 20-25; 16:15-16; ಲೂಕ 1;26-35; ಯೋಹಾನ 1:1-18 ಅ ಪೋ ಕೃ 2:22-36; ರೋಮಾಪುರದವರಿಗೆ 8:3, 32-34; ಗಲಾತಿಯರಿಗೆ 4:4-5; ಫಿಲಿಪ್ಪಿಯವರಿಗೆ 2;5-11 ಕೊಲೆಸ್ಸಿಯವರಿಗೆ 1:12-22; 1 ತಿಮೋಥಿ 6:14-16; ಇಬ್ರಿಯರಿಗೆ 1:1-5; 7:22-28; 9:24-28 1 ಯೋಹಾನ 1:1-3 4:2-3, 15

ಲೇಖನ 3

## ಪರಿಶುದ್ದಾತ್ಮನು.

ನಾವು ಪರಿಶುದ್ದಾತ್ಮನಲ್ಲಿ ನಂಬಿಕೆಯಿಡುತ್ತೇವೆ, ತ್ರಿಯೇಕ ದೇವರಲ್ಲಿ ಮೂರನೆಯ ವ್ಯಕ್ತಿ, ಆತನು ಕ್ರಿಸ್ತನ ಸಭೆಯ ಜೊತೆ ನಿರಂತರವಾಗಿ ಮತ್ತು ಕ್ರಿಯಾಶೀಲನಾಗಿದ್ದು, ಲೋಕವನ್ನು ಪಾಪದ ವಿಷಯದಲ್ಲಿ ಒಪ್ಪಿಸುತ್ತಾ, ಯಾರು ಮಾನಸಾಂತರ ಹೊಂದುತ್ತಾರೋಮತ್ತು ನಂಬುತ್ತಾರೋ ಅವರನ್ನು ಮಾರ್ಪಡಿಸಿ ಶುದ್ಧಿಕರಿಸಿ ಮತ್ತು ಕ್ರಿಸ್ತನಲ್ಲಿರುವ ಸರ್ವ ಸತ್ಯದಲ್ಲಿ ನಡೆಸುತ್ತಾನೆ.

ಯೋಹಾನ 7:39 ; 14:15-18 , 26; 16:7-15: ಅ ಪೋ ಕೃ 2:33; 15:8-9; ರೋಮಾಪುರದವರಿಗೆ 8:1-27: ಗಲಾತಿಯರಿಗೆ 3:1-14;4:6; ಎಫೆಸದವರಿಗೆ 3:14-21; 1 ಥೇಸಲೋನಿಕದವರಿಗೆ 4:7-8:2; 1 ಪೇತ್ರನು 1:2; 1 ಯೋಹಾನ 3;24; ;4:13

ಲೇಖನ 4

## ಪರಿಶುದ್ಧ ಲೇಖನಗಳು

ನಾವು ಪರಿಶುದ್ಧ ಲೇಖನಗಳ ಸಂಪೂರ್ಣ ಪ್ರೇರೆಪಣೆಯನ್ನು ನಂಬುತ್ತೇವೆ, ಇದರಿಂದ ನಾವು ಹಳೆಯ ಮತ್ತು ಹೊಸ ಒಡಂಬಡಿಕೆಯ 66 ಪುಸ್ತಕಗಳು ದೈವಿಕ ಪ್ರೇರಣೆಯಿಂದ ನೀಡಲ್ಪಟ್ಟಿವೆ, ನಮ್ಮ ರಕ್ಷಣೆಗೆ ಅವಶ್ಯಕವಾದ ದೇವರ ಎಲ್ಲಾ ಉದ್ದೇಶವನ್ನು ತಪ್ಪಿಲ್ಲದ ರೀತಿಯಲ್ಲಿ ತಿಳಿಸುತ್ತವೆ, ಅದ್ದರಿಂದ ಅದರಲ್ಲಿ ಇಲ್ಲದಿರುವ ಯಾವುದನ್ನು ನಾವು ನಂಬಿಕೆಯ ಲೇಖನದಲ್ಲಿ ಸೇರಿಸುವುದಿಲ್ಲ.

ಲೂಕ 24;44-47; ಯೋಹಾನ 10:35; 1 ಕೊರಿಂಥದವರಿಗೆ 15;3-4; 2 ತಿಮೋಥಿ 3:15-17; 1 ಪೇತ್ರನು 1:10-12; ; 2 ಪೇತ್ರನು 1:20-21

ಲೇಖನ 5

## ಪಾಪ, ಮೂಲಭೂತ ಹಾಗೂ ವ್ಯಯಕ್ತಿಕ

ನಮ್ಮ ಮೊದಲ ತಂದೆ ತಾಯಿಯಾರ ಅವಿಧೆಯತೆಯಿಂದ ಪಾಪ ಲೋಕದಲ್ಲಿ ಪ್ರವೇಶವಾಯಿತೆಂದು ನಾವು ನಂಬುತ್ತೇವೆ ಮತ್ತು ಪಾಪದಿಂದ ಮರಣವು ಬಂದಿತು. ಪಾಪವು ಎರಡು ಬಗೆ ಎಂದು ನಾವು ನಂಬುತ್ತೇವೆ; ಮೂಲ ಪಾಪ ಅಥವಾ ನೀತಿ ಭ್ರಷ್ಟತೆ , ಮತ್ತು ನಿಜವಾದ ಅಥವಾ ವ್ಯಯಕ್ತಿಕ ಪಾಪ.

ನಾವು ಮೂಲ ಪಾಪ ಅಥವಾ ನೀತಿ ಭ್ರಷ್ಟತೆಯು ಅದಾಮನ ಎಲ್ಲಾ ಸಂತತಿಯನ್ನು ತರ್ಕದಿಂದ ಭ್ರಷ್ಟಗೊಳಿಸುತ್ತದೆ ಇದರಿಂದ ಪ್ರತಿಯೊಬ್ಬನು ನಮ್ಮ ಆದಿ ತಂದೆ ತಾಯಿಯರು ಸೃಷ್ಟಿಯಲ್ಲಿ ಹೊಂದಿದ್ದ ಮೂಲವಾದ ನೀತಿಯಿಂದ ಅಥವಾ ಪರಿಶುದ್ಧ ಸ್ಥಿತಿಯಿಂದ ದೂರವಾಗಿದ್ದಾರೆ, ಇದು ದೇವರಿಗೆ ವಿರುದ್ಧವಾದದ್ದು, ಇದು, ಆತ್ಮಿಕ ಜೀವನವಿಲ್ಲದಿರುವುದು, ಮತ್ತು ಪಾಪಕ್ಕೆ ಒಳಗಾಗುವುದು, ಮತ್ತು ನಿರಂತರವಾಗಿರುವುದು. ನಾವು ಇನ್ನೂ ಮುಂದೆ ಹೋಗಿ ಮೂಲ ಪಾಪವು ಹೊಸ ಮಾರ್ಪಾಟಾದ ಜೀವನದಲ್ಲಿ ಅಸ್ಥಿತ್ವದಲ್ಲಿದ್ದು, ಹೃದಯವು ಸಂಪೂರ್ಣವಾಗಿ ದೀಕ್ಷಾಸ್ನಾನ ಮತ್ತು ಪರಿಶುದ್ಧಾತ್ಮನಿಂದ ಶುದ್ಧಿಕರಿಸಲ್ಪದುವವರೆಗೂ  ಅದು ಇರುತ್ತದೆ.

ಮೂಲ ಪಾಪವು ವಾಸ್ತವ ಪಾಪದಿಂದ ವ್ಯತ್ಯಾಸವಾಗಿದ್ದು ಅದರಲ್ಲಿ ಬಳುವಳಿಯಾಗಿ ಅದರ ಕಡೆಗೆ ಒಲವು ತೋರುತ್ತೇವೆ ಇದರಿಂದ ದೇವರನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವುದರಿಂದ  ಅಥವಾ ದೂರವಾಗುವುದರಿಂದ  ನಾವು ಇದರ ವಿಚಾರದಲ್ಲಿ ಜವಬ್ದಾರಿಯಾಗಿರುತ್ತೇವೆ.

ಮೂಲ ಪಾಪವು ಆಥವಾ ವ್ಯಯಕ್ತಿಕ ಪಾಪವು ಸಾಮಾನ್ಯವಾಗಿ ಜವಬ್ದಾರಿಯ ವ್ಯಕ್ತಿಯಿಂದ ತನಗೆ ತಿಳಿದಿರುವ ದೇವರ ಆಜ್ಞೆಯ ಸ್ವಯಂ ಅತಿಕ್ರಣವಾಗಿದೆ. ಆದ್ದರಿಂದ ಇದನ್ನು ಪಾಪದ ಸಾಮಾನ್ಯವಾದ ಪಲಿತಾಂಶವಾದ ಗೊತ್ತಿಲ್ಲದೇ ಮಾಡುವ ಮತ್ತು ತಪ್ಪಿಸಿಕೊಳ್ಳಲಾಗದ ತಪ್ಪುಗಳ, ಕೊರತೆಗಳ, ವಿಫಲತೆಗಳ, ಅಥವಾ ಪರಿಪೂರ್ಣವಾದ ನಿಯಮಗಳ ಉಲ್ಲಂಘನೆಗಳ ಜೊತೆ ನಾವು ಬೆರೆಸಬಾರದು. ಆದರೂ ಇಂತಹ ಅಮಾಯಕ ಕ್ರಿಯೆಗಳು ಕ್ರಿಸ್ತನ ಆತ್ಮಕ್ಕೆ ವಿರುದ್ದವಾಗಿ ಬೇಕೆಂತಲೇ ಮಾಡುವ ಕಾರ್ಯಗಳು ಮತ್ತು ಸ್ವಭಾವಗಳು ಇಂತಹವುಗಳನ್ನು ಆತ್ಮದ ವಿರುದ್ದವಾದ ಪಾಪಗಳೆಂದು ತಿಳಿದಿರುವವಗಳ ಜೊತೆ ಸೇರಿಸಬಾರದು. ವ್ಯಯಕ್ತಿಕ ಪಾಪವು ಮೂಲವಾಗಿ ಮತ್ತು ವಿಶೇಷವಾಗಿ ಪ್ರೀತಿಯ ಆಜ್ಞೆಯ ಅತಿಕ್ರಮಣವಾಗಿದೆ.; ಅದ್ದರಿಂದ ಕ್ರಿಸ್ತನ ಜೊತೆಗಿನ ಸಂಭಂದದಲ್ಲಿ ಪಾಪವನ್ನು ಅಪನಂಬಿಕೆ ಎಂದು ಹೇಳಬಹುದು.

ಮೂಲ ಪಾಪ: ಆದಿಕಾಂಡ 3:6;5; ಯೋಬನು 15:14; ಕೀರ್ತನೆಗಳು ೫೧:5 ಯೆರೆಮಿಯ 17:9-10 ಮಾರ್ಕ 7:21-23 ರೋಮಾಪುರದವರಿಗೆ 1:18-25; 5:12-14 8:9; 1 ಕೊರಿಂಥದವರಿಗೆ 3;1-4; ಗಲಾತಿಯರಿಗೆ 5:16-25; 1 ಯೋಹಾನ 1:7-8

ವ್ಯಯಕ್ತಿಕ ಪಾಪ: ಮತ್ತಾಯ 22:36-40 (1 ಯೋಹಾನ 3;4 ಜೊತೆಗೆ); ಯೋಹಾನ 8:34-36 16:8-9; ರೋಮಾಪುರದವರಿಗೆ 3;23; 6:15-23; 8:18-24; 14:23; 1 ಯೋಹಾನ 1:9-2:4; 3:7-10

ಲೇಖನ 6

## ಪ್ರಾಯಶ್ಚಿತ

ಯೇಸು ಕ್ರಿಸ್ತನು ತನ್ನ ಶ್ರಮೆಗಳಿಂದ, ಆತನ ಸ್ವಂತ ರಕ್ತವನ್ನು ಚೆಲ್ಲುವುದರಿಂದ ಮತ್ತು ಶಿಲುಬೆಯ ಮೇಲೆ ಆತನ ಮರಣದಿಂದ ಮಾನವರ ಪಾಪಕ್ಕೆ ಬೇಕಾದ ಸಂಪೂರ್ಣವಾದ ಪ್ರಾಯಶ್ಚಿತವನ್ನು ಮಾಡಿದ್ದಾನೆಂದು ನಾವು ನಮ್ಬಿತ್ತೇವೆ. ನಮ್ಮ ರಕ್ಷಣೆಗ ಈ ಪ್ರಾಯಶ್ಚಿತವು ಒಂದೇ ದಾರಿಯಾಗಿದೆ ಮತ್ತು ಅದಾಮನ ಸಂತತಿಯ ಪ್ರತಿಯೊಬ್ಬರಿಗೂ ಕೂಡ ಇದು ಸಾಕಾಗಿದೆ. ಪ್ರಾಯಶ್ಚಿತವುತಮ್ಮ ನೈತಿಕ ಜವಬ್ದಾರಿಯಿಂದ ಅಸಮಾರ್ಥ್ಯತೆಯನ್ನು ತೋರಿಸುತ್ತಾರೋ ಅವರಿಗೆ ಮತ್ತು ಎಲ್ಲ ಯುಗಗಳ ಜನರಿಗೂ ಪಾಪದಿಂದ ತಿರುಗಿ ಕೊಂಡು ಮತ್ತು ನಂಬುವ ಪ್ರತಿಯೊಬ್ಬರಿಗೂ ಇದು ಬೇಕಾಗಿದೆ.

ಯೆಶಾಯ 53:5-6, 11; ಮಾರ್ಕ 10:45; ಲೂಕ 24:46-೪ಲ; ಯೋಹಾನ 1:29; 3:14-17; ಅ ಪೋ ಕೃ 4:10-12; ರೋಮಾಪುರದವರಿಗೆ 3;21-26; 4;17-25; 5;6-21; 1 ಕೊರಿಂಥದವರಿಗೆ 6;20; 2ಕೊರಿಂಥದವರಿಗೆ 5:14-21; ಗಲಾತಿಯವರಿಗೆ 1:3-4; 3:13-14; ಕೊಲೆಸ್ಸಿಯವರಿಗೆ 1:19-23; 1 ತಿಮೋಥಿ2;3-6; ತೀತನಿಗೆ 2;11-14; ಇಬ್ರಿಯರಿಗೆ 2:9;9:11-14; 13:12; 1 ಪೇತ್ರನು 1:18-21; 2:19-25 1 ಯೋಹಾನ 2;1-2

ಲೇಖನ 7

## ನಿವಾರಕವಾದ ಕೃಪೆ

ಮಾನವರು ಸೃಷ್ಟಿಯ ಸಮಯದಲ್ಲಿ ದೇವರ ಗುಣಗಳ ಹಾಗೆ ಒಳ್ಳೆಯದು ಮತ್ತು ಕೆಟ್ಟದ್ದನ್ನು ಆರಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದ್ದರು ಎಂದು ನಾವು ನಂಬುತ್ತೇವೆ ಮತ್ತು ಇದರಿಂದ ಮಾನವರು ನೈತಿಕವಾದ ಜವಬ್ದಾರಿಯನ್ನು ಹೊತ್ತಿದ್ದರು ಅದಾಮನ ಪಾಪದಿಂದ ಅವರು ನೀತಿ ಭ್ರಷ್ಟತೆಯನ್ನು ಹೊಂದಿ ಈಗ ಅವರು ತಿರುಗಿ ಬರಲಾರದೆ ಮತ್ತು ದೇವರನ್ನು ಕರೆಯಲು ಸಿದ್ದತೆ ಮಾಡಿಕೊಳ್ಳಲು ಅವರಲ್ಲಿರುವ ನೈಸರ್ಗಿಕ ಶಕ್ತಿಯು ಸಾಲದು ಎಂಬುದನ್ನು ಗಮನಿಸಬೇಕು. ಆದರೆ ನಾವು ಕ್ರಿಸ್ತನ ಮೂಲಕ ದೇವರ ಕೃಪೆಯು ಉಚಿತವಾಗಿ ಎಲ್ಲಾ ಮನುಷ್ಯರಿಗೂ ನೀಡಲಾಗಿದೆ, ಇದರಿಂದ ಯಾರಾರು ಪಾಪದಿಂದ ನೀತಿಯ ಕಡೆಗೆ ತಿರುಗಿ ಕೊಳ್ಳುತ್ತಾರೋ, ಯೇಸುವಿನಲ್ಲಿ ಕ್ಷಮಾಪಣೆಗಾಗಿ ಮತ್ತು ಪಾಪ ನಿವಾರಣೆಗಾಗಿ ನಂಬಿಕೆಯಿಡುತ್ತಾರೋ, ಮತ್ತು ಆತನ ದೃಷ್ಟಿಯಲ್ಲಿ ಯಾವುದು ಒಳ್ಳೆಯದು ಮತ್ತು ಅಂಗಿಕಾರವೋ ಅಂತಹ ಸತ್ಕ್ರಿಯೆಗಳನ್ನೂ ನಡೆಸುತ್ತಾರೋ ಅಂತಹವರನ್ನು ಆತನು ಬಳಪಡಿಸುತ್ತಾನೆ.

ಎಲ್ಲಾ ಜನರು ಮಾರ್ಪಾಟಿನ ಅನುಭವದ ಮೂಲಕ ಅವರಲ್ಲಿರುವ ಮತ್ತು ಸಂಪೂರ್ಣ ಪರಿಶುದ್ದತೆಯಿಂದ ಬೀಳಬಹುದು ಮತ್ತು ದೂರವಾಗಬಹುದು ಅವರು ಅವರ ಪಾಪಗಳ ಬಗ್ಗೆ ತಿರುಗಿ ಮಾನಸಾಂತರ ಪಟ್ಟು ಆತನ ಬಳಿಗೆ ಬರದೆ ಹೋದರೆ ಅವರು ನಿರೀಕ್ಷೆಯಿಲ್ಲದೆ ಹಾಗೂ ನಿತ್ಯವಾಗಿ ಕಳೆದುಹೋಗಬಹುದು.

ದೇವರ ಹೋಲಿಕೆ ಹಾಗೂ ನೈತಿಕ ಜವಬ್ದಾರಿ: ಆದಿಕಾಂಡ 1;26-27; 2:16-17; ದ್ವಿತಿಯೋಪದೇಶಕಾಂಡ 28:1-2; 30;19; ಯೇಹೊಶುವ 24;15; ಕೀರ್ತನೆಗಳು 8;3-5; ಯೆಶಾಯ 1;8-10; ಯೆರೆಮಿಯ 31:29-30; ಯೆಹೆಜ್ಕೆಲನು 18:1-4; ಮೀಕಾ 6;8; ರೋಮಾಪುರದವರಿಗೆ 1:19-20; 2:1-16; 14:7-12; ಗಲಾತಿಯವರಿಗೆ 6:7-8

ಸ್ವಾಭಾವಿಕವಾದ ಅಸಮಾರ್ಥ್ಯ: ಯೋಬ 14:4; 15:14 ಕೀರ್ತನೆಗಳು 14:1-4; 51:5; ಯೋಹಾನ 3:6ಎ; ರೋಮಾಪುರದವರಿಗೆ 3:10-12; 5:12-14, 20ಎ; 7:14-25

ಉಚಿತ ಕೃಪೆ ಹಾಗು ವಿಶ್ವಾಸದ ಕೆಲಸಗಳು: ಯೆಹೆಜ್ಕೆಲನು 18:25-26;ಯೋಹಾನ 1:12-13; 3:6ಬಿ; ಅ ಪೋ ಕೃ 5:13; ರೋಮಾಪುರದವರಿಗೆ 5:6-8, 18; 6:15-16, 23, 10:6-8; 11:22; 1 ಕೊರಿಂಥದವರಿಗೆ 2;9-14;10:1-12; 2 ಕೊರಿಂಥದವರಿಗೆ 5;18-19 ಗಲಾತಿಯವರಿಗೆ 5;6 ಎಫೆಸದವರಿಗೆ 2:8-10; ಫಿಲಿಪ್ಪಿಯವರಿಗೆ 2:12-13 ಕೊಲೆಸ್ಸಿಯವರಿಗೆ 1:21-23; 2 ತಿಮೋಥಿ 4:10ಎ ತೀತನಿಗೆ 2:11-14; ಇಬ್ರಿಯರಿಗೆ 2:1-3; 3:12-15; 6:4-6; 10:26-31; ಯಾಕೋಬನು 2:18-22, 2 ಪೇತ್ರನು 1:10-11; 2:20-22

ಲೇಖನ 8

## ಮಾನಸಾಂತರ

ನಾವು ಪ್ರಾಮಾಣಿಕವಾದ ಮತ್ತು ಪಾಪದ ಬಗ್ಗೆ ಮನಸ್ಸಿನಲ್ಲಿ ಸಂಪೂರ್ಣವಾದ ಬದಲಾವಣೆಯು ವ್ಯಯಕ್ತಿಕ ತಪ್ಪಿತಸ್ಥ ಮನೋಭಾವನೆ ಮತ್ತು ಸ್ವಯಂ ಇಚ್ಚೆ ಯಿಂದ ಪಾಪದಿಂದ ತಿರುಗಿಕೊಳ್ಳುವ ಮಾನಸಾಂತರದಲ್ಲಿ ನಂಬಿಕೆಯಿಡುತ್ತೇವೆ. ಇಂತಹ ಕ್ರಿಯೆಯು ತಮ್ಮ ಸ್ವಂತ ಇಚ್ಚೆಯಿಂದ ದೇವರ ವಿರುದ್ದವಾಗಿ ತಿರುಗಿ ಬಿದ್ದ ಪ್ರತಿಯೊಬ್ಬರಿಂದಲೂ ಎದುರುನೋಡುತ್ತೇವೆ. ದೇವರ ಆತ್ಮನು ಯಾರಾರು ಮಾನಸಾಂತರ ಹೊಂದುವರು ಅವರಿಗೆ ಕೃಪೆಯಿಂದ ಸಹಾಯ ನೀಡಿ ಅವರಿಗೆ ಕರುಣೆಯ ಹೃದಯ ಮತ್ತು ನಿರೀಕ್ಷೆಯ ಕರುಣೆಯನ್ನು ಕೊಟ್ಟು ಅವರು ಕ್ಷಮಾಪಣೆ ಹಾಗೂ ಆತ್ಮಿಯ ಜೀವನದಲ್ಲಿ ನಂಬಿಕೆಯಿಡುವಂತೆ ಮಾಡುತ್ತಾನೆ.

2 ಪೂರ್ವಕಾಲವೃತ್ತಾಂತ 7:14; ಕೀರ್ತನೆ 32:5-6; 51:1-17; ಯೆಶಾಯ 55:6-7; ಯೆರೆಮಿಯ 3:12-14; ಯೆಹೆಜ್ಕೆಲನು 18:30-32; 33:14-16; ಮಾರ್ಕ 1:14-15; ಲೂಕ 3:1-14; 13:1-5; 18:9-14; ಅ ಪೋ ಕೃ 2:138; 3:19; 5:31; 17:30-31; 26:16-18; ರೋಮಾಪುರದವರಿಗೆ 2:4; 2 ಕೊರಿಂಥದವರಿಗೆ 7:8-11; 1 ಥೆಸಲೋನಿಕದವರಿಗೆ1;9; 2 ಪೇತ್ರನು 3:9

ಲೇಖನ ೯

## ನೀತಿನೀರ್ಣಯ, ಮಾರ್ಪಾಟು, ಮತ್ತು ದತ್ತು ಪಡೆಯುವುದು

ನೀತಿ ನಿರ್ಣಯವು ದೇವರ ಕೃಪೆಯ ಹಾಗೂ ನ್ಯಾಯಯುತವಾದ ಕಾರ್ಯವಾಗಿದೆ ಇದರಿಂದ ಆತನು ಮಾನವರು ನಡೆಸಿದ ಪಾಪದ ಶಿಕ್ಷೆಯಿಂದ ಪರಿಪೂರ್ಣವಾದ ಬಿಡುಗಡೆಯನ್ನು ಮತ್ತು ಯಾರಾರು ಯೇಸು ಕ್ರಿಸ್ತನನ್ನು ನಂಬುವರೋ ಮತ್ತು ಆತನನ್ನು ದೇವರಾಗಿ ಹಾಗೂ ರಕ್ಷಕನಾಗಿ ಅಂಗಿಕರಿಸುತ್ತರೋ ಅವರನ್ನು ನೀತಿವಂತರೆಂದು ಸ್ವೀಕರಿಸುತ್ತಾನೆ.

ಹೊಸ ಜೀವನ ಅಥವಾ ಮಾರ್ಪಾಟು ದೇವರ ಕೃಪೆಯ ಕಾರ್ಯವಾಗಿದೆ ಇದರಿಂದ ಮಾನಸಾಂತರ ಹೊಂದಿದ ಪಾಪಿಯ ನೈತಿಕ ಸ್ವಭಾವವು ಅತ್ಮಿಕವಾಗಿ ಎಚ್ಚರಿಸಲ್ಪಟ್ಟು ಮತ್ತು ಹೊಸ ಆತ್ಮಿಯ ಜೀವನ ಅಂದರೆ ನಂಬಿಕೆಯ, ಪ್ರೀತಿಯ ಮತ್ತು ವಿಧೇಯತೆಯ ಸಾಮರ್ಥ್ಯವನ್ನು ಆತನಿಗೆ ನೀಡಲಾಗುತ್ತದೆ ಎಂದು ನಾವು ನಂಬುತ್ತೇವೆ.

ದತ್ತು ಪಡೆಯುವುದು ದೇವರ ಕೃಪೆಯ ಕ್ರಿಯೆಯಾಗಿದೆ ಇದರಿಂದ ನೀತಿ ನಿರ್ಣಯ ಹೊಂದಿದ ಹಾಗೂ ಮಾರ್ಪಾಟು ಹೊಂದಿದ ವಿಶ್ವಾಸಿಯು ದೇವರ ಮಗನಾಗಿ ಅಂಗಿಕಾರ ಪಡೆಯುತ್ತಾನೆ ಎಂದು ನಾವು ನಂಬುತ್ತೇವೆ.

ನೀತಿನಿರ್ಣಯ, ಮಾರ್ಪಾಟು, ಮತ್ತು ದತ್ತು ಪಡೆಯುವುದು ಎಲ್ಲವೂ ಕೂಡ ದೇವರನ್ನು ಹುಡುಕುವ ವ್ಯಕ್ತಿಯಲ್ಲಿ ಒಂದರ ನಂತರ ಒಂದು ನಡೆಯುವ ಮತ್ತು ನಂಬಿಕೆಯ ಆಧಾರದಲ್ಲಿ, ಮಾನಸಾಂತರದ ನಂತರ ಮತ್ತು ಈ ಕಾರ್ಯಗಳಿಗಾಗಿ ಪರಿಶುದ್ಧಾತ್ಮನು ಸಾಕ್ಷಿಯನ್ನು ನೀಡುತ್ತಾನೆ ಎಂದು ನಾವು ನಂಬುತ್ತೇವೆ.

ಲೂಕ 18:14; ಯೋಹಾನ 1;12-13; 3:3-8; 5:24; ಅ ಪೋ ಕೃ13:39; ರೋಮಾಪುರದವರಿಗೆ 1:17; 3:21-26, 28; 4:5-9, 17-25; 5:1,16-19; 6:4; 7:6; 8:1, 15-17; 1 ಕೊರಿಂಥದವರಿಗೆ 1:30; 6:11; 2 ಕೊರಿಂಥದವರಿಗೆ 5:17-21; ಗಲಾತಿಯವರಿಗೆ 2:16-21; 3:1-14, 26; 4:4-7; ಎಫೆಸದವರಿಗೆ 1:6-7; 2:1, 4-5; ಫಿಲಿಪ್ಪಿಯವರಿಗೆ 3;3-9; ಕೊಲೆಸ್ಸಿಯವರಿಗೆ 2:13; ತೀತನಿಗೆ 3:4-7; 1 ಪೇತ್ರನು 1;23; 1 ಯೋಹಾನ 1;9; 3:1-2, 9; 4:7; 5:1, 9-13, 18

ಲೇಖನ 10

## ಕ್ರೈಸ್ತವ ಪವಿತ್ರತೆ ಹಾಗೂ ಸಂಪೂರ್ಣ ಪವಿತ್ರೀಕರಣ

ಪವಿತ್ರೀಕರಣ ಎಂಬುವುದು ದೇವರ ಕೆಲಸ ಎಂದು ನಾವು ನಂಬುತ್ತೇವೆ ಇದರಲ್ಲಿ ವಿಶ್ವಾಸಿಯೂ ಕ್ರಿಸ್ತನ ಹಾಗೆ ಬದಲಾಗುತ್ತಾನೆ. ಇದು ಪರಿಶುದ್ಧಾತ್ಮನ ಸಹಾಯದಿಂದ ದೇವರ ಕೃಪೆಯಿಂದ ನಡೆಯುವ ಕಾರ್ಯವಾಗಿದೆ ಪವಿತ್ರೀಕರಣದ ಪ್ರಾರಂಭದ ಹಂತದಲ್ಲಿ ಅಥವಾ ಹೊಸದಾಗಿ ಜನ್ಮ ಪಡೆಯುವುದು (ನೀತಿ ನಿರ್ಣಯಕ್ಕೆ ಸಮಾನವಾದದ್ದು), ಪವಿತ್ರೀಕರಣದ ಪೂರ್ಣಾವಧಿಯಲ್ಲಿ ಮತ್ತು ಪರಿಶುದ್ಧಾತ್ಮನ ಪವಿತ್ರಗೊಲಿಸುವ ಕಾರ್ಯವು ಮಹಿಮೆ ಹೊಂದುವುದರಲ್ಲಿ ಅಂತ್ಯವಾಗುತ್ತದೆ. ಮಹಿಮೆ ಹೊಂದುವುದರಲ್ಲಿ ನಾವು ಸಂಪೂರ್ಣವಾಗಿ ಕ್ರಿಸ್ತನ ಹಾಗೆ ಮಾರ್ಪಾಡು ಹೊಂದುತ್ತೇವೆ.

ಪವಿತ್ರೀಕರಣದ ಸಂಪೂರ್ಣವಾದ ಹೊಣೆ ದೇವರ ಕೆಲಸವಾಗಿದೆ ಎಂದು ನಾವು ನಂಬುತ್ತೇವೆ, ಇದು ಮಾರ್ಪಾಟಿಗೆ ಹೊಂದಿಕೊಂಡಿರುತ್ತದೆ ಅದ್ದರಿಂದ ವಿಶ್ವಾಸಿಗಳು ಮೂಲ ಪಾಪದಿಂದ ಅಥವಾ ನೀತಿ ಬ್ರಷ್ಟತೆಯಿಂದ ಬಿಡುಗಡೆ ಹೊಂದುತ್ತಾರೆ, ಮತ್ತು ದೇವರಿಗೆ ಸಂಪೂರ್ಣವಾದ ಅಂಕಿತ ಭಾವದ ಸ್ವಭಾವಕ್ಕೆ ಬರುತ್ತಾರೆ, ಮತ್ತು ಪರಿಶುದ್ಧ ವಿಧೇಯತೆಯು ಪ್ರೀತಿಯಲ್ಲಿ ಪರಿಪಕ್ವತೆಯನ್ನು ಕಾಣುತ್ತದೆ.

ಇದು ದಿಕ್ಷಾಸ್ನಾನದ ಮೂಲಕ ನಡೆಯುತ್ತದೆ ಅಥವಾ ಪರಿಶುದ್ಧಾತ್ಮನಿಂದ ತುಂಬಲ್ಪಡುವುದರಿಂದ ನಡೆಯುತ್ತದೆ, ಮತ್ತು ಒಬ್ಬನ ಜೀವನದಲ್ಲಿ ಇದು ಹೃದಯ ಶುದ್ದಿಕರಣದಿಂದ ಮತ್ತು ಪರಿಶುದ್ಧಾತ್ಮನ ನೆಲೆಸುವಿಕೆಯಿಂದ, ವಿಶ್ವಾಸಿಯನ್ನು ಜೀವನಕ್ಕೆ ಹಾಗು ಸೇವೆಗೆ ಸಿದ್ಧಮಾಡುತ್ತದೆ.

ಪೂರ್ಣ ಪವಿತ್ರೀಕರಣವು ಕ್ರಿಸ್ತನ ರಕ್ತದ ಮೂಲಕ ಕೊಡಲಾಗಿದೆ, ಇದು ಕೃಪೆಯಿಂದ ನಂಬಿಕೆಯ ಮೂಲಕ ತಕ್ಷಣ ನೀಡಲಾಗಿದೆ, ಸಂಪೂರ್ಣ ಒಪ್ಪಿಸುವಿಕೆಯಿಂದ ಮುಂದೆಸಾಗುತ್ತದೆ ಮತ್ತು ಈ ರೀತಿಯ ಪರಿಶುದ್ಧಾತ್ಮನ ಕೆಲಸ ಹಾಗು ಸ್ಥಿತಿಗೆ ಆತನೇ ಸಾಕ್ಷಿಯಾಗಿದ್ದಾನೆ.

ಈ ಅನುಭವವು ವಿವಿಧ ಹಂತಗಳಲ್ಲಿ ಬೇರೆ ಬೇರೆ ಪದಗಳಿಂದ ಕರೆಯಲ್ಪಡುತ್ತದೆ, ಅವುಗಳು, "ಕ್ರೈಸ್ತವ ಪರಿಪೂರ್ಣತೆ," "ಪರಿಪೂರ್ಣ ಪ್ರೀತಿ," "ಹೃದಯ ಶುದ್ಧೀಕರಣ," "ಪರಿಶುದ್ಧಾತ್ಮನಿಂದ ಅಥವಾ ಅತ್ಮನಿಂದ ತುಂಬಿಸಲ್ಪಡುವುದು," "ಆಶೀರ್ವಾದದ ಸಂಪೂರ್ಣತೆ," ಮತ್ತು "ಕ್ರೈಸ್ತವ ಪರಿಶುದ್ಧತೆ," ಎಂಬುವಂಥವು

ಶುದ್ದ ಹೃದಯ ಹಾಗು ಪ್ರೌಢ ನಡುವಳಿಕೆಯಲ್ಲಿ ಸ್ಪಷ್ಟವಾದ ವ್ಯತ್ಯಾಸವಿದೆ ಎಂದು ನಾವು ನಂಬುತ್ತೇವೆ. ಮೊದಲಿನದ್ದು ಆ ಕ್ಷಣಕ್ಕೆ ಬರುತ್ತದೆ, ಸಂಪೂರ್ಣ ಪವಿತ್ರೀಕರಣದ ಫಲ; ನಂತರದ್ದು ಕೃಪೆಯಲ್ಲಿ ಬೆಳೆಯುವುದರ ಫಲವಾಗಿ ಬರುತ್ತದೆ ಎಂದು ನಾವು ನಂಬುತ್ತೇವೆ.

ಸಂಪೂರ್ಣ ಪವಿತ್ರೀಕರಣದ ಕೃಪೆಯು ಕ್ರಿಸ್ತನ ಹಾಗಿರುವ ಶಿಷ್ಯತ್ವದಲ್ಲಿ ಬೆಳೆಯಲು ನೀಡುವ ದೈವಿಕ ಪ್ರೇರಣೆಯಾಗಿದೆ ಎಂದು ನಾವು ನಂಬುತ್ತೇವೆ. ಆದರೂ ಕೂಡ, ಈ ನಡೆಸುವಿಕೆಯು ಮನಸಾಕ್ಷಿಯಿಂದ ನಡೆಸಲ್ಪಡಬೇಕು, ಮತ್ತು ಕ್ರಿಸ್ತನ ಮಾದರಿಯ ಗುಣ ಹಾಗು ನಡುವಳಿಕೆಯಲ್ಲಿ

ನಡೆಯಲು, ಬೆಳೆಯಲು ಮತ್ತು ಮುಂದುವರಿಯಲು ಎಚ್ಚರಿಕೆಯ ಗಮನವನ್ನು ನೀಡಬೇಕು. ಈ ರೀತಿಯ ಉದ್ದೇಶಪೂರ್ವಕವಾದ ಕಾರ್ಯಗಳಿಲ್ಲದೆ ಒಬ್ಬನ ಸಾಕ್ಷಿಯೂ ಬಲಹೀನವಾಗುತ್ತದೆ ಮತ್ತು ಕೃಪೆಯು ತನ್ನ ಮಹತ್ವವನ್ನು ಕಳೆದುಕೊಂಡು ಕೊನೆಗೆ ದೂರವಾಗುತ್ತದೆ.

ಕೃಪೆಯ ಕೆಲಸದಲ್ಲಿ ಭಾಗಿಯಾಗುತ್ತಾ, ವಿಶೇಷವಾಗಿ ಸಹವಾಸದಲ್ಲಿ, ಶಿಷ್ಯತ್ವದಲ್ಲಿ, ಮತ್ತು ಸಭೆಯ ಪವಿತ್ರ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಾ, ವಿಶ್ವಾಸಿಗಳು ಕೃಪೆಯಲ್ಲಿ ಬೆಳೆಯುತ್ತಾರೆ ಮತ್ತು ಸಂಪೂರ್ಣ ಹೃದಯದಿಂದ ದೇವರನ್ನು ಹಾಗು ನೆರೆಹೊರೆಯವರನ್ನು ಪ್ರೀತಿಸುತ್ತಾರೆ.

ಯೆರೆಮಿಯನು 31:31-34; ಯೆಹೆಜ್ಕೇಲನು 36:25-27; ಮಲಾಕಿಯ 3:2-3; ಮತ್ತಾಯ 3:11-12; ಲೂಕ 3:16-17; ಯೋಹಾನ 7:37-39; 14:15-23; 17:6-20; ಅ ಪೋ ಕೃ1:5; 2:1-4; 15:8-9; ರೋಮಾಪುರದವರಿಗೆ 6:11-13, 19; 8:1-4; 8-14;12: 1-2; 2 ಕೊರಿಂಥದವರಿಗೆ 6:14-7:1; ಗಲಾತಿಯವರಿಗೆ 2:20; 5:16-25; ಎಫೆಸದವರಿಗೆ 3:14-21; 5:17-18, 25-27; ಫಿಲಿಪ್ಪಿಯವರಿಗೆ 3:10-15; ಕೊಲೆಸ್ಸಿಯವರಿಗೆ 3:1-17; 1 ಥೆಸಲೋನಿಕದವರಿಗೆ 5:23-24; ಇಬ್ರಿಯರಿಗೆ 4:9-11; 10:10-17; 12:1-2; 13:12; 1 ಯೋಹಾನ 1;7,9

"ಕ್ರೈಸ್ತವ ಪರಿಪೂರ್ಣತೆ," "ಪರಿಪೂರ್ಣ ಪ್ರೀತಿ," ದ್ವಿತಿಯೋಪದೇಶಕಾಂಡ 30:6; ಮತ್ತಾಯ 5;43-48; 22:37-40; ರೋಮಾಪುರದವರಿಗೆ 12:9-21; 13:8-10; 1 ಕೊರಿಂಥದವರಿಗೆ 13; ಫಿಲಿಪ್ಪಿಯವರಿಗೆ 3:10-15; ಇಬ್ರಿಯರಿಗೆ 6:1; 1 ಯೋಹಾನ 4;17-18

"ಹೃದಯ ಶುದ್ಧೀಕರಣ," ಮತ್ತಾಯ 5;8; ಅ ಪೋ ಕೃ15:8-9; 1 ಪೇತ್ರನು 1;22; 1 ಯೋಹಾನ 3:3

"ಪರಿಶುದ್ಧಾತ್ಮನಿಂದ ತುಂಬಿಸಲ್ಪಡುವುದು," ಯೆರೆಮಿಯ 31:31-34; ಯೆಹೆಜ್ಕೇಲನು 36:25-27; ಮಲಾಕಿಯ 3:2-3; ಮತ್ತಾಯ 3:11-12; ಲೂಕ 3:16-17; ಯೋಹಾನ 7:37-39; 14:15-23; 17:6-20; ಅ ಪೋ ಕೃ1:5; 2:1-4; 15:8-9

"ಕ್ರೈಸ್ತವ ಪರಿಶುದ್ಧತೆ," ಮತ್ತಾಯ 5:1-7;29; ಯೋಹಾನ 15:1-11; ರೋಮಾಪುರದವರಿಗೆ 12:1-5:3; 2 ಕೊರೀಂಥದವರಿಗೆ 7:1; ಎಫೆಸದವರಿಗೆ 4:17-5:20; ಫಿಲಿಪ್ಪಿಯವರಿಗೆ 1:9-11; 3:12-15; ಕೊಲೆಸ್ಸಿ ಯವರಿಗೆ 2:20-3:17; 1 ಥೆಸಲೋನಿಕದವರಿಗೆ 3:13; 4;7-8; 5:23; 2 ತಿಮೋಥಿ 2:19-22; ಇಬ್ರಿಯರಿಗೆ 10:19-25; 12-14; 13:20-21; 1 ಪೇತ್ರನು 1:15-16; 2 ಪೇತ್ರನು 1:1-11; 3:18; ಯೂದ 20-21

ಲೇಖನ 11

## ಸಭೆ

ಯೇಸುವನ್ನು ದೇವರೆಂದು ಅಂಗಿಕರಿಸುವ ಸಮುದಾಯಲ್ಲಿ ನಾವು ನಂಬಿಕೆಯಿಡುತ್ತೇವೆ.ಒಡಂಬಡಿಕೆಯ ಜನರು ಕ್ರಿಸ್ತನಲ್ಲಿ ಹೊಸದಾಗಿ ಹುಟ್ಟಿದ್ದಾರೆ, ದೇವರ ವಾಕ್ಯದ ಮೂಲಕ ಪರಿಶುದ್ಧಾತ್ಮನಿಂದ ಕ್ರಿಸ್ತನ ದೇಹವಾಗಿರಲು ಕರೆಯಲ್ಪಟ್ಟಿರುವ ಜನರೆಂದು ನಂಬುತ್ತೇವೆ.

ದೇವರು ಸಭೆಯನ್ನು ತನ್ನ ಜೀವನವನ್ನು ಆತ್ಮನ ಐಕ್ಯತೆ ಮತ್ತು ಸಹವಾಸದಲ್ಲಿ ತೋರಿಸಲು ಕರೆಯುತ್ತಾನೆ; ದೇವರ ವಾಕ್ಯದ ಭೋಧನೆಯ ಮೂಲಕ ಆರಾಧನೆಯಲ್ಲಿ, ಸಭೆಯ ಪವಿತ್ರ ಕಾರ್ಯಗಳಲ್ಲಿ, ಮತ್ತು ಆತನ ಹೆಸರಿನಲ್ಲಿ ಸೇವೆಯನ್ನು ನಡೆಸಲು ಕ್ರಿಸ್ತನಿಗೆ ವಿಧೆಯತೆಯಲ್ಲಿ, ಪವಿತ್ರ ಜೀವನದಲ್ಲಿ, ಮತ್ತು ಪರಸ್ಪರ ಜವಬ್ದಾರಿಕೆಯಲ್ಲಿ ಇರಲು ಆತನು ಸಭೆಯನ್ನು ಕರೆಯುತ್ತಾನೆ.

ಈ ಲೋಕದಲ್ಲಿ ಸಭೆಯ ಧ್ಯೆಯವು ಪರಿಶುದ್ಧಾತ್ಮನ ಶಕ್ತಿಯ ಮೂಲಕ ಕ್ರಿಸ್ತನ ವಿಮೋಚನೆಯ ಮತ್ತು ಸಂಧಾನದ ಸೇವೆಯನ್ನು ಹಂಚುವುದಾಗಿದೆ. ಸಭೆಯು ತನ್ನ ಧ್ಯೆಯವನ್ನು ಸುವಾರ್ತೆಯಿಂದ, ಶಿಕ್ಷಣದಿಂದ, ಅನುಕಂಪವನ್ನು ತೋರುವುದರಿಂದ, ನ್ಯಾಯಕ್ಕಾಗಿ ದುಡಿಯುವುದರಿಂದ ಮತ್ತು ದೇವರ ರಾಜ್ಯದ ಕುರಿತಾಗಿ ಸಾಕ್ಷಿಯನ್ನು ಸಾರುವುದರಿಂದ, ಶಿಷ್ಯರನ್ನು ತಯಾರು ಮಾಡುವುದರಿಂದಪೂರ್ಣಗೊಳಿಸುತ್ತದೆ.

ಸಭೆಯು ಒಂದು ಚಾರಿತ್ರಿಕವಾದ ವಾಸ್ತವತೆಯಾಗಿದೆ ಅದು ಸಂಸ್ಕೃತಿಗೆ ಅನುಗುಣವಾಗಿ ವಿಧಾನಗಳಲ್ಲಿ, ಸ್ಥಳೀಯ ಹಾಗು ಜಾಗತಿಕ ಸಂಸ್ಥೆಯಾಗಿ ಮತ್ತು ದೇವರಿಂದ ಕರೆಯಲ್ಪಟ್ಟಿರುವ ಆತನ ವಿಶೇಷ ಸೇವೆಗಾಗಿ ಜನರನ್ನು ಪ್ರತ್ಯೇಕ ಪಡಿಸುತ್ತದೆ. ದೇವರು ಸಭೆಯನ್ನು ಆತನ ಅಧಿಕಾರದ ಕೆಳಗೆ ನಮ್ಮ ದೇವರು ಮತ್ತು ರಕ್ಷಕನಾದ ಕ್ರಿಸ್ತನ ಆಗಮನದ ಎದುರು ನೋಡುವಿಕೆಯನ್ನು ಮತ್ತು ಅಂತ್ಯವನ್ನು ಸಾರಲು ಕರೆದಿದ್ದಾನೆ.

ವಿಮೊಚನೆಕಾಂಡ 19;3; ಯೆರೆಮಿಯ 31:33; ಮತ್ತಾಯ 8:11; 10:7; 16:13-19, 24; 18:15-20; 28:19-20 ಯೋಹಾನ 17:14-26; 20:21-23; ಅ ಪೋ ಕೃ 1:7-8; 2:32-47; 6:1-2; 13:1; 14:23; ರೋಮಾಪುರದವರಿಗೆ 2;28-29; 4:16; 10:9-15; 11:13-32; 12:1-8; 15:1-3; 1 ಕೊರಿಂಥದವರಿಗೆ 3:5-9; 7:17; 11:1; 17-33; 12:3; 12-31; 14:26-40; 2 ಕೊರಿಂಥದವರಿಗೆ 5;11-6;1; ಗಲಾತಿಯವರಿಗೆ 5:6; 13-14; 6:1-5, 15; ಎಫೆಸದವರಿಗೆ 4:1-17; 5:25-27 ಫಿಲಿಪ್ಪಿಯವರಿಗೆ 2:1-16; 1 ಥೆಸಲೋನಿಕದವರಿಗೆ 4:1-12; 1 ತಿಮೋಥಿ 4:13; ಇಬ್ರಿಯರಿಗೆ 10:19-25; 1 ಪೇತ್ರನು 1:1-2, 13; 2:4-12, 21; 4:1-2, 10-11; 1 ಯೋಹಾನ 4:17 ಯೂದ 24; ಪ್ರಕಟಣೆ 5:9-10.

ಲೇಖನ 12

## ದೀಕ್ಷಾಸ್ನಾನ

ನಮ್ಮ ದೇವರಾದ ಯೇಸುವಿನ ಆಜ್ಞೆಯಂತೆ, ಕ್ರೈಸ್ತವ ದೀಕ್ಷಾಸ್ನಾನವು ಯೇಸು ಕ್ರಿಸ್ತನ ಪ್ರಾಯಸ್ಚಿತದ ಫಲವನ್ನು ಅಂಗಿಕಾರ ಮಾಡುವ, ವಿಶ್ವಾಸಿಗಳಿಗೆ

ಕೊಡಲ್ಪಟ್ಟಿರುವ ಮತ್ತು ಅವರು ಕ್ರಿಸ್ತನನ್ನು ರಕ್ಷಕನಾಗಿ ಅಂಗಿಕರಿಸುವ ಮತ್ತು ಪರಿಶುದ್ಧತೆಯಲ್ಲಿ ಮತ್ತು ನೀತಿಯಲ್ಲಿ ಸಂಪೂರ್ಣ ವಿಧೇಯತೆಯನ್ನು ತೋರಿಸುವ ಬಹಿರಂಗ ಪ್ರಕಟಣೆ ಯಾಗಿದೆ ಎಂದು ನಂಬುತ್ತೇವೆ.

ದೀಕ್ಷಾಸ್ನಾನವು ಹೊಸ ಒಡಂಬಡಿಕೆಯ ಸೂಚನೆಯಾಗಿದೆ, ತಂದೆ ತಾಯಿಯರ ಒಪ್ಪಿಗೆಯ ಮೇರೆಗೆ ಯುವಕರಿಗೂ ದೀಕ್ಷಾಸ್ನಾನ ಕೊಡಬಹುದು, ಯಾಕೆಂದರೆ ಅವರು ತಮ್ಮ ಮಕ್ಕಳ ಕ್ರೈಸ್ತಿಯ ಶಿಕ್ಷಣದ ಅವಶ್ಯಕತೆಯನ್ನು ಒಪ್ಪಿಕೊಳ್ಳುತ್ತಾರೆ.

ದೀಕ್ಷಾಸ್ನಾನವನ್ನು ನೀರನ್ನು ಚಿಮಿಕಿಸುವುದರಿಂದ, ಸುರಿಯುವುದರಿಂದ, ಅಥವಾ ಮುಳುಗಿಸುವುದರಿಂದ ದೀಕ್ಷಾಸ್ನಾನ ತೆಗೆದುಕೊಳ್ಳುವ ವ್ಯಕ್ತಿಯ ಇಚ್ಚೆಯ ಮೇರೆಗೆ ಕೊಡಬಹುದು.

ಮತ್ತಾಯ 3:1-7; 28:16-20; ಅ ಪೋ ಕೃ 2:37-41; 8:35-39; 10:44-೪೮; 16:29-34 19:1-6; ರೋಮಾಪುರದವರಿಗೆ 6:3-4; ಗಲಾತಿಯವರಿಗೆ 3:26-28; ಕೊಲೆಸ್ಸಿಯವರಿಗೆ 2:12; 1 ಪೇತ್ರನು 3;18-22

ಲೇಖನ 13

## ಕರ್ತನ ಭೋಜನ

ನಮ್ಮ ಕರ್ತನಾದ ಯೇಸು ಕ್ರಿಸ್ತನಿಂದ ಸ್ಥಾಪಿತವಾದ ಸ್ಮಾರಕ ಮತ್ತು ಸಹವಾಸದ ಭೋಜನವು ಹೊಸ ಒಡಂಬಡಿಕೆಯ ಸಭೆಯ ಅಭ್ಯಾಸಗಳಲ್ಲಿ ಒಂದಾಗಿದ್ದು, ಅದು ಆತನ ತ್ಯಾಗಪೂರಿತವಾದ ಮರಣದ ಮೂಲಕ ವಿಶ್ವಾಸಿಯು ಹೊಸ ಜೀವನದಲ್ಲಿ ಅದರ ಫಲವನ್ನು ಪಡೆಯಲು ರಕ್ಷಣೆ ಮತ್ತು ಕ್ರಿಸ್ತನಲ್ಲಿರುವ ಆತ್ಮಿಕ ಆಶೀರ್ವಾದಗಳನ್ನು ಪಡೆಯಬಹುದೆಂದು ನಾವು ನಂಬುತ್ತೇವೆ. ಅದರ ನಿಯಮಿತವಾದ ಗೌರವದ ಪಾಮುಖ್ಯತೆಯನ್ನು ಯಾರು ಅದಕ್ಕೆ ತಕ್ಕ ಹಾಗೆ ಸಿದ್ದಪಡಿಸಿಕೊಳ್ಳುತ್ತಾರೋ ಅವರಿಗೆ ಮಾತ್ರ ಮತ್ತು ಅವರು ಇದರ ಮೂಲಕ ಕ್ರಿಸ್ತನ ಬರೋಣದ ತನಕ ಆತನ ಮರಣದ ಬಗ್ಗೆ ತಿಳಿಸುತ್ತಾರೆ. ಇದು ಸಹವಾಸದ ಔತಣವಾಗಿದ್ದು, ಯಾರು ಕ್ರಿಸ್ತನಲ್ಲಿ ನಂಬಿಕೆಯನ್ನು ಇಟ್ಟಿದ್ದಾರೋ ಮತ್ತು ಪರಿಶುದ್ಧರಲ್ಲಿ ಪ್ರೀತಿಯನ್ನು ಹೊಂದಿದ್ದಾರೋ ಅವರನ್ನು ಇದರಲ್ಲಿ ಪಾಲ್ಗೊಳ್ಳಲು ಆಹ್ವಾನಿಸಬೇಕು.

ವಿಮೊಚನೆಕಾಂಡ 12:1-14; ಮತ್ತಾಯ 26:26-29; ಮಾರ್ಕ 14:22-25; ಲೂಕ 22:17-20; ಯೋಹಾನ 6:28-58; 1 ಕೊರಿಂಥದವರಿಗೆ 10:14-21; 11:23-32

ಲೇಖನ 14

## ದೈವಿಕ ಸ್ವಸ್ಥತೆ

ನಾವು ಸತ್ಯವೇದ ಆಧಾರಿತ ದೈವಿಕ ಸ್ವಸ್ಥತೆಯಲ್ಲಿ ನಂಬಿಕೆಯಿಡುತ್ತೇವೆ ಮತ್ತು ಜನರು ರೋಗಿಗಳಿಗೆ ನಂಬಿಕೆಯ ಪ್ರಾರ್ಥನೆಯನ್ನು ಸಲ್ಲಿಸಿಬೇಕು ಎಂದು ಕೇಳಿಕೊಳ್ಳುತ್ತೇವೆ. ದೇವರು ಮಾನವ ಪ್ರಯತ್ನಗಳ ವಿಧಾನಗಳಾದ ವೈದ್ಯಕೀಯ ಮಾರ್ಗಗಳಿಂದಲೂ ಕೂಡ ದೇವರು ಸ್ವಸ್ಥ ಪಡಿಸುತ್ತಾನೆ ಎಂದು ನಂಬುತ್ತೇವೆ.

1 ಅರಸುಗಳು 5;1-19; ಕೀರ್ತನೆಗಳು ೧೦೩:1-5; ಮತ್ತಾಯ 4;23-24; 9:18-35; ಯೋಹಾನ 4:46-೫೪; ಅ ಪೋ ಕೃ 5:12-16; 9:32-42; 14:8-15; 1 ಕೊರಿಂಥದವರಿಗೆ 12:4-11; 2 ಕೊರಿಂಥದವರಿಗೆ 12:7-10; ಯಾಕೋಬನು 5:13-16

ಲೇಖನ 15

## ಕ್ರಿಸ್ತನ ಎರಡನೇಯ ಬರೋಣ

ಕರ್ತನಾದ ಯೇಸು ಕ್ರಿಸ್ತನು ಮತ್ತೆ ಬರುತ್ತಾನೆ ಎಂದು ನಾವು ನಂಬುತ್ತೇವೆ; ಯಾರು ಕ್ರಿಸ್ತನಲ್ಲಿ ನಿದ್ರಿಸುತ್ತಿದ್ದಾರೋ ಅವರು ಬದುಕಿರುವವರಿಗಿಂತಲೂ ಮುಂಚೆ ಆತನನ್ನು ಎದುರುಗೊಳ್ಳುತ್ತಾರೆ; ಆರದೆ ನಾವು ಆತನಲ್ಲಿ ಐಕ್ಯವಾಗಿದ್ದರೆ, ನಾವು ಕೂಡ ಎದ್ದು ಬರುವ ನೀ ತಿವಂತರ ಜೊತೆಯಲ್ಲಿ ಆಕಾಶದಲ್ಲಿ ಒಯ್ಯಲ್ಪಟ್ಟು ಪರಲೋಕದಲ್ಲಿ ಕರ್ತನ ಜೊತೆ ನಿರಂತರವಾಗಿ ಜೀವಿಸಲು ಹೋಗುತ್ತೇವೆ.

ಮತ್ತಾಯ 25:31-46; ಯೋಹಾನ 14:1-3; ಅ ಪೋ ಕೃ 1;9-11; ಫಿಲಿಪ್ಪಿಯವರಿಗೆ 3:20-21; 1 ಥೆಸಲೋನಿಕದವರಿಗೆ 4:13-18; ತೀತನಿಗೆ 2:11-14; ಇಬ್ರಿಯರಿಗೆ 9;26-28; 2 ಪೇತ್ರನು 3:3-15; ಪ್ರಕಟಣೆ 1:7-8; 22:7-20

ಲೇಖನ 16

## ಪುನರುತ್ಥಾನ, ನ್ಯಾಯತೀರ್ಪು ಮತ್ತು ಹಣೆಬರಹ

ನಾವು ಸತ್ತವರ ಪುನರುತ್ಥಾನದಲ್ಲಿ ನಂಬಿಕೆಯಿಡುತ್ತೇವೆ. ನೀತಿವಂತರ ಮತ್ತು ಅನೀತಿವಂತರ ಶರೀರಗಳು ಜೀವಿತವಾಗಿ ಎಬ್ಬಿಸಲ್ಪಟ್ಟು ಅವರ ಆತ್ಮಗಳ ಜೊತೆ ಸೇರಿಕೊಂಡು "ಯಾರು ಒಳ್ಳೆಯದನ್ನು ಮಾಡಿದ್ದಾರೋ ಅವರು ಜೀವಕ್ಕೂ ಮತ್ತು ಯಾರು ಕೆಟ್ಟದ್ದನ್ನು ಮಾಡಿದ್ದಾರೋ ಅವರು ನಿತ್ಯ ನಾಶನದ ಪುನರುತ್ಥಾನಕ್ಕೂ ಎಬ್ಬಿಸಲ್ಪಡುವರು"

ನಾವು ಭವಿಷ್ಯದಲ್ಲಿ ನಡೆಯುವ ನ್ಯಾಯತೀರ್ಪಿನಲ್ಲಿ ನಂಬಿಕೆಯಿಡುತ್ತೇವೆ. ಅದರಲ್ಲಿ ಪ್ರತಿಯೊಬ್ಬ ಮನುಷ್ಯನು ದೇವರ ಮುಂದೆ ಹಾಜರಾಗಿ ಅವನ ಮತ್ತು ಅವಳ ಜೀವನದಲ್ಲಿ ನಡೆಸಿದ ಕ್ರಿಯೆಗಳ ಅನುಸಾರವಾಗಿ ತೀರ್ಪನ್ನು ಹೊಂದಬೇಕು.

ನಮ್ಮ ಕರ್ತನಾದ ಯೇಸು ಕ್ರಿಸ್ತನನ್ನು ರಕ್ಷಣೆಗಾಗಿ ಅಂಗಿಕರಿಸುತ್ತಾರೋ ಅವರೆಲ್ಲರಿಗೂ ಮಹಿಮೆಯ ಹಾಗು ನಿತ್ಯಜೀವ ವಾಗ್ದಾನ ಮಾಡಲ್ಪಟ್ಟಿದೆ ಎಂದು ನಾವು ನಂಬುತ್ತೇವೆ.; ಮತ್ತು ಕೊನೆಯದಾಗಿ ಯಾರು ಪಶ್ಚಾತ್ತಾಪ ಹೊಂದುವುದಿಲ್ಲವೋ ಅವರಿಗೆ ನರಕವು ಸಿದ್ಧವಾಗಿದೆ ಎಂದು ನಂಬುತ್ತೇವೆ.

ಆದಿಕಾಂಡ 8;25; 1 ಸಮುವೇಲನು 2:10; ಕೀರ್ತನೆಗಳು 50:6; ಯೆಶಾಯ 26:19 ದಾನಿಯೇಲನು 12:2-3; ಮತ್ತಾಯ 25:31-46 ಮಾರ್ಕ 9:43-48; ಲೂಕ 16:19-31: 20:27-38; ಯೋಹಾನ 3:16-18: 5:25-29; 11:21-27; ಅ ಪೋ ಕೃ 17:3-31; ರೋಮಾಪುರದವರಿಗೆ 2:1-16; 14:7-12; 1 ಕೊರಿಂಥದವರಿಗೆ 15:12-58; 2 ಕೊರಿಂಥದವರಿಗೆ 5:10; 2 ಥೆಸಲೋನಿಕದವರಿಗೆ 1:5-10; ಪ್ರಕಟಣೆ 20:11-15; 22:1-15





# ನಮ್ಮ ಧರ್ಮ ತತ್ವ

## ನಾವು ಕ್ರೈಸ್ತಿಯ ಸಭೆಯ ಭಾಗವಾಗಿದ್ದೇವೆ.

"ಸಭೆ" ಎಂಬ ಪದವು ಸಾಮಾನ್ಯವಾಗಿ ಅರ್ಥಮಾಡಿಕೊಳ್ಳಲು ಕಷ್ಟವಾದ ಪದವಾಗಿದೆ. ಯಾಕೆಂದರೆ ಈ ಪದವನ್ನು ನಾವು ಅನೇಕ ರೀತಿಯಲ್ಲಿ ಬಳಸುತ್ತೇವೆ, ಇದನ್ನು ಬಹಳ ಸ್ಪಷ್ಟವಾಗಿ ವಿವರಿಸಬೇಕಾದ ಅವಶ್ಯಕತೆಯಿದೆ. ಇದನ್ನು "ಧರ್ಮ ತತ್ವ" ಅರ್ಥವೆಂದರೆ " ಇದರ ಸಭೆಯ ಅಧ್ಯಯನ" ಎಂದು ಕರೆಯುತ್ತಾರೆ.

ಮೊದಲನೇಯದಾಗಿ, ನಜರೆನ್ ಸಭೆಯು ತನ್ನನ್ನು ಸತ್ಯವೇದ ಕರೆಯುವ "ದೇವರ ಮಕ್ಕಳು" ಎಂದು ಗುರುತಿಸಿಕೊಳ್ಳುತ್ತದೆ. ಇನ್ನೂ ವಿಶೇಷವಾಗಿ, ನಾವು "ಒಂದೇ, ಪರಿಶುದ್ದ, ಜಾಗತಿಕ ಮತ್ತು ಶಿಷ್ಯತ್ವದ ಸಭೆಯ ಭಾಗವಾಗಿದ್ದೇವೆ." ಈ ವಾಕ್ಯವು ಪುರಾತನ ನಂಬಿಕೆಯಿಂದ ಮತ್ತು ಪ್ರಪಂಚದಲ್ಲಿರುವ ಎಲ್ಲಾ ಕ್ರೈಸ್ತವರಿಂದ ಮತ್ತು ಚರಿತ್ರೆಯುದ್ದಕ್ಕೂ ಇದನ್ನು ಅಂಗಿಕರಿಸಿದ್ದಾರೆ. ಈ ವಾಕ್ಯದ ನಾಲ್ಕು ಪದಗಳು "ಸಭೆಯ" ಪಾಮುಖ್ಯವಾದ ವಿಚಾರಗಳನ್ನು ತಿಳಿಸುತ್ತವೆ.

ನಾವು "ಕ್ರಿಸ್ತನ ಸಭೆಯೊಳಗೆ"ದಿಕ್ಷಾಸ್ನಾನ ಹೊಂದಿದ್ದೇವೆ ಹೊರೆತು ನಜರೆನ್ ಸಭೆಯೊಳಗೆ ಅಲ್ಲ. ನಮ್ಮ ದಿಕ್ಷಾಸ್ನಾನವು ವ್ಯಯಕ್ತಿಕ ಹಾಗೂ ಸಾಮಾಜಿಕ ಕ್ರಿಯೆ ಯಾಗಿದ್ದು ದೇವರ ಕೃಪೆಯ ಕಾರ್ಯವನ್ನು ಕಾಣುವಂತಹದ್ದಾಗಿದೆ. ಆತನ ತಡೆಗಟ್ಟುವ ಕೃಪೆ- ಅಂದರೆ ನಾವು ದೇವರನ್ನು ಅರಿಯುವ ಮುನ್ನವೇ ಆತನು ನಮ್ಮ ಕುರಿತಾಗಿ ಕೆಲಸ ಮಾಡುತ್ತಿದ್ದನು ಮತ್ತು ಆತನ ರಕ್ಷಿಸುವ ಕೃಪೆಯು ಕಾರ್ಯಗತವಾಗಿತ್ತು ಮತ್ತು ನಮ್ಮ ಬಗ್ಗೆ ಆತನು ತಿಳಿದುಕೊಂಡಿದ್ದನು

ನಮ್ಮ ಭೋಧಕರು "ದೇವರ ಸಭೆಯಲ್ಲಿ" ಅಭಿಷೇಕ ಹೊಂದುತ್ತಾರೆ, ಹರೆತು ನಜರೆನ್ ಸಭೆಯಲ್ಲಿ ಅಲ್ಲ. ಇದರ ಫಲಿತವಾಗಿ ನಮ್ಮ ನಜರೆನ್ ಸಭೆಗಳು "ಜಾಗತಿಕ ಸಭೆಯ" ಸದೃಢವಾದ ಭಾವ ಪ್ರಕಟವಾಗಿದೆ, ಇದನ್ನು ನಾವು ಚರಿತ್ರೆಯುದ್ದಕ್ಕೂ ಮತ್ತು ಎಲ್ಲಾ ವಿಶ್ವಾಸಿಗಳನ್ನು ಸೇರಿಸಿ ವಿವರಿಸಲು ಉಪಯೋಗಿಸುತ್ತೇವೆ.

ನಾವು ದೇವರ ಪರಿಶುದ್ದತೆಯ ಆತ್ಮಿಕ ಕಾರ್ಯಗಳನ್ನು ಮತ್ತು ಸಭೆಯ ಪವಿತ್ರತೆಯನ್ನು ದೃಢಪಡಿಸುತ್ತೇವೆ. ದೇವರು ಸಭೆಯನ್ನು ತನ್ನ ದೈವಿಕ ಕೃಪೆಯ ಸಾಧನವಾಗಿ ಅರಿಸಿದನು ಮತ್ತು ಆತನು ಅದನ್ನು ತನ್ನ ಪರಿಶುದ್ದಾತ್ಮನಲ್ಲಿ ಇರಲು ಕರೆದನು. ಪರಿಶುದ್ದಾತ್ಮನು ಸಭೆಯ ಜೀವನದ ಮುಖ್ಯ ಶಕ್ಧಿಯಾಗಿದ್ದಾನೆ, ಮತ್ತು ಲೋಕದಲ್ಲಿ ಅದನ್ನು ಕ್ರಿಸ್ತನ ಸಜೀವ ಶರೀರವಾಗಿ ಮಾಡುತ್ತದೆ. ಕ್ರೈಸ್ತಿಯ ಸಭೆಯು ದೇವರನ್ನು ಆರಾಧಿಸುವುದು ಮಾನವನ ಜೀವನದ ಬಹುಮುಖ್ಯ ಭಾಗವೆಂದು ಸಾಕ್ಷಿ ನೀಡುತ್ತದೆ. ಅದ್ದರಿಂದ ಈದ್ ಪಾಪಿಗಳನ್ನು ಮಾನಸಾಂತರ ಮತ್ತು ಅವರ ಜೀವನಗಳನ್ನು ಬದಲಾಯಿಸಲು ಸಹಾಯ ಮಾಡುತ್ತದೆ. ಇದು ವಿಶ್ವಾಸಿಗಳಲ್ಲಿ ಪರಿಶುದ್ದ ಜೀವನವನ್ನು ಸಮೃದ್ಧಿಯಾದ ಸಹವಾಸ ಜೀವನದಲ್ಲಿ ಮತ್ತು ವಿಶ್ವಾಸಿಗಳನ್ನು ಪರಿಶುದ್ದ ಜೀವನ

ಅಂದರೆ ಕ್ರಿಸ್ತನ ಹಾಗಿರುವ ಜೀವನದಲ್ಲಿ ಬೆಳೆಸುತ್ತದೆ. ತನ್ನ ಪರಿಶುದ್ಧತೆ ಹಾಗೂ ನಂಬಿಕೆಯಲ್ಲಿ ಸಭೆಯು ಲೋಕದಲ್ಲಿ ದೇವರ ರಾಜ್ಯವನ್ನು ತೋರಿಸುತ್ತದೆ. ಸಭೆಯು ತನ್ನ ನಿಜವಾದ ಭಾವದಲ್ಲಿ ತಾನು ಸಾರುವ ಸಂದೇಶದ ಪ್ರತಿಕವಾಗಿರುತ್ತದೆ.

## ನಾವು ದೇವರ ಧ್ಯೆಯದ ಜೊತೆ ಸೇರಿದ್ದೇವೆ.

ದೇವರು ಪ್ರಪಂಚವನ್ನು ವಿಶಾಲವಾದ ರೀತಿಯಲ್ಲಿ ನಿರ್ಮಿಸಿದನು. ಸ್ವಭಾವ ಹಾಗೂ ಚರಿತ್ರೆಯುದ್ದಕ್ಕೂ ಆತನು ದೈವಿಕ ಸ್ವರೂಪವನ್ನು ಹೊರಲು ಜನರನ್ನು ಸೃಷ್ಟಿಸಿದನು ಇದರಿಂದ ದೈವಿಕ ಪ್ರೀತಿಯು ಮುನ್ನಡೆಯಲು ಸಹಾಯವಾಗುತ್ತದೆ. ಲೋಕದಲ್ಲಿ ಆತನ ಧ್ಯೆಯವು ಮೊದಲು ಬಂದಿತು, ಮತ್ತು ನಾವು ಆತನಿಂದ ಧ್ಯೆಯವನ್ನು ಹೊಂದುತ್ತೇವೆ. ಪಾಪವು ಆತನ ಸೃಷ್ಟಿಯನ್ನು ನಾಶಪದಿಸಿದಾಗ, ವಿಮೊಚಿಸುವ ದೇವರ ಧ್ಯೆಯವು ಬಹಿರಂಗವಾಯಿತು. ಇದು "ದೇವರ ಸರ್ವ ಸೃಷ್ಟಿಯನ್ನು ದೇವರ ಸೃಷ್ಟಿಯ ಉದ್ದೇಶಕ್ಕಾಗಿ ತಿರುಗಿ ಕಾಪಾಡುವುದಾಗಿದೆ. ಮಾನವ ಕುಲದ ಪುನರುದ್ಧಾರವು ದೇವರ ಧ್ಯೆಯದ ಮೂಲ ಉದ್ದೇಶವಾಗಿದೆ.

ಜಾನ್ ವೆಸ್ಲಿಯವರು ಈ ಪುನರುದ್ಧಾರವನ್ನು ಪರಿಶುದ್ಧತೆ ಎಂದು ಕರೆಯುತ್ತಾರೆ, ಇದು ದೇವರ ಸ್ವರೂಪಕ್ಕೆ ನಮ್ಮ ಆತ್ಮಗಳನ್ನು ನವಿಕರಿಸುವುದಾಗಿದೆ.ಅದನ್ನು ಅವರು "ನೀತಿವಂತಿಕೆ ಹಾಗೂ ನಿಜವಾದ ಪರಿಶುದ್ಧತೆ" ಎಂದು ಕರೆಯುತ್ತಾರೆ. ದೇವರ ಧ್ಯೆಯವು ಅಬ್ರಹಾಮನ ಕರೆಯುವಿಕೆಯಲ್ಲಿ ವ್ಯಕ್ತವಾಯಿತು, ಅಬ್ರಹಾಮನನ್ನು ಅಶೀರ್ವದಿಸುವ ಮೂಲಕ ಆತನ ಸಂತಾನವು "ಎಲ್ಲಾ ದೇಶಗಳಿಗೂ ಅಶೀರ್ವಾದವಾಗಿ" ಇರಲು ಕರೆದನು (ಆದಿಕಾಂಡ 12:1-3) ಇದು ಇಬ್ರಿಯರ ಚರಿತ್ರೆಯಲ್ಲಿ ಅವರು ದೇವರ ಹೆಸರನ್ನು ಲೋಕದ ಎಲ್ಲಾ ಕಡೆಗಳಲ್ಲೂ ಸಾರುವುದರ ಮೂಲಕ ನೆರವೇರಿತು.

ಕ್ರೈಸ್ತವರು ದೇವರನ್ನು ಪರಿಶುದ್ಧ ತ್ರಿಯೇಕ-ಮೂವರು ವ್ಯಕ್ತಿಗಳು ಒಂದಾಗಿ-ಅವರಲ್ಲಿ ಆತನು ತನ್ನನ್ನು ತಾನು ಯೇಸು ಕ್ರಿಸ್ತನಲ್ಲಿ ಸಂಪೂರ್ಣವಾಗಿ ಬಹಿರಂಗ ಪಡಿಸಿದನು. ಪರಿಶುದ್ದಾತ್ಮನು ನಮ್ಮನ್ನು ದೇವರ ಕೆಲಸದಲ್ಲಿ ಭಾಗಿಯಾಗಲು ಆಹ್ವಾನಿಸುತ್ತಾನೆ, ಆದನ್ನು ಮಾಡಲು ಆತನು ನಮ್ಮನ್ನು ಬಲಪಡಿಸುತ್ತಾನೆ. ಸಭೆಯು ದೇವರು ಮೊದಲು ಅಬ್ರಹಾಮನ ಜೊತೆ ಮಾಡಿಕೊಂಡ ಒಡಂಬಡಿಕೆಯಲ್ಲಿ ಜೊತೆಯಾಗುತ್ತದೆ. ಇದರ ಪರಿಶುದ್ಧ ಜೀವನದ ಭಾಗವಾಗಿ ಸಭೆಯು ಲೋಕದ ಎಲ್ಲಾ ಜನಾಂಗಗಳಿಗೂ ಅಶೀರ್ವಾದವಾಗಿರುತ್ತದೆ.

ನಾವು ದೇವರ ಕೆಲಸದಲ್ಲಿ ಬೇರೆ ಕ್ರೈಸ್ತವರ ಜೊತೆ ಸೇರುತ್ತೇವೆ, ಆದರೆ ನಾವು ಅಂದರೆ ಅಂತರರಾಷ್ಟ್ರೀಯ ಸಂಸ್ಥೆಯಾಗಿ ನಮ್ಮ ಜೀವನದ ದಾರಿಗೆ ವಿಶೇಷತೆಯನ್ನು ನಿಡುವ ನಮ್ಮ ದರ್ಶನವನ್ನು ಭದ್ರವಾಗಿ ಹಿಡಿದುಕೊಳ್ಳುತ್ತೇವೆ. ರಾಷ್ಟ್ರೀಯ ಗಡಿಭಾಗಗಳು, ಅವು ಇದ್ದರೂ ಕೂಡ ಸಭೆಯ ಎಲ್ಲೆಯನ್ನು ಅವು ನಿರ್ಬಂಧಿಸುವುದಿಲ್ಲ ಯಾಕೆಂದರೆ ಕ್ರಿಸ್ತನು ಎಲ್ಲಾ ಜನಾಂಗ ಹಾಗೂ ಕುಲಗಳಿಗೆ ಮುಕ್ತವಾಗಿದ್ದಾನೆ.

## ಲೋಕದಲ್ಲಿ ಕ್ರಿಸ್ತನ ಹಾಗೆ ಸೇವೆಮಾಡುವುದು

ದೇವರ ಪ್ರೀತಿಯನ್ನು ಸಾಕ್ಷಿಯಾಗಿ ನಿಡುವ ಸತ್ಯವೇದದ ಆದೇಶವು ಕ್ರೈಸ್ತವ ಸೇವೆಯ ಮೂಲವಾಗಿದೆ-ಈ ಪ್ರೀತಿಯು ಕ್ರಿಸ್ತನ ವ್ಯಕ್ತಿತ್ವದಲ್ಲಿ ಸ್ಪಷ್ಟವಾಗಿ ಕಾಣಬಹುದು. ವಿಶ್ವಸಿಗಳು ಈ ಸೇವೆಯನ್ನು ಅವರು ದಿಕ್ಷಾಸ್ನಾನ ಹೊಂದುವಾಗ ಇದನ್ನು ದೃಢಪಡಿಸುತ್ತಾರೆ. ಅಲ್ಲಿ ಅವರು ಕ್ರಿಸ್ತನ ಶಿಷ್ಯರಾಗಿ ಇರಲು ಬಹಿರಂಗವಾಗಿ ಪ್ರಕಟಿಸುತ್ತಾರೆ. ನಂಬಿಗಸ್ತ ಶಿಷ್ಯತ್ವವು ಅವರಲ್ಲಿರುವ ದೇವರ ಕೃಪೆಯ ಬಹಿರಂಗ ತೋರ್ಪಡಿಕೆಯಾಗಿದೆ. ಅದೇ ರೀತಿಯಲ್ಲಿ, ಇದು "ದೇವರು ಎಷ್ಟೋ ಪ್ರೀತಿಯನ್ನು ಇಟ್ಟು" (ಯೋಹಾನ 3:16) ಎಂಬ ಲೋಕದಲ್ಲಿ ಕಾರ್ಯಗತವಾಗಿರುವ ದೇವರ ಕೃಪೆಯ ಸೂಚನೆಯಾಗಿದೆ. ಕ್ರಿಸ್ತನ ದೇಹದ ಸದಸ್ಯರಾಗಿ ಎಲ್ಲಾ ವಿಶ್ವಾಸಿಗಳು ಸೇವೆಗಾಗಿ ಬಳಪಡಿಸಲ್ಪಟ್ಟಿದ್ದಾರೆ. ಕೆಲವರು ಸಭೆಯಲ್ಲಿ ವಿಶೇಷವಾದ ನಾಯಕತ್ವ ನಡೆಸಲು ಕರೆಯಲ್ಪಟ್ಟಿದ್ದಾರೆ, ಮತ್ತು ಸಭೆಯು ಅವರನ್ನು ಅಪೋಸ್ತಲರ ಶಿಷ್ಯತ್ವಕ್ಕೆ ಅಭಿಷೆಕಿಸುತ್ತದೆ. ಇದನ್ನು ಸಭೆಯು ಅವರನ್ನು ಯಾರು ಅಪೋಸ್ತಲರು ಆರಂಭಿಸಿದ ಕೆಲಸವನ್ನು ಮುಂದುವರಿಸುವ ನಾಯಕರೆಂದು ಗುರುತಿಸುತ್ತದೆ. ಅವರ ಕರೆಯುವಿಕೆಯು ದೇವರೊಂದಿಗೆ ಅವರಿಗಿರುವ ವ್ಯಯಕ್ತಿಕ ಅನುಭವದಲ್ಲಿ ಬೇರೂರಿರುತ್ತದೆ.

ಜೊತೆಯಾಗಿ ಭೋಧಕರು (ಅಭಿಷೇಕ ಹೊಂದಿರುವ ಭೋಧಕರು) ಮಾತು ಸಭಿಕರು (ಎಲ್ಲಾ ವಿಶ್ವಾಸಿಗಳು)ತಲಾಂತುಗಳ ಇರುವಿಕೆಯನ್ನು ಗುರುತಿಸಿ ಮತ್ತು ದೃಢಪಡಿಸುತ್ತಾರೆ ಮತ್ತು ಕ್ರಿಸ್ತನ ದೇಹದ ಸದಸ್ಯರಲ್ಲಿ ನೆರವೇರಿಸುತ್ತಾರೆ. ಇದು ಮೊದಲು ಸ್ಥಳಿಯ ಸಭೆಯಲ್ಲಿ ನಡೆಯುತ್ತದೆ. ನಂತರ ತಾಲೂಕು ಸಭೆಯಲ್ಲಿ- ಎಲ್ಲಾ ಸಭೆಗಳೂ ಒಂದಾಗಿ ಸೇರಿ ಸಂಸ್ಥೆಯ ಕೆಲಸವನ್ನು ಒಬ್ಬರಿಗೊಬ್ಬರೂ ಸಹಕರಿಸಿಕೊಂಡು ಮುನ್ನಡೆಸುತ್ತಾರೆ. ಅವರು ಯಾರು ಅಭಿಷೇಕ ಹೊಂದುವವರು ಅವರನ್ನು ಆರಿಸುತ್ತಾರೆ. ಸಭಾಸೇವಕರು ಸಭೆಯ ಇತರೆ ಸೇವೆಗಳಾದ ಅಂದರೆ ಭೋಧನೆ ಹಾಗೂ ಸಭೆಯ ಪರಿಶುದ್ಧ ಕಾರ್ಯಗಳನ್ನು ಹೊರೆತು ಪಡಿಸಿ ಇತರೆ ಕಾರ್ಯಗಳನ್ನು ಮಾಡಲು ಕರೆಯಲ್ಪಟ್ಟಿದ್ದಾರೆ.ಸಭೆಯ ಹಿರಿಯರು ಸುವಾರ್ತೆಯನ್ನು ಭೋಧಿಸುವುದರ ಮೂಲಕ ಕ್ರಿಸ್ತನ ದೇಹವನ್ನು ಬಲಪಡಿಸುತ್ತಾರೆ, ಸಭೆಯ ಪವಿತ್ರ ಕಾರ್ಯಗಳಲ್ಲಿ ಸಹಾಯ ಮಾಡುತ್ತಾ ಮತ್ತು ಸಭೆಯ ಜೀವನಕ್ಕೆ ನಿಯಮವನ್ನು ನೀಡುತ್ತಾರೆ.

ಮೇಲ್ವಿಚಾರಕರು ತಾಲೂಕು ಅಥವಾ ಸಾಮಾನ್ಯ ಕಚೇರಿಯಲ್ಲಿ ಭೋಧಕರು ಹಾಗು ಸಭಿಕರ ಕೂಟಗಳಲ್ಲಿ ಆಯ್ಕೆಯಾಗುತ್ತಾರೆ. ತಾಲೂಕು ಮೇಲ್ವಿಚಾರಕರು ಅವರ ವ್ಯಯಕ್ತಿಕ ಹಾಗೂ ಭೋಧಕ ಮತ್ತು ಆತ್ಮಿಯ ನಾಯಕತ್ವವನ್ನು ಸಭೆಗಳು, ಸದಸ್ಯರು ಮತ್ತು ಭೋಧಕರನ್ನು ನಿರ್ಧಿಷ್ಟವಾದ ಪರದೇಶದಲ್ಲಿ ನಡೆಸುತ್ತಾರೆ. ಸಾಮಾನ್ಯ ಮೇಲ್ವಿಚಾರಕರು ತಮ್ಮ ಅಪೋಸ್ತಲರ ಹಾಗೂ ಭೋಧಕರ ಅನುಭವವನ್ನು ಇಡೀ ಸಂಸ್ಥೆಯ ಕಡೆಗೆ ಸಭೆಯ ಐಕ್ಯತೆಯನ್ನು ಎಲ್ಲಾ ಸಿದ್ದಾಂತಗಳನ್ನು ಮತ್ತು ಪರಿಶುದ್ದತೆಯನ್ನು ಕಾಪಾಡುತ್ತಾರೆ. ಅವರು ಕ್ರಿಸ್ತನ ಜೀವನವನ್ನು ಮುನ್ನಡೆಸುತ್ತಾ ಮತ್ತು ಇಡೀ ಸಭೆಯು ತನ್ನಾದಾಗಿ ಸ್ವೀಕರಿಸುವ ದರ್ಶನವನ್ನು ಒದಗಿಸುತ್ತಾರೆ.

ಅವರ ಪ್ರಯಾಣದ ದಿಕ್ಕು ಅಂತರರಾಷ್ಟ್ರೀಯ ದೃಷ್ಟಿಯಾಗಿರುತ್ತದೆ. ಸಭೆಯ ವಿವಿಧ ಭಾಗಗಳಿಗೆ ಬೇಕಾದ ಸಂಪನ್ಮೂಲಗಳನ್ನು ಕೂಡಿಸುವುದು ಮತ್ತು ಅದಕ್ಕೆ ಬೇಕಾದ ದರ್ಶನವನ್ನು ಒದಗಿಸುವ ಜವಾಬ್ದಾರಿ ಅವರ ಮೇಲೆ ಬೀಳುತ್ತದೆ. ಇದಲ್ಲದೆ ಪ್ರಪಂಚದ ಸೇವೆಯ ಉದ್ದೇಶಕ್ಕಾಗಿ ಸಂಪನ್ಮೂಲಗಳನ್ನು ಅವರು ಸಭೆಯ ಸೇವೆ ಹಾಗು ಸಂದೇಶವನ್ನು ಸಾರಲು ವಿಭಾಗಿಸುವ ಜವಬ್ದಾರಿಯನ್ನು ಹೊಂದಿರುತ್ತಾರೆ. ಅಭಿಷೇಕ ಹೊಂದಿದ ಭೋಧಕರ ಮೂಲಕ ಬೇರೆ ಬೇರೆ ತಾಲೂಕು ಸಭೆಗಳಿಗೆ ಅಂದರೆ, ಇನ್ನೊಂದು ರೀತಿಯಲ್ಲಿ ಅವರು ಸಂಸ್ಥೆಯ ವಿಭಿನ್ನತೆಯನ್ನು ರಾಷ್ಟ್ರೀಯ, ಅರ್ಥಿಕ, ಜನಾಂಗ ಮತ್ತು ಭಾಷೆಯ ಏಕತೆಯಲ್ಲಿ ಕಾಪಾಡಿಕೊಂಡು ಹೋಗುತ್ತಾರೆ.



# ನಮ್ಮ ಆಡಳಿತ

ನಜರೆನ್ ಸಭಿಕರಾದ, ನಾವು ಜಾಗತಿಕ ಸಭೆಯ ಭಾವಪೂರ್ಣ ಪ್ರಕಟಣೆಯಾಗಿದ್ದೇವೆ ಎಂದು ಯಾವಾಗಲೂ ಗುರುತಿಸಿಕೊಂಡಿದ್ದೇವೆ. ಸತ್ಯವೇದವು ಸಭೆಯ ಆಡಳಿತಕ್ಕೆ ಯಾವುದೇ ರೀತಿಯ ವಿಶಿಷ್ಟ ಸೂತ್ರಗಳನ್ನು ನೀಡಿಲ್ಲ ಮತ್ತು ನಮ್ಮ ಆಡಳಿತವು ಸಾಮಾನ್ಯ ಹೊಂದಾಣಿಕೆ ಹಾಗೂ ಸಹಕಾರದಲ್ಲಿ, ಸತ್ಯವೇದವನ್ನು ಮೀರಿ ನಡೆಯದ ಎಲ್ಲಾ ವಿಚಾರಗಳಲ್ಲಿ ಸರಿಹೊಂದುವ ರೀತಿಯಲ್ಲಿ ರೂಪಿಸಲ್ಪಟ್ಟಿದೆ ಎಂದು ನಾವು ನಂಬುತ್ತೇವೆ. ಇದರಿಂದ, ನಮ್ಮ ಕೆಲಸ ಮತ್ತು ಉದ್ದೇಶಗಳು ನಮ್ಮ ವ್ಯವಸ್ಥೆಯನ್ನು ರೂಪಿಸುತ್ತವೆ. (ಹೆಚ್ಚಿನ ವಿವರಗಳಿಗೆ ನಜರೆನ್ ಸಭೆಯ ಕೈ ಪಿಡಿಯ "ಚಾರಿತ್ರಾತ್ಮಕ ಪ್ರಕಟಣೆ" ಅಧ್ಯಾಯವನ್ನು ನೋಡಿರಿ).

ನಜರೆನ್ ಸಭೆಯು ("ಮೆಥೋಡಿಸ್ಟ್ ಎಪಿಸ್ಕೋಪಲ್ ವಿಧಾನ" ಎಂದು ಕರೆಯುವ) ಆಯೋಜಿತವಾದ ಸಭೆಯ ಪ್ರಜಾಪ್ರಭುತ್ವದ ದರ್ಶನವನ್ನು ಅಂಗಿಕರಿಸುತ್ತದೆ. ನಾವು ಸಭಿಕರ ಹಾಗೂ ಭೋಧಕರ ಸ್ವರವನ್ನು ಭಿಷಪ್ ರ ಅಧಿಕಾರದ ಮಿತಿಯನ್ನು ನಿರ್ಧರಿಸುವುದರಲ್ಲಿ, ಅಂದರೆ ಮೇಲ್ವಿಚಾರಕರನ್ನು ಚುನಾಯಿಸುವುದಕ್ಕೆ ಬದಲಾಗಿ ಅಯ್ಕೆಮಾಡುತ್ತೇವೆ.

ನಜರೆನ್ ಸಭೆಯ ಮೂಲಭೂತವಾದ ಆಡಳಿತ ವಿಧಾನಗಳು.

- ನಮ್ಮಲ್ಲಿ ಮೂರು ಹಂತದ ಆಡಳಿತವಿದೆ.
- ಸಾಮಾನ್ಯ ಸಭೆಯು ಸಾಮಾನ್ಯ ಮೇಲ್ವಿಚಾರಕರನ್ನು ಸಂಸ್ಥೆಯ ಸಾಮಾನ್ಯ ಸೇವೆಗಳನ್ನು ನಡೆಸಲು ಮತ್ತ ಇಡೀ ಸಭೆಯ ವ್ಯಾಪ್ತಿಯಲ್ಲಿ ಅಡಿಯಲ್ಲಿ ಆಧಿಕಾರ ನಡೆಸಲು ಆಯ್ಕೆಮಾಡುತ್ತದೆ. ಅವರು ಒಂದು ಸಾಮಾನ್ಯ ಸಭೆಯಿಂದ ಮುಂದಿನ ಸಾಮಾನ್ಯ ಸಭೆಯವರೆಗೂ ಕೆಲಸ ಮಾಡುತ್ತಾರೆ ಮತ್ತು ಅವರು ಪ್ರತಿ ಸಭೆಯಲ್ಲೂ ಪುನಾರಾ ಯ್ಕೆಯಾಗಬೇಕಾಗುತ್ತದೆ. ಪ್ರತಿ ಸಾಮಾನ್ಯ ಮೇಲ್ವಿಚಾರಕರಿಗೂ ತಾಲೂಕುಗಳ ಪಟ್ಟಿಯನ್ನು ನೀಡಲಾಗುತ್ತದೆ ಮತ್ತು ಅವರು ತಾಲೂಕು ಸಭೆಗಳನ್ನು ನಡೆಸಲು ಮತ್ತು ತಮ್ಮ ವ್ಯಾಪ್ತಿಯ ಅಡಿಯಲ್ಲಿ ಬರುವ ಹೊಸ ಭೋಧಕರನ್ನು ಅಭಿಷೇಕಿಸಲು ಜವಬ್ದಾರಿಯನ್ನು ಹೊಂದಿರುತ್ತಾರೆ. ಸಾಮಾನ್ಯ ಮೇಲ್ವಿಚಾರಕರ ಸಂಖ್ಯೆಯು ಸಮಯದ ಜೊತೆಯಲ್ಲಿ ಬದಲಾಗಿದೆ ಆದರೆ 1960 ರಿಂದ 6 ಕ್ಕೆ ಸೀಮಿತವಾಗಿದೆ. ಒಟ್ಟಾಗಿ ಅವರೆಲ್ಲರೂ ಸೇರಿ ಸಾಮಾನ್ಯ ಮೇಲ್ವಿಚಾರಕರ ಮಂಡಳಿಯಾಗಿ ಏರ್ಪಟ್ಟು ವರ್ಷಕ್ಕೆ ಅನೇಕ ಬಾರಿ ಭೇಟಿಯಾಗುತ್ತಾರೆ.
- ಸಾಮಾನ್ಯ ಸಭೆಯು ಸಮಾನ ಸಂಖ್ಯಾಬಲದ ಸಭಿಕರು ಮತ್ತು ಭೋಧಕರನ್ನು ಹೊಂದಿರುವ ಒಂದು ಸಾಮಾನ್ಯ ಮಂಡಳಿಯನ್ನು ಆರಿಸುತ್ತದೆ. ಇದು ವಾರ್ಷಿಕವಾಗಿ ಸೇರುತ್ತದೆ ಮತ್ತು ಸಭೆಯ ಸಾಮಾನ್ಯ ಅಧಿಕಾರಿಗಳನ್ನು ಮತ್ತು ವಿಭಾಗ ನಿರ್ದೇಶಕರನ್ನು ಆಯ್ಕೆಮಾಡುತ್ತದೆ. ಇದು ಆಡಳಿತ ವಿಧಾನಗಳನ್ನು, ಹಣಕಾಸು ಮತ್ತು ಸಭೆಯ ಸಾಮಾನ್ಯ ಸೇವೆಗಳ ಪ್ರಗತಿಯನ್ನು ಪರಿಶೀಲಿಸುತ್ತದೆ.
- ಒಂದು ಪ್ರದೇಶದಲ್ಲಿರುವ ಸಭೆಗಳು ಗುಂಪಾಗಿ ಸೇರಿ ತಾಲೂಕುಗಳಾಗಿ ಏರ್ಪಟ್ಟು ಮತ್ತು ತಾಲೂಕು ಮೇಲ್ವಿಚಾರಕರಿಂದ ನಡೆಸಲ್ಪಡುತ್ತದೆ. ತಾಲೂಕು ಸಭೆಯು ತಾಲೂಕು ಸಭೆಯು ತನ್ನ ಸುವಾರ್ತೆಯ ಉದ್ದೇಶಗಳಿಗಾಗಿ ಮತ್ತು ವಾರ್ಷಿಕವಾಗಿ ತಾಲೂಕು ಸಭೆಯಾಗಿ ಸೇರುತ್ತದೆ. ತಾಲೂಕು ಸಭೆಯು ತಾಲೂಕು ಮೇಲ್ವಿಚಾರಕರನ್ನು ಆಯ್ಕೆಮಾಡುತ್ತದೆ, ಅವರು ಸಭೆಗಳನ್ನು ಮತ್ತು ಭೋಧಕರನ್ನು ಬಲಪಡಿಸುವುದು, ಹೊಸ ಸಭೆಗಳನ್ನು ಸ್ಥಾಪಿಸುವುದು ಮತ್ತು ತಾಲೂಕಿನ ಆರೋಗ್ಯವನ್ನು ಕಾಪಾಡುವುದನ್ನು ನೋಡಿಕೊಳ್ಳುತ್ತಾರೆ.
- ಸಭೆಗಳು ತಮ್ಮ ಸ್ವಂತ ಭೋಧಕರನ್ನು ತಾಲೂಕು ಮೇಲ್ವಿಚಾರಕರ ಸಲಹೆಯ ಮೇರೆಗೆ ಮತ್ತು ಅವರ ಅಂಗಿಕಾರದಲ್ಲಿ ಸ್ವಂತ ಭೋಧಕರನ್ನು ಕರೆಸಿಕೊಳ್ಳುತ್ತಾರೆ. ಅವರು ಅವರ ಸ್ವಂತವಾಗಿ ಹಣಕಾಸಿನ ಮತ್ತು ವ್ಯವ್ಯಹಾರಿಕ ವಿಚಾರಗಳನ್ನು ನೋಡಿಕೊಳ್ಳುತ್ತಾರೆ.
- ನಜರೆನ್ ತಾಲೂಕುಗಳು ಪ್ರಪಂಚದ ವಿಭಾಗಗಳಾಗಿ ವಿಂಗಡಿಸಲ್ಪಟ್ಟಿವೆ.ಪ್ರಚಲಿತವಾಗಿ ಆರು ವಿಭಾಗಗಳಿವೆ: ಆಫ್ರಿಕಾ, ಏಷ್ಯಾ-ಪೆಸಿಫಿಕ್, ಯುರೇಶಿಯ, ಮೆಸೋಅಮೇರಿಕ, ದಕ್ಷಿಣ ಅಮೇರಿಕಾ, ಮತ್ತು ಯು ಎಸ್ ಎ ಮತ್ತು ಕೆನಡಾ). ಪ್ರಪಂಚದ ಭಾಗಗಳು ಸಭೆಯ ಕಾರ್ಯವಿಧಾನಗಳನ್ನು ನೆರವೇರಿಸಲು ರೂಪಿಸಲ್ಪಟ್ಟಿವೆ ಅವು ಆಡಳಿತ ಮಂಡಳಿಯ ಭಾಗವಾಗಿರುವುದಿಲ್ಲ
- ಸಭೆಯ ಕಟ್ಟಡಗಳು ಮತ್ತು ಭೋಧಕರ ನಿವಾಸಗಳು ತಾಲೂಕಿನ ಆಸ್ಥಿಯಾಗಿರುತ್ತದೆ, ಆದರೆ ಅವು ಸಭೆಯ ಟ್ರಸ್ಟ್ ನ ಅಧೀನದಲ್ಲಿರುತ್ತವೆ.
- ಸ್ತ್ರೀ ಮತ್ತು ಪುರುಷರು ಸಭೆಯ ಎಲ್ಲಾ ವಿಭಾಗಗಳಲ್ಲೂ ಸಭಿಕರಾಗಿ ಮತ್ತು ಭೋಧಕರಾಗಿ ಸಮಾನವಾಗಿ ಸೇವೆ ಮಾಡಬಹುದು.
- ನಮ್ಮ ಮುಖ್ಯವಾದ ದಾಖಲೆಗಳನ್ನು, ಆಡಳಿತ ವ್ಯವಸ್ಥೆಯನ್ನು, ಮತ್ತು ನಿಯಮಗಳನ್ನು ಒಟ್ಟಾಗಿ ಸೇರಿಸಿ ನಜರೆನ್ ಸಭೆಯ ಕೈ-ಪೀಡಿಯಲ್ಲಿ ದಾಖಲಿಸಲಾಗಿದೆ. ಸಭೆಯ ಕೈ-ಪೀಡಿಯಲ್ಲಿ ಬದಲಾವಣೆಗಳನ್ನು ಸಾಮಾನ್ಯ ಸಭೆಯಲ್ಲಿ ತರಲಾಗುತ್ತದೆ.

# ಸ್ಥಳೀಯ ಸಭೆ

ನಜರೆನ್ ಸಭೆಯು ಎಲ್ಲಾ ಜನರೂ ಮಾರ್ಪಡಿಸುವ ದೇವರ ಕೃಪೆಯನ್ನು ಪಾಪಗಳ ಕ್ಷಮಾಪಣೆಯಿಂದ ಮತ್ತು ಯೇಸು ಕ್ರಿಸ್ತನಲ್ಲಿ ಹೃದಯದ ಶುದ್ದಿಕರಣವನ್ನು ಪರಿಶುದ್ದಾತ್ಮನ ಶಕ್ತಿಯಿಂದ ಅನುಭವಿಸಬೇಕು ಎಂದು ಬಯಸುತ್ತದೆ.

ನಮ್ಮ ಮೂಲ ಧ್ಯೆಯವೆಂದರೆ "ಕ್ರಿಸ್ತನ ಮಾದರಿಯಲ್ಲಿ ಲೋಕದಲ್ಲಿ ಸಿದ್ದಪಡಿಸುವುದಾಗಿದೆ." ಇದರ ಪ್ರಕಾರ ಹೊಸ ವಿಶ್ವಾಸಿಗಳು ನಮ್ಮ ಸ್ಥಳೀಯ ಸಭೆಯ ಸಹವಾಸದ ಸದಸ್ಯರಾಗಿ ಅದರಲ್ಲಿ ಅವರು ಕ್ರಿಸ್ತನಿಗಾಗಿ ಸೇವೆಮಾಡಲು ಬಲಹೊಂದುತ್ತಾರೆ. ವಿಶ್ವಾಸಿ ಸಮುದಾಯದ ಅಂತಿಮ ಗುರಿಯೆಂದರೆ ಕ್ರಿಸ್ತನಲ್ಲಿ ಎಲ್ಲರನ್ನು ಪರಿಪೂರ್ಣರಾಗಿ ಕೊನೆಯ ದಿನದಲ್ಲಿ ಸಮರ್ಪಿಸುವುದಾಗಿದೆ (ಕೊಲೆಸ್ಸಿಯವರಿಗೆ 1:28).

ಸ್ಥಳೀಯ ಸಭೆಯು ಕಾಪಾಡುವ, ಪರಿಪೂರ್ಣಗೊಳಿಸುವ, ಭೋಧಿಸುವ, ಮತ್ತು ವಿಶ್ವಾಸಿಗಳನ್ನು ಆದೇಶಿಸುವ ಕಾರ್ಯಗಳು ನಡೆಯುವ ಸ್ಥಳವಾಗಿದೆ. ಸ್ಥಳೀಯ ಸಭೆ, ಕ್ರಿಸ್ತನ ದೇಹವಾಗಿ, ನಮ್ಮ ನಂಬಿಕೆಯ ಮತ್ತು ನಮ್ಮ ಧ್ಯೆಯದ ಪ್ರತಿನಿಧಿಯಾಗಿದೆ.

## ತಾಲೂಕು ಸಭೆ

ಆಡಳಿತಾತ್ಮಕವಾದ ಉದ್ದೇಶಗಳಿಗಾಗಿ ನಾವು ಸ್ಥಳೀಯ ಸಭೆಗಳನ್ನು ತಾಲೂಕುಗಳು ಮತ್ತು ಪ್ರಾಂತ್ಯಗಳಾಗಿ ವಿಂಗಡಿಸಿದ್ದೇವೆ.

ಒಂದು ತಾಲೂಕು ಸ್ಥಳೀಯ ಸಭೆಗಳ ಮೇಲೆ ಅಧಾರವಾಗಿರುವಂತೆ ವ್ಯವಸ್ಥೆ ಮಾಡಲಾಗಿದೆ. ಅವು ಪ್ರತಿಯೊಂದು ಸ್ಥಳೀಯ ಸಭೆಗಳ ಪರಸ್ಪರ ಸಹಾಯ, ಸಂಪನ್ಮೂಲಗಳ ಹಂಚಿಕೆ, ಮತ್ತು ಸಹಯೋಗದಲ್ಲಿ ಸಭೆಯ ಧ್ಯೆಯವನ್ನು ನೆರವೇರಿಸಬೇಕು.

ತಾಲೂಕು ಮೇಲ್ವಿಚಾರಕರು ತಾಲೂಕು ಸಲಹಾ ಮಂಡಳಿಯ ಜೊತೆ ಸೇರಿ ಆ ನಿರ್ಧಿಷ್ಟ ತಾಲೂಕಿನ ಮೆಲ್ವಿಚಾರಣೆಯನ್ನು ಗಮನಿಸುತ್ತಾರೆ.

## ಸಾಮಾನ್ಯ ಸಭೆ

ನಜರೆನ್ ಸಭೆಯ ಐಕ್ಯತೆಯು ಅದರ ಸಂಬಿಕೆಗಳು, ಆಡಳಿತ ವಿಧಾನಗಳು, ವಿವರಣೆಗಳು, ಮತ್ತ ನಜರೆನ್ ಸಭೆಯ ಕೈ-ಪೀಡಿಯಲ್ಲಿ ಸಿಗುವ ವಿಧಾನಗಳ ಮೇಲೆ ಆಧಾರವಾಗಿದೆ.

ಈ ಐಕ್ಯತೆಯ ತಿರುಳು ನಂಬಿಕೆಯ ಲೇಖನಗಳಲ್ಲಿ ಪ್ರಕಟಿಸಲಾಗಿದೆ. ಸಭೆಯ ಎಲ್ಲಾ ಪ್ರಾಂತ್ಯಗಳಲ್ಲಿ ಮತ್ತು ಭಾಷೆಗಳಲ್ಲಿ ಭಾಷಾಂತರ ಮಾಡಲು, ವಿಸ್ತಾರವಾಗಿ ಹಂಚಲು ಮತ್ತು ಈ ನಂಬಿಕೆಗಳನ್ನು ಭೋಧಿಸಲು ಪ್ರೋತ್ಸಾಹಿಸುತ್ತೇವೆ. ಇದು ಬಂಗಾರದ ಪ್ರಮಾಣವಾಗಿದ್ದು ಅದು ನಾವೆಲ್ಲರೂ ನಜರೆನ್ ಸಭಿಕರಾಗಿ ಇರುವ ಹಾಗೂ ಮಾಡುವ ಕೆಲಸವನ್ನು ಹಿಡಿದು ಪೋಣಿಸಿರುವ ದಾರವಾಗಿದೆ.

ಈ ಐಕ್ಯತೆಯ ಪ್ರತಿರೂಪವು ಸಾಮಾನ್ಯ ಸಭೆಯ ಮೂಲಕವಾಗಿ ಕಾಣುತ್ತದೆ, ಅದು "ಸಿದ್ಧಾಂತಗಳನ್ನು ರೂಪಿಸುವ, ನಿಯಮಗಳನ್ನು ಮಾಡುವ, ಮತ್ತು ನಜರೇನ್ ಸಭೆಯ ಆಯ್ಕೆಯ ಅಧಿಕಾರವನ್ನು ಹೊಂದಿರುವ" ಸಭೆಯಾಗಿದೆ. (ಕೈ-ಪೀಡಿ ೩೦೦).

ಎರಡನೇಯ ಪ್ರತಿರೂಪವು ಅಂತರರಾಷ್ಟ್ರೀಯ ಸಾಮಾನ್ಯ ಮಂಡಳಿ, ಇದು ಇಡೀ ಸಭೆಯನ್ನು ಪ್ರತಿನಿಧಿಸುತ್ತದೆ.

ಮೂರನೆಯ ಪ್ರತಿರೂಪವು ಸಾಮಾನ್ಯ ಮೇಲ್ವಿಚಾರಕರ ಮಂಡಳಿ, ಇದನ್ನು ಕೈ-ಪೀಡಿ ಎಂದು ಕರೆಯಬಹುದು ಇದು ಸಂಸ್ಕೃತಿಗೆ ಅನುಗುಣವಾಗಿ ಬರುವ ಬದಲಾವಣೆಗಳನ್ನು ಮತ್ತು ಜನರನ್ನು ಸೇವೆಗಾಗಿ ಅಭಿಷೇಕ ಮಾಡುತ್ತದೆ.

ನಜರೆನ್ ಸಭೆಯ ಆಡಳಿತ ವಿಧಾನವು ಪ್ರತಿನಿಧಿತ್ವದ ರೂಪದಲ್ಲಿದೆ, ಅಂಟ್ಟು ಇದರಿಂದ ಒಂದು ಕಡೆಯಲ್ಲಿ ಅತಿರೇಕವಾದ ಬಿಷಪ್ ರ ಅಧಿಕಾರವನ್ನು ತಡೆಯುತ್ತದೆ ಮತ್ತು ಮತ್ತೊಂದು ಕಡೆಯಲ್ಲಿ ಗುಂಪುಗಾರಿಕೆ ಹಾಗೂ ಸ್ವನಿಯಂತ್ರಣವನ್ನು ತಡೆಯುತ್ತದೆ.

ಸಭೆಯು ಹೆಚ್ಚಾಗಿ ಹೊಂದಾಣಿಕೆಯಾಗಿದೆ. ಅದು ಅಂತರಿಕವಾಗಿ ಸಂಪರ್ಕ ಹೊಂದಿದೆ. ನಮ್ಮನ್ನು ಯಾವುದೇ ಸಮಯದಲ್ಲೂ ಸುಲಭವಾಗಿ ಮುರಿಯಬಹುದಾದ ಒಂದು ತಂತಿಯಿಂದ ಕಟ್ಟುವುದಕ್ಕಿಂತ ಶಕ್ಥಿಶಾಲಿಯಾಗಿ ಬೆಸೆಯುತ್ತದೆ.

ನಮ್ಮ ಸಮಾನವಾದ ಬಂಧನದ ಮೂಲ ಯಾವುದು? ಅದು ಯೇಸು ಕ್ರಿಸ್ತನೇ ಆಗಿದ್ದಾನೆ.





# ಸಂಪರ್ಕ ಹೊಂದಿರುವ ಸಭೆ

ನಜರೆನ್ ಸಭೆಯು ಪರಿಶುದ್ಧತೆಯ ಮೇಲೆ ಕೆಂದ್ರೀಕರಿಸುವ ಜನರ ಮತ್ತು ಸಭೆಗಳ ಒಳ್ಳೆಯ-ವ್ಯವ್ಯಸ್ಥಿತ ಸಂಪರ್ಕ ಜಾಲವನ್ನು ಹೊಂದಿದೆ.

ಇದು ಸ್ವಯಂ ಅಧಿಕಾರಿಕ ಸಭೆಗಳ ಅಥವಾ ಸ್ವಯಂ-ಚಾಲಿತ ಸಭೆಗಳಿಂದ ಕೂಡಿದ ನಿಜವಾಗಿರದ, ಜೈವಿಕ ಸಂಬಂಧಗಳನ್ನು ಹೊಂದಿರುವ ಕೆಲವು ಸಭಿಕರನ್ನು ಹೊಂದಿರುವ ಸಂಸ್ಥೆಯಲ್ಲಾ ಅಥವಾ ಇದೊಂದು ಬರಿ ಸಂಸ್ಥೆ ಅಥವಾ ಮಂಡಳಿಯಲ್ಲಾ.

ಕ್ಷಮಾಪಣೆಯನ್ನು ಕೇಳದೆ ಸಂಪರ್ಕ ಹೊಂದಿರುವ ಸಭೆ

ಇದರಿಂದ ನಾವು ಸ್ವತಂತ್ರವಾಗಿ ಕೆಲಸ ಮಾಡುವ ಸಭೆಯಾಗಿ ತಾಲೂಕುಗಳಲ್ಲಿ ಆಯೋಜಿತವಾಗಿರುವ ಪರಸ್ಪರ ಹೊಂದಾಣಿಕೆಯಿಂದ ಸೇವೆಯನ್ನು ಮಾಡಲು ಉಪಯೋಗವಾಗುವಂತೆ "ಲೋಕದಲ್ಲಿ ಕ್ರಿಸ್ತನಮಾದರಿಯ ಶಿಷ್ಯರನ್ನು ತಯಾರು ಮಾಡಲು." ನೇಮಕವಾಗಿರುವ ಸಭೆಯಾಗಿದ್ದೇವೆ. ಒಬ್ಬರಿಗೊಬ್ಬರು ಜವಾಬ್ದಾರಿಯನ್ನು ಹೊಂದಿರುವುದು ಸೇವೆಯ ನಿಮಿತ್ತ ಮತ್ತು ನಾವೆಲ್ಲರೂ ಒಟ್ಟಾಗಿ ಅಂಗಿಕರಿಸುವ ಸಿದ್ಧಾಂತಗಳನ್ನು ಐಕ್ಯವಾಗಿರಿಸಲು.

ಸಂಪರ್ಕ ಹೊಂದಿರುವ ಸಭೆಯಾಗಿ ನಾವು

- ನಂಬಿಕೆಗಳನ್ನು ಹಂಚಿಕೊಳ್ಳುತ್ತೇವೆ.
- ಮೌಲ್ಯಗಳನ್ನು ಹಂಚಿಕೊಳ್ಳುತ್ತೇವೆ.
- ಸೇವೆಯನ್ನು ಹಂಚಿಕೊಳ್ಳುತ್ತೇವೆ.
- ಜವಬ್ದಾರಿಗಳನ್ನು ಹಂಚಿಕೊಳ್ಳುತ್ತೇವೆ.

ಹಂಚಿಕೊಂಡ ಜವಬ್ದಾರಿಗಳು ಹಣಕಾಸಿನ ವಿಚಾರಗಳಲ್ಲಿ ಸಹಕಾರವು ಕೂಡ ಸೇರಿದೆ. ಪ್ರತಿಯೊಂದು ಸಭೆಯೂ ಕೂಡ ಪ್ರಪಂಚ ಸುವಾರ್ತೆ ನಿಧಿಗೆ ಸೇವೆಯ ನಿಧಿಗೆ ಕಾಣಿಕೆಯನ್ನು ನೀಡುತ್ತಾರೆ ಮತ್ತು ಸೇವೆಗಾಗಿ ಇತರೆ ಕಾಣಿಕೆಗಳನ್ನು ನೀಡುತ್ತಾರೆ.

ಆರಂಭದಿಂದಲೂ ಕೂಡ ನಜರೆನ್ ರವರು ಜಾಗತಿಕ ಸೇವೆಯ ಕ್ರಿಸ್ತನ ಮಾದರಿಯ ಶಿಷ್ಯರನ್ನು ಲೋಕದಲ್ಲಿ ತಯಾರು ಮಾಡುತ್ತಿದೆ. ಕ್ರಿಸ್ತನಿಗಾಗಿ ತಲುಪಿರುವ ಪ್ರಾಂತ್ಯಗಳು ಹೆಚ್ಚಾಗಿವೆ ಮತ್ತು ಬೆಳೆಯುತ್ತಿವೆ. ನೀವು ಪ್ರಾರ್ಥಿಸುತ್ತಾ ಮತ್ತು ಇನ್ನೂ ಹೆಚ್ಚಾಗಿ ನೀಡುವುದರಿಂದ, ನೀವು ಇನ್ನೂ ಅನೇಕರ ಜೊತೆಗೂಡಿ ನೀವು ಒಂಟಿಯಾಗಿ ಮಾಡಲಾಗದ ಕೆಲಸಗಳನ್ನು ಮಾಡಬಹುದು. ನೀವು ನಿಮ್ಮ ಸ್ಥಳೀಯ ಸಭೆಗೆ ನೀಡುವ ಪ್ರತಿಯೊಂದು ಕಾಣಿಕೆಯು ಸೇವೆಯ ನಿಧಿಯೊಂದಿಗೆ ಸೇರಿ ಆ ಉದ್ದೇಶವನ್ನು ನೇರವೇರೀಸುತ್ತದೆ.

ನಜರೇನ್ ಸಭೆಯು ಸಮಾನ ಕೊಡುವಿಕೆಯಲ್ಲದೇ, ಸಮಾನವಾದ ತ್ಯಾಗದ ನಿಯಮವನ್ನು ಎತ್ತಿಹಿಡಿಯುತ್ತದೆ.ಇದು ಸತ್ಯವೇದದ ಸಿದ್ಧಾಂತ, ಮತ್ತು ಇದು ಸ್ಥಳೀಯ ಸಭೆಗಳ ಅರ್ಥಿಕ ಅಭಿವೃದ್ಧಿಯ ಹೊರತಾಗಿಯೂ ಜಾಗತಿಕ ಸಭೆಗೆ ಬಹಳಷ್ಟು ಅವಶ್ಯಕವಾಗಿದೆ

'ಸುವಾರ್ತ ಸೇವೆಯ ನಿಧಿ" ಎಂಬುದು ಸಂಸ್ಥೆಯ ಹಣಕಾಸಿನ ಹೂಡಿಕೆಯ ಯೋಜನೆ. ಕೆಲವೊಂದು ಸಮಯಗಳಲ್ಲಿ ನೀವು "ಸುವಾರ್ತೆ ಸೇವೆಯ ನಿಧಿ" ಎಂಬ ಪದವನ್ನು ಕೇಳಬಹುದು. ಇದು ಕೂಡ ಸುವಾರ್ತ ಸೇವೆಯ ನೀಧಿಗಿಂತ ಭಿನ್ನವಾದ ವಿಶಾಲವಾದ ಅರ್ಥದ ಪದ. ಇದು ಪ್ರಪಂಚದ ವಿವಿಧ ಪ್ರಾಂತ್ಯಗಳಲ್ಲಿ ವಿವಿಧ ರೀತಿಯ ಸೇವೆಗಾಗಿ ವೆಚ್ಚಮಾಡುವ ವಿಧಾನವಾಗಿದೆ. ಸಭೆಯ ಸೇವೆಯನ್ನು ಮತ್ತು ಧ್ಯೇಯವನ್ನು ಎತ್ತಿಹಿಡಿಯುವುದರಿಂದ ಜಾಗತಿಕ ಸೇವೆಯನ್ನು ಎಲ್ಲಾ ಪ್ರಾಂತ್ಯಗಳಲ್ಲಿ ಸೇವೆಯನ್ನು ಜೀವಂತ ಹಾಗೂ ಉತ್ತಮವಾಗಿರಿಸುವುದಾಗಿದೆ. ಅನೇಕರ ತ್ಯಾಗದ ಫಲವಾಗಿ ಸೇವೆಗಾಗಿ ಹೂಡಿಕೆ ಮಾಡುವುದು ಸಭೆಯ ಸೇವೆಗಳಲ್ಲಿ ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ.

ಪ್ರಪಂಚದೆಲ್ಲೆಡೆ ಕೊಡಲಾಗುವ ಮೊತ್ತವನ್ನು ನಾವು ನೋಡಿದಾಗ, ಸರಾಸರಿ ಶೇ 86.1 ರಷ್ಟು ನಿಮ್ಮ ಸ್ಥಳೀಯ ಸಭೆಯ ಸೇವೆಯ ಅಭಿವೃದ್ಧಿಗಾಗಿ ಉಪಯೋಗಿಸಲಾಗುತ್ತಾದೆ.ತಾಲೂಕು ಸೇವೆಗಳಿಗಾಗಿ ಹೂಡಿಕೆಯ ಸುಮಾರು ಶೇ 4.5 ರಷ್ಟು ಉಪಯೋಗಿಸಲಾಗುತ್ತದೆ. ನಿಮ್ಮ ನಜರೇನ್ ಕಾಲೇಜುಗಳು ಶಿಷ್ಯರನ್ನು ಓದಿಸಲು ಮತ್ತು ತರಬೇತಿ ನೀಡಲು ಹೂಡಿಕೆಯ ಸುಮಾರು 1.8 ರಷ್ಟು ಉಪಯೋಗಿಸಲಾಗುತ್ತದೆ. ಇದು ಶೇ 7.6 ರಷ್ಟು ಹಣವು ನಿಮ್ಮ ಸ್ಥಳೀಯ ಸಭೆಯಿಂದ ಪ್ರಪಂಚ ಸುವಾರ್ತೆ ಸೇವೆಯ ನಿಧಿಗೆ ಹೋಗುತ್ತದೆ ಇದರಿಂದ ಸೇವಕರು, ಜಾಗತಿಕ ಸೇವೆಗಳು ಮತ್ತು ವಿಶೇಷ ಕಾಣಿಕೆಗಳ ಅಮೋದಿತವಾದ ಸೇವೆಗಳನ್ನು ನಡೆಸಲು ಉಪಯೋಗಿಸುತ್ತಾರೆ.

ನೀವು ಕೊಡುವುದು ತರಬೇತಿ, ಶಿಷ್ಯತ್ವದ ತರಬೇತಿ, ಮತ್ತು ಶುಭ ಸಂದೇಶವನ್ನು ಮಕ್ಕಳಿಗೆ, ಯುವಕರಿಗೆ, ಮತ್ತು ಹಿರಿಯರಿಗೆ ಹಂಚಲು ಸಹಾಯವಾಗುತ್ತದೆ. ನೀವು ಕೊಡುವಾಗ ನೀವು ನಜರೇನ್ ಸಭೆಯ ಸಂಪರ್ಕದ ಸಭೆಯ ಭಾಗವಾಗುತ್ತಿರಿ; ನೀವು ಮುರಿದಿರುವ ಜನರನ್ನು ಪ್ರೀತಿಸುತ್ತಿರಿ, ಪ್ರಪಂಚದೆಲ್ಲೆಡೆ ಇರುವ ಕಳೆದುಹೋದ ಆತ್ಮಗಳನ್ನು ತಲುಪಲು ಸಹಾಯ ಮಾಡುವಿರಿ, ಮತ್ತು ಲೋಕದಲ್ಲಿ ಕ್ರಿಸ್ತನ ಮಾದರಿಯ ಶಿಷ್ಯರನ್ನು ತಯಾರು ಮಾಡಲು ಸಹಾಯ ಮಾಡುವಿರಿ.

ವಿಶ್ವ ಸುವಾರ್ತಾ ನಿಧಿ, ಸೇವೆಯ ವಿಶೇಷತೆಗಳು, ಮತ್ತು ಸೇವೆಯ ನಿಧಿಯ ಡಾಲರ್ - ಇವೆಲ್ಲವೂ ಕೂಡ ಜವಾಬ್ದಾರಿ ಹಂಚುವಿಕೆಯ ಭಾಗಗಳು- ಮತ್ತು ಇದರಿಂದ ಸಭೆಯು ಸೇವಕರನ್ನು ಕಳುಹಿಸಲು, ರಾಷ್ಟ್ರೀಯ ನಾಯಕರನ್ನು ತಯಾರು ಮಾಡಲು ಮತ್ತು ಸುವಾರ್ತೆಯನ್ನು ಸಾರಲು ಬೇಕಾದ ತರಬೇತಿ ನೀಡಲು, ಶಿಷ್ಯತ್ವ ನಡೆಸಲು, ಮತ್ತು ನಜರೇನ್ ಸಭೆಯ ಮುಂದಿನ ಪಿಳಿಗೆಯನ್ನು ತರಬೇತಿಗೊಳಿಸಲು ಸಹಾಯವಾಗುತ್ತದೆ.

## ಕ್ರೈಸ್ತವ, ಪರಿಶುದ್ಧತೆ, ಸೇವೆಯ ಉದ್ದೇಶಿತ.

ನಾವು ನಮ್ಮ ಮೊದಲ ಸಾಮಾನ್ಯ ಮೇಲ್ವಿಚಾರಕರಾದ ಫಿನೆಹಾಸ್ ಎಫ್. ಬ್ರಿಸೆ ರವರ ಕನಸಿನ ನೆರವೇರುವಿಕೆಯ ಸಮಯಕ್ಕೆ ಸಾಕ್ಷಿಯಾಗಿದ್ದೇವೆ. ಅವರು ಮೊದಲಿನಿಂದಲೂ ನಜರೇನ್ ಸಭೆಯ "ದೈವಿಕ ದೃಶ್ಯಾವಳಿ" ಎಂಬುದರ ಮಾತಾಡುತ್ತ ನಜರೇನ್ ಸಭೆಯು ವಿಶ್ವವನ್ನು "ಕರ್ತನಿಗಾಗಿ ಪರಿಶುದ್ಧತೆ ಹಾಗೂ ರಕ್ಷಣೆ" ಎಂಬ ಉದ್ದೇಶದಿಂದ ಸುತ್ತುವರೆದಿರುವುದರ ಬಗ್ಗೆ ಹೇಳಿದರು.

ಪ್ರತಿಯೊಬ್ಬ ನಜರೇನ್ ವಿಶ್ವಾಸಿಯು ಅವನು ಅಥವಾ ಅವಳು ಎಲ್ಲೇ ಇರಲಿ, ಈ ದರ್ಶನದ ವಿಶಾಲವಾದ ವಾಸ್ತವಿಕತೆಯಲ್ಲಿ ಜೀವಿಸಬೇಕು.

ಪ್ರತಿಯೊಬ್ಬ ಮಾರ್ಪಾಟು ಹೊಂದಿರುವ ಜೀವನವು ಕೂಡ ವೆಸ್ಲಿಯನ್-ಪರಿಶುದ್ಧತೆಯ ಎಲ್ಲರಿಗೂ ರಕ್ಷಣೆ ಎಂಬ ಭೋಧನೆಗೆ ಸಾಕ್ಷಿಯಾಗಿದೆ.

ಸಭೆಯ ಧೈಯವಾದ "ಲೋಕದ ಎಲ್ಲಾ ಕಡೆಗಳಲ್ಲಿ ಕ್ರಿಸ್ತನ ಮಾದರಿಯ ಶಿಷ್ಯರನ್ನು ತಯಾರು ಮಾಡುವ" ನಮಗೆ ನೀಡಲಾಗಿರುವ ಆತ್ಮಿಕ ಆದೇಶ, ಮತ್ತು ಅದೇ ಸಮಯದಲ್ಲಿ ನಾವು ಒಳ್ಳೆಯ ಪಾರುಪತ್ಯಗಾರರಾಗಿರಬೇಕೆಂದು ನಮ್ಮ ಎಲ್ಲಾ ಸಂಪನ್ಮೂಲಗಳು ಕೂಡ ದೇವರಿಂದ ಪಡೆದಿದ್ದೇವೆ ಎಂದು ಅರಿಯವಂತೆ ಸಹಾಯ ಮಾಡುತ್ತದೆ. ಈ ಸೇವೆಯು ದೇವರಿಂದ ಬಂದ ಸೇವೆಯಾಗಿದೆ, ಅದರ ಅರ್ಥವೆಂದರೆ ನಮ್ಮ ಉದ್ದೇಶವು ಉನ್ನತವಾದ ಆದೇಶವು, ನಮ್ಮಲ್ಲಿ ನೆಲೆಸಿರುವ ಪವಿತ್ರಾತ್ಮನ ಶಕ್ತಿಯಿಂದ ಮಾತ್ರ ಸಾಧ್ಯವಾಗುತ್ತದೆ.

ನಾವು ನಮ್ಮ "ಒಳ್ಳೆಯ ಪರಂಪರೆಯನ್ನು," ಗೌರವಿಸುತ್ತ, ಸಭೆಯು ಹಿಂದಕ್ಕೆ ಹೋಗಬಾರದು- ಅಥವಾ ಇದು ಎಲ್ಲಿದೆಯೋ ಅಲ್ಲೇ ಇರಬಾರದು. ಕ್ರಿಸ್ತನ ಹಿಂಬಾಲಕರಾಗಿ ನಾವು ಆ ಪಟ್ಟಣದ ಕಡೆಗೆ ಮುಂದೆ ಸಾಗಬೇಕು. "ಯಾವುದರ ಶಿಲ್ಪಿಯು ಮತ್ತು ನಿರ್ಮಾಣಕನು ದೇವರು ಆಗಿದ್ದಾನೋ" (ಇಬ್ರಿಯರಿಗೆ 11:10)

ನೋಡಿರಿ, ದೇವರು ಎಲ್ಲವನ್ನೂ ಹೊಸದಾಗಿ ಮಾಡುತ್ತಿದ್ದಾನೆ!